Member's Representations.

Sri S. SIVAPPA (Sravanabelagola).—On the very first day, we left an important issue hanging fire. I am speaking about the short-notice question on Krishna-Godavari waters. The question was then deferred. I do not know how long this House can be kept in suspense regarding a vital matter concerning the State. The whole State is looking to the House regarding this matter. I request the Chair to call upon the Government to make a statement immediately on this important matter.

Mr. SPEAKER.—There are two short-notice questions tabled by Sri Sivappa. One is about the Gold Control Order. I am considering it. I have received a reply from the Hon'ble Minister. I am thinking over it because there is some little conflict. With regard to the 2nd question relating to the Godavari-Krishna issue, I have disallowed it for the reason that the matter can be discussed on occasions more than one. Firstly, the Governor's Address is going to be discussed and then there is the budget debate. Moreover there is no urgency about it. It is not a new matter. It has been there all along.

Sri K. LAKKAPPA (Hebbur).—What about my short-notice question?

Mr. SPEAKER.—Hon. Members must not go on asking for information in the House. If they want, they may walk into my chambers or go tothe Secretary.

I will be happy to receive them.

MYSORE LAND REVENUE CODE, 1962

Motion to consider.

Sri M. V. KRISHNAPPA (Minister for Revenue).—I beg to move:

"That the Mysore Land Revenue Code, 1962, be taken into consideration."

Mr. SPEAKER.—Motion moved :

"That the Mysore Land Revenue Code, 1962, be taken into consideration."

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಈಗ ಸಂಸ್ಥಾನಾಮಳೆ ಜಾರಿಯಲ್ಲಿರುವ ಭೂಕಂದಾಯ ಮತ್ತು ಭೂಮಿಯ ಆಡಳಿತಕ್ಕೆ ಸಂಬಂಧಪಟ್ಟ ಕಾನೂನುಗಳು ಈ ಕನ್ನಡ ರಾಜ್ಯದಲ್ಲಿ ಸೇರಿರತಕ್ಕ ಐದು ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿವೆ. ಹಳೆಯ ಮೈಸೂರು ಭಾಗದಲ್ಲಿ ಸುಮಾರು 80 ವರ್ಷಗಳ ಹಿಂದೆ ಮಾಡಿದ Land Revenue Code ಜಾರಿಯಲ್ಲಿದೆ. ಸ್ವಲ್ಪ ಹೆಚ್ಚು ಕಡಮೆ ಬೊಂಬಾಯಿ ಮತ್ತು ಹೈದರಾಬಾದ್ ಭಾಗಗಳಲ್ಲಿ ಕೂಡ ಕೆಲವು ವಿವರಗಳನ್ನು ಬಿಟ್ಟರೆ ಹಳೆಯ ಮೈಸೂರು ಸಂಸ್ಥಾನದಲ್ಲಿದ್ದ ರೀತಿಯಲ್ಲಿಯೇ ಜಾರಿಯಲ್ಲಿದೆ. ಕೊಡಗಿನದೇ ಒಂದು special feature. ಅವರು ಒಂದು revenue regulation ಮಾಡಿಕೊಂಡು ಅದರ ಪ್ರಕಾರ ನಡೆಸಿ ಕೊಂಡು ಹೋಗುತ್ತಿದ್ದರು. ಮದ್ರಾಸ್‌ನಿಂದ ಬಂದ ಕನ್ನಡ ಭಾಗಗಳಲ್ಲಿ ರೆವಿನ್ಯೂ ಕೋಡ್ ಅಥವಾ ಒಂದು codified law ಇಲ್ಲ. ಅಲ್ಲಿ ರೆವಿನ್ಯೂ ಬೋರ್ಡ್ ಎಂದು ಮಾಡಿ special orders ಮಾಡಿಕೊಂಡು Board's Standing Orders (B.S.O.) ಪ್ರಕಾರ ಮದ್ರಾಸಿನಿಂದ ಬಂದ ದಕ್ಷಿಣ ಕನ್ನಡ, ಕೊಳ್ಳೇಗಾಲ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಭೂಕಂದಾಯ ಮತ್ತು ಭೂ ಆಡಳಿತ ಕಾನೂನು

(ಶ್ರೀ ಎಂ. ವಿ. ಕೃಷ್ಣಪ್ಪ)

ಗಳು ನಡೆದುಕೊಂಡು ಹೋಗುತ್ತಿವೆ. ಇವೊತ್ತು ಕನ್ನಡ ದೇಶವೆಲ್ಲಾ ಒಂದಾಗಿದೆ. ಈ ದೇಶದಲ್ಲಿರುವ ಐದು ಭಾಗಗಳಲ್ಲಿಯೂ ಐದು ವಿಧವಾದ ಕಾನೂನುಗಳಿವೆ. ಅವನ್ನೆಲ್ಲ ಕ್ರೋಢೀಕರಿಸಿ ಒಂದೇ ವಿಧವಾದ ಕಾನೂನನ್ನು ಈ ಮೊದಲೇ ಮಾಡಬೇಕಾಗಿತ್ತು. ಆದರೆ ಇದು ಭೂಮಿಗೆ ಸಂಬಂಧಪಟ್ಟ ಕಾನೂನು. ಇದನ್ನು ಸರ್ವೇ ಸಾಮಾನ್ಯವಾಗಿ ಸುಮಾರು ನೂರಕ್ಕೆ 80—85 ಜನ ತಿಳಿಯದವರು ಇದ್ದಾರೆ. ಇದರ ಪರಿಣಾಮವಾಗಿ ಅಷ್ಟು ಬೇಗ ಇವರಿಗೆ ತೊಂದರೆ ಮಾಡಬಾರದು, ಸ್ವಲ್ಪ ಹೊಸ ಸಂಸ್ಥಾನಕ್ಕೆ ಹೊಂದಿಕೊಂಡು ಬರುವವರೆಗೆ ಈ ಕಾನೂನು ಬೇರೆ ಬೇರೆ ರೀತಿಯಲ್ಲಿ ಬಂದದ್ದನ್ನು ಹಾಗೇ ನಡೆದುಕೊಂಡು ಬರಲಿ, ಎನ್ನುವ ಉದ್ದೇಶದಿಂದ ಇವರೆಗೂ ನಮ್ಮ ದೇಶದಲ್ಲಿ ಹೈದರಾಬಾದಿನ ಭಾಗದ ಕಾನೂನು ಹಾಗೇ ಇದೆ. ಕೊಡಗಿನ ಭಾಗದ ಕಾನೂನು ಹಾಗೇ ಇದೆ, ಬೊಂಬಾಯಿ ಭಾಗದ ಕಾನೂನು ಹಾಗೇ ಇದೆ. ಹೀಗೆ ಬೇರೆ ಬೇರೆಯಾದ ಕಾನೂನುಗಳನ್ನು ಸೇರಿಸಿ ಸಂಸ್ಥಾನಾವಳಿ ಒಂದೇ ರೀತಿಯಾದ ಏಕರೂಪವಾದ ಕಾನೂನನ್ನು ಮಾಡಬೇಕೆಂದಿತ್ತು. ಕನ್ನಡ ದೇಶವೆಲ್ಲಾ ಒಂದಾಗಿ ಸುಮಾರು ಆರೇಳು ವರ್ಷಗಳಾದುವು. ಇನ್ನೂ ಏನೂ ಮಾಡಲಿಲ್ಲ. ಇದು ಬಹು ಮುಖ್ಯವಾದ ಮತ್ತು ತ್ವರಿತವಾಗಿ ಮಾಡಬೇಕಾದ ಕಾನೂನಾಗಿತ್ತು ಎಂದು ನನಗೂ ಅನಿಸಿತ್ತು. ಇದರಿಂದ ಅವಶ್ಯಕತೆ ಇದೆ ಎಂದು ಈ ಲ್ಯಾಂಡು ರೆವಿನ್ಯೂ ಕೋಡನ್ನು ಈ ಸಭೆಯ ಮುಂದೆ ತರಲಾಗಿದೆ, ಇದರಲ್ಲಿ ಸುಮಾರು 15 chapters ಮತ್ತು 200 ಕ್ಲಾಸುಗಳಿವೆ. ಮುಖ್ಯವಾದ ನಾಲ್ಕೈದು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ.

ಮೊದಲನೇದಾಗಿ, ಭೂಮಿಯ ಆಡಳಿತವೂ ಬಹಳ ಬದಲಾವಣೆಯಾಗಿದೆ. ಭೂಕಂದಾಯದ ವಿಷಯವನ್ನು ಹೇಳಬೇಕಾದರೆ, ಭೂಮಿಯ ಪದ್ಧತಿಯೂ ಕೂಡ ಬೇರೆ ಪ್ರಾಂತದಿಂದ ಬಂದಿರುವುದರಿಂದ ಅದಕ್ಕೆ ಸಂಬಂಧಪಟ್ಟ ಆಡಳಿತದಲ್ಲೂ ಬಹುಮಟ್ಟಿಗೆ ಬದಲಾವಣೆಯಾಗಬೇಕಾಗಿದೆ. ಈಗ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಬ್ಬರೇ ಜಿಲ್ಲಾಧಿಕಾರಿಗಳು ಇರುತ್ತಾರೆ. ಜಿಲ್ಲೆಯ ಎಲ್ಲ ಕೆಲಸ ಕಾರ್ಯಗಳಿಗೂ ಅವರೇ ಜವಾಬುದಾರರಾಗಿರುತ್ತಾರೆ. ಈಗ ಅವರಿಗೆ ಕೆಲಸ ಕಾರ್ಯಗಳು ಹೆಚ್ಚಾಗಿ ಅವರ ಕ್ಷೇತ್ರ ಬಹಳ ದೊಡ್ಡದಾಗಿದೆ. ಜಿಲ್ಲಾಧಿಕಾರಿಗಳು ಬಹುಮಟ್ಟಿಗೆ Developmental Activities ಗಳ ಕಡೆಗೆ ಗಮನಕೊಡಬೇಕಾಗಿದೆ. ಅಭಿವೃದ್ಧಿ ಕೆಲಸಗಳಿಗೇ ಹೆಚ್ಚಾಗಿ ಗಮನಕೊಡಬೇಕಾಗಿ ಬಂದಿರುವುದರಿಂದ ರೆವೆನ್ಯೂ ಬಾಬಿನ ಕೆಲಸಗಳನ್ನು ಮಾಡಲು ಹೆಚ್ಚಿನ ಕಾಲ ಸಿಕ್ಕುವುದಿಲ್ಲ. ಅದೂ ಅಲ್ಲದೆ ಕೆಲವು ಜಿಲ್ಲೆಗಳೂ ದೊಡ್ಡದಾಗಿವೆ. ಜಿಲ್ಲೆಯ ಆಡಳಿತ ಕ್ಷೇತ್ರವೂ ಬಹಳ ವಿಸ್ತಾರವಾಗಿದೆ. ಅದರಿಂದ ಅನೇಕ ಹೊಸ ಹೊಸ ರೀತಿಯ ಜವಾಬುದಾರಿಗಳನ್ನು ಅವರಿಗೆ ವಹಿಸಲಾಗಿದೆ. ಕೆಲವು ಜಿಲ್ಲೆಗಳಲ್ಲಿ ಪ್ಯಾಕೇಜು ಡೀಲ್ ಬಂದಿದೆ. ಪ್ಯಾಕೇಜು ಡೀಲ್‌ನ್ನು ತಂದು ರೈತರಿಗೆ ಬೇಕಾಗುವ ಗೊಬ್ಬರ ಮತ್ತು ವ್ಯವಸಾಯೋಪಕರಣಗಳನ್ನು ಕೊಟ್ಟು ಅಭಿವೃದ್ಧಿಮಾಡಬೇಕೆಂದು ಈ ಸ್ಕೀಮನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಮಂಡ್ಯ ಜಿಲ್ಲೆಯಲ್ಲಿ ಈ ಪ್ಯಾಕೇಜು ಡೀಲ್ ಯೋಜನೆ ನಡೆಯುತ್ತಿದೆ. ಅದೇ ರೀತಿ ಮುಂದೆ ಮಂಗಳೂರು, ಶಿವಮೊಗ್ಗ ಹೀಗೆ ಎಲ್ಲೂ ಪ್ರಾಂತದಲ್ಲೂ ತಂದು ವ್ಯವಸಾಯ ಮಾಡುವುದಕ್ಕೆ ಅನುಕೂಲಮಾಡಬೇಕೆಂದಿದೆ. ಈ ರೀತಿ ಎಲ್ಲ ಜಿಲ್ಲೆಗಳಿಗೂ ಇದನ್ನು ತರುವ ಸಂಭವವಿದೆ. ನಾನು ಹಿಂದೆ ಸೆಂಟ್ರಲ್ ಗವರ್ನಮೆಂಟಿನಲ್ಲಿ ಮಿನಿಸ್ಟರಾಗಿದ್ದಾಗ ಈ ಪ್ಯಾಕೇಜು ಡೀಲ್ ಸ್ಕೀಮನ್ನು ಹಿಂದೂಸ್ತಾನದಲ್ಲೆಲ್ಲಾ ತರುವ ಉದ್ದೇಶವಿದೆ ಎಂದು ಹೇಳಲಾಗಿತ್ತು. ಅದೇ ರೀತಿ ನಮ್ಮ ಸಂಸ್ಥಾನದಲ್ಲೂ ಕೆಲವು ಜಿಲ್ಲಾಧಿಕಾರಿಗಳು ಪ್ಯಾಕೇಜು ಡೀಲನ್ನು ಅನ್ವಯಿಸುತ್ತಿದ್ದಾರೆ. ಪೂರ್ವದಲ್ಲಿ ನಮ್ಮ ರೆವೆನ್ಯೂ ಆಡಳಿತದಲ್ಲಿ ಈ ರೀತಿಯಾದ ಡೆವಲೆಪ್‌ಮೆಂಟಲ್ ಆಕ್ಟಿವಿಟೀಸ್‌ಗಳಿರಲಿಲ್ಲ, ಎನ್. ಇ. ಎಸ್. ಬ್ಲಾಕುಗಳಿರಲಿಲ್ಲ. ಈಗ ಈ ಮೂರು ಆಡಳಿತಗಳೂ, ಜಿಲ್ಲಾಧಿಕಾರಿಗಳಿಗೇ ಸೇರಿವೆ. ಕೆಲವು ಕಡೆ ಜಿಲ್ಲಾಧಿಕಾರಿಗಳಿಗೆ ಕಾಗದಗಳನ್ನು ಸೈನುಮಾಡುವುದಕ್ಕೂ ಸೌಕರ್ಯಗಳಿಲ್ಲದೆ ಬಹಳ ತೊಂದರೆಯಾಗಿದೆ. ಅನೇಕ ಜಿಲ್ಲೆಗಳಿಗೆ ಅಡಿಷನಲ್ ಡೆಪ್ಯುಟೀ ಕಮಿಷನರುಗಳು ಬೇಕಾಗಿದೆ. ಅದರಲ್ಲೂ ಹೊಸ ಪ್ರಾಂತವಾದ ಮೇಲೆ ನಮಗೆ ಬಂದಿರುವ ಧಾರವಾಡ, ಬೆಳಗಾಂ ಮತ್ತು ಮಂಗಳೂರು ಜಿಲ್ಲೆಗಳು ಬಹಳ ದೊಡ್ಡ ಜಿಲ್ಲೆಗಳು ಮೈಸೂರಿಗೆ ಬಂದು ಸೇರಿವೆ. ಹಿಂದಿದ್ದ ರೆವೆನ್ಯೂ ಕೋಡಿನಲ್ಲಿ ಅಡಿಷನಲ್ ಡೆಪ್ಯುಟೀ ಕಮಿಷನರುಗಳನ್ನು ನೇಮಕಮಾಡುವುದಕ್ಕೆ ಅಧಿಕಾರವಿರಲಿಲ್ಲ. ಅದಕ್ಕಾಗಿ ಒಂದು ಆಕ್ಟನ್ನು ಮಾಡಿ ಇತ್ತೀಚೆಗೆ ಅಡಿಷನಲ್ ಡೆಪ್ಯುಟಿ ಕಮಿಷನರನ್ನು ಅಪಾಯಿಂಟು ಮಾಡಬಹುದು ಎಂದು ಈ ಸಭೆ ಒಪ್ಪಿಗೆಯನ್ನು ಕೊಟ್ಟಿತ್ತು. ಇದೇ ರೀತಿ ತಾಲ್ಲೂಕುಗಳಲ್ಲಿರುವ ತಹಶೀಲುದಾರರಿಗೂ ಅವರ ಜವಾಬುದಾರಿಗಳು ಜಾಸ್ತಿಯಾಗುತ್ತಿವೆ. ಅದೂ ಅಲ್ಲದೆ ಕೆಲವು ಕಡೆ ತಾಲ್ಲೂಕುಗಳ ತಹಶೀಲುದಾರರುಗಳಿಗೆ ಆಕ್ವಿಜಿಷನ್ನು ಕೇಸುಗಳು, ಇನಾಂತಿಯ ರದ್ದಿಯಾತಿ,

ಇತ್ಯಾದಿ ಕೆಲಸಗಳನ್ನು ವಹಿಸಿರುವುದರಿಂದ ಅನೇಕ ತಾಲ್ಲೂಕುಗಳಲ್ಲಿ ಅವರ ಭಾರ ಜಾಸ್ತಿಯಾಗುತ್ತಿದೆ. ಅಂತಹ ಸಂದರ್ಭ ಬಂದರೆ ಡೆಪ್ಯುಟೀ ತಹಶೀಲುದಾರರುಗಳನ್ನು ನೇಮಕಮಾಡಿಕೊಳ್ಳಬಹುದು ಎಂದು ಈ ರೆವೆನ್ಯೂ ಕೋಡಿನಲ್ಲಿದೆ, ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಅಡಿಷನಲ್ ತಹಶೀಲುದಾರರುಗಳು ಇರಬಹುದು ಎನ್ನುವ ಅವಕಾಶವನ್ನು ಇಲ್ಲಿ ಒದಗಿಸಿಕೊಟ್ಟಿದೆ. ಈಗ ಡೆಪ್ಯುಟೀ ತಹಶೀಲುದಾರರ ಹುದ್ದೆಗಳಿಲ್ಲ.

ಎರಡನೆಯದಾಗಿ, ಮುಖ್ಯವಾದುದು ಮೈಸೂರು ಸಂಸ್ಥಾನದಲ್ಲಿ ರೆವೆನ್ಯೂ ಅಪಲೇಟ್ ಟ್ರಿಬ್ಯುನಲ್ ಇಲ್ಲದೇ ಇರುವುದು, ಈಗಿರುವ ಟ್ರಿಬ್ಯುನಲ್‌ನಲ್ಲಿ ಕೆಲವು ಫಂಕ್ಷನ್ನುಗಳು ಸ್ಪೆಸಿಫಿಕ್ ಆಗಿ ಇಲ್ಲ. ಇದರಲ್ಲೂ ಕೆಲವು ನ್ಯೂನತೆಗಳಿರುವುದರಿಂದ ಸ್ವಲ್ಪ ತೊಂದರೆ ಇದೆ. ಹಿಂದೆ ಇದ್ದ ರೆವೆನ್ಯೂ ಕೋಡಿನಲ್ಲಿ ಇದಿರಲಿಲ್ಲ. ಈಗಿರುವ ಕೋಡಿನಲ್ಲಿ ಇದನ್ನೆಲ್ಲಾ ಸೇರಿಸಿ ರೆವೆನ್ಯೂ ಟ್ರಿಬ್ಯುನಲ್ಲಿನ ಡೆಫಿನಿಷನ್ನು ಅದರ ಕಾರ್ಯಕ್ಷೇತ್ರ ಎಲ್ಲವನ್ನೂ ಡಿಫೈನು ಮಾಡಿಬಿಟ್ಟಿದ್ದೇವೆ.

ಮೂರನೇಯದು ಬಹಳ ಮುಖ್ಯವಾದುದು ಸೆಟಲ್‌ಮೆಂಟಿಗೆ ಸಂಬಂಧಪಟ್ಟದ್ದು. ಈಗ ಮೈಸೂರು ಸಂಸ್ಥಾನದಲ್ಲಿ ಭೂಕಂದಾಯದ ಪದ್ಧತಿ ಬೇರೆ ಬೇರೆ ರೀತಿಯಲ್ಲಿರುವುದು ತಮಗೂ ಗೊತ್ತು. ಕೆಲವು ಕಡೆ ಹೊಸದಾಗಿ ಬಂದಿರುವ ಪ್ರಾಂತದಲ್ಲಿ ಕಂದಾಯ ಹೆಚ್ಚು ಕೊಡುತ್ತಿದ್ದಾರೆ. ಸೌತ್ ಕೆನರಾ ಮತ್ತು ಬೆಳಗಾಂ ಡಿವಿಜನ್ ಜನರು ಹೆಚ್ಚಾಗಿ ಕಂದಾಯ ಕೊಡುತ್ತಿದ್ದಾರೆ. ಹಳೆಯ ಮೈಸೂರಿನ ಒಂಭತ್ತು ಜಿಲ್ಲೆಗಳಲ್ಲಿ ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ನಮ್ಮ ಕೋಲಾರ ಜಿಲ್ಲೆಯಲ್ಲೇ ಜನ ಹೆಚ್ಚಾಗಿ ಕಂದಾಯ ಕೊಡುತ್ತಿದ್ದಾರೆ, ಈ ಹಿಂದೆ ಕೋಲಾರ ಜಿಲ್ಲೆಗೆ ಬಾಂದು ಕಲ್ಲನ್ನಿಡಲು ಸರ್ವೇಯರುಗಳು ಬಂದಾಗ ಅವರಿಗೆ ಕೋಳಿ ಕುಯ್ದು ಕೊಡಲಿಲ್ಲ ಎಂದು ಆಗ ಕೋಲಾರ ಜಿಲ್ಲೆಯ ಜನರ ಮೇಲೆ ಜಾಸ್ತಿ ಕಂದಾಯ ಮಾಡಿದರು ಎನ್ನುವ ಒಂದು ಮಾತನ್ನೂ ಹೇಳುತ್ತಾರೆ. ನಮ್ಮ ಹಿಂದೂಸ್ಥಾನಕ್ಕೆ ಬೇಕಾದ ಚಿನ್ನವೆಲ್ಲಾ ನಮ್ಮ ಕೋಲಾರ ಜಿಲ್ಲೆಯಲ್ಲೇ ಸಿಕ್ಕುತ್ತಿದೆ ಎಂದೂ ಇದು rich district ಆಗಿದೆ ಎಂದೂ ಈ ಜಿಲ್ಲೆಯ ಜನಗಳ ಮೇಲೆ ಹೆಚ್ಚಿನ ಕಂದಾಯ ಹಾಕಿದರು ಎಂದೂ ಹೇಳುತ್ತಾರೆ. ಆದುದರಿಂದ ಸಂಸ್ಥಾನಾದ್ಯಂತ ಏಕರೂಪವಾದ ಮತ್ತು ಶಾಸ್ತ್ರೀಯವಾದ (Scientific) ರೀತಿಯಲ್ಲಿ, ಭೂಮಿಯ ಸಾರ ಎಂದರೆ fertility ಮತ್ತು ಅದರ ಸನ್ನಿವೇಶಗಳನ್ನೆಲ್ಲಾ ನೋಡಿಕೊಂಡು ಕಂದಾಯ ಹಾಕಬೇಕಾದ್ದು ನ್ಯಾಯ. ಅದಕ್ಕೋಸ್ಕರ ಈ ಸರ್ವೆ ರೀಸೆಟಲ್‌ಮೆಂಟು ಕೆಲಸವನ್ನು ಪೂರ್ತಿಮಾಡಬೇಕೆಂದು ಪ್ರಯತ್ನಮಾಡುತ್ತಿದ್ದೇವೆ. ಈಗಾಗಲೇ ಮುಕ್ಕಾಲು ಭಾಗದ ಕೆಲಸ ಮುಗಿದಿದೆ. ಇನ್ನು ಒಂದು, ಒಂದೂವರೆ ವರ್ಷಗಳಲ್ಲಿ ಈ ಕೆಲಸ ಮುಗಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡು ಸರಕಾರದವರು ಆತುರಾತುರವಾಗಿ ಮಾಡುತ್ತಿದ್ದಾರೆ. ಇದು ನಿಧಾನವಾಗಲು ಸಂಸ್ಥಾನದಲ್ಲಿ ಹೆಚ್ಚಿಗೆ ಹಣದ ಅಭಾವವಿತ್ತು ಎಂದು ತಮಗೂ ಗೊತ್ತೇ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ರೈತರ ಮೇಲೆ ಈಗಾಗಲೇ ರೆವೆನ್ಯೂ ಸರ್‌ಚಾರ್ಜನ್ನು ವಿಧಿಸಲಾಗಿದೆ. ಈ ಸರ್‌ಚಾರ್ಜು ಹೋಗಬೇಕಾದರೆ, ನಾವು ಸೈಂಟಿಫಿಕ್ ಬೇಸಿಸ್ಸಿನ ಮೇಲೆ ಕಂದಾಯ ಹಾಕಬೇಕೆಂದು ಈ ಸರ್ವೆ ಸೆಟಲ್‌ಮೆಂಟನ್ನು ಆದಷ್ಟು ಬೇಗ ಮುಗಿಸುತ್ತಿದ್ದೇವೆ. ಈ ಕಾನೂನಿನಿಂದ ನ್ಯಾಯವಾದ ಮತ್ತು ಶಾಸ್ತ್ರೀಯವಾದ ಕಂದಾಯವನ್ನು ವಿಧಿಸಬೇಕೆಂದಿದೆ. ಸಾಮಾನ್ಯವಾಗಿ ಡ್ರೈರೇಟುಗಳನ್ನು ಹಾಕಬೇಕೆಂದಿದ್ದೇವೆ. ಸುಮಾರು ಮೂರು ಕೋಟಿ ಎಕರೆಗಳಷ್ಟು ಭೂಮಿಯಲ್ಲಿ 70—80 ಲಕ್ಷ ಎಕರೆಗಳಿಗೆ dry assessment rates per acre ಗೆ ಇಷ್ಟು ಎಂದು ನಿಗದಿಮಾಡಬೇಕಾಗಿದೆ. ಸೈಂಟಿಫಿಕ್ ಆಗಿ ಭೂಕಂದಾಯ ಫಿಕ್ಸ್ ಮಾಡುವುರಿಂದ ಸುಮಾರು ಮೂರು-ನಾಲ್ಕು ಕೋಟಿ ರೂಪಾಯಿ ಉತ್ಪನ್ನ ಜಾಸ್ತಿ ಬರುತ್ತದೆ. ಭೂಕಂದಾಯ ಗೊತ್ತುಮಾಡುವಾಗ್ಯೆ, ವೆಟ್, ಸೆಮಿ ವೆಟ್, ಗಾರ್ಡನ್ ಲ್ಯಾಂಡ್ಸ್ ಎಂದು ವಿಭಾಗ ಮಾಡಲಾಗುವುದು. ಒಂದು ಎಕರೆ ಕಾಫಿ, ಅಡಕೆ ತೋಟದಲ್ಲಿ ಹೆಚ್ಚು ಸಂಪಾದನೆಯಾಗುವುದರಿಂದ ಜಾಸ್ತಿ ಕಂದಾಯ ಕೊಡಬೇಕಾಗುವುದು. ಒಂದು ಎಕರೆ ಭೂಮಿಯಲ್ಲಿ ಭತ್ತ ಬೆಳೆದರೆ ಕಡಮೆ ಸಂಪಾದನೆಯಾಗುವುದರಿಂದ ಕಡಮೆ ಕಂದಾಯ ಕೊಡಬೇಕಾಗುತ್ತದೆ. ಆದ್ದರಿಂದ ಸೈಂಟಿಫಿಕ್ ಆಗಿ ಕಂದಾಯ ಹಾಕಲಾಗುವುದು. ಇದರಿಂದ ಮೂರು-ನಾಲ್ಕು ಕೋಟಿ ರೂಪಾಯಿ ಹೆಚ್ಚು ಉತ್ಪನ್ನ ಬರುವುದು. ಈಗ ಹಾಕಲಾಗಿರುವ ಸರ್ ಚಾರ್ಜ್ ಅಗ್ಗೆ ತೆಗೆದುಹಾಕಬಹುದು. ನ್ಯಾಯವಾದ ರೀತಿಯಲ್ಲಿ ಸರ್ವೇ ಸೆಟಲ್‌ಮೆಂಟ್ ಆದಮೇಲೆ ಅಸೆಸ್‌ಮೆಂಟ್ ಹಾಕಲಾಗುವುದು. ಅಧಕ್ಕೆ ಇನ್ನೂ ಅವಧಿ ಬೇಕು. ಅದಕ್ಕಾಗಿ ಈಗ ತುರ್ತು ಪರಿಸ್ಥಿತಿಯಲ್ಲಿ ಸರ್ ಚಾರ್ಜ್ ಹಾಕಬೇಕಾಗಿದೆ. ಇದು ಆದಷ್ಟು ಬೇಗ ಹೋಗಬೇಕು ಅಂದರೆ ಸರಿಯಾಗುತ್ತದೆ. ರಿಕಾರ್ಡ್ ಆಫ್ ರೈಟ್ಸ್‌ಗಳಲ್ಲಿ ನ್ಯೂನತೆಗಳು ಇವೆ. ಅವುಗಳನ್ನು ಸರಿಪಡಿಸುತ್ತೇವೆ. ಇನ್ನು ಹಳ್ಳಿಗಳಲ್ಲಿ ಎಲ್ಲೆಯ (ಬೌಂಡರೀಜ್) ವಿಷಯದಲ್ಲಿ ಇಲ್ಲಿಯವರೆಗೆ ಯಾರಮೇಲೂ ಜವಾಬ್ದಾರಿಯಿರಲಿಲ್ಲ. ಈಗ ಜವಾಬ್ದಾರಿ ಹೊರಿಸುತ್ತೇವೆ. ಎಲ್ಲಾದರೂ ಬೌಂಡರಿ ಕಲ್ಲು ಕಿತ್ತಿದ್ದರೆ ಗ್ರಾಮಾಧಿಕಾರಿಗಳು ಜವಾಬ್ದಾರರಾಗಬೇಕಾಗುತ್ತದೆ. ಸದ್ಯಕ್ಕೆ ಬೇರೆ ಬೇರೆ ಪ್ರದೇಶದಲ್ಲಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಬೇರೆ ಬೇರೆ ಕಾನೂನ ಜಾರಿಯಲ್ಲಿದೆ. ಬೆಂಗಳೂರು ಸಿಟಿಯಲ್ಲಿ ಸರ್ವೆಯಾಗಿಲ್ಲ. ಇದರಿಂದ ಜನರಿಗೆ ತೊಂದರೆಯಾಗಿದೆ. ಸರ್ವೆ ಮಾಡುವುದು ಬಹಳ ಅಗತ್ಯವಾಗಿದೆ. ನಮ್ಮ ತಾತಂದಿರಾದ ನರಸಿಂಹೇ ಗೌಡರ ಕಾಲದಲ್ಲಿ ರಂಗಾಚಾರ್ಲು ದಿವಾನರಾಗಿದ್ದಾಗ ಯಾವರೀತಿಯಾಗಿ ಇದ್ದಿತೋ ಅದೇ ರೀತಿ ಯಾಗಿ ಇಂದಿನವರೆಗೆ ನಡೆದುಕೊಂಡು ಬಂದಿದೆ. ಅವರ ಮೊಮ್ಮಗನಾದ ನಾನು ಈಗ ತಿದ್ದುಪಡಿ ಮಾಡಬೇಕಾಗಿದೆ. ಆದುದರಿಂದ ಈಗ ಈ ಮಸೂದೆಯನ್ನು ಸಭೆಯ ಮುಂದೆ ಇಡುತ್ತೇನೆ. ಮಾನ್ಯ ಸದಸ್ಯರು ಈ ಮಸೂದೆಯನ್ನು ಒಪ್ಪಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಈಗತಾನೆ ಮಾನ್ಯ ಕಂದಾಯ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುತ್ತಾ ಅವರ ತಾತನ ಕಾಲದಿಂದಲೂ ಇದ್ದಂಥ ಮಸೂದೆಯನ್ನು ಅವರ ಮೊಮ್ಮಕ್ಕಳಾದ ಅವರು ಇವತ್ತಿನ ದಿವಸ ಹೊಸ ರೀತಿಯಲ್ಲಿ ತಿದ್ದುಪಡಿ ಮಾಡಿ ಈ ಸಭೆಯ ಮುಂದೆ ಇಡಲು ಅವಕಾಶವಾಯಿತು ಎಂದು ಹೇಳುತ್ತಾ ಅವರು ತಮ್ಮ ಭುಜ ವನ್ನು ಚಪ್ಪರಿಸಿಕೊಂಡಿದ್ದಾರೆ. ಈ ಮಸೂದೆಯಿಂದ ನನಗೆ ಪೂರ್ಣ ನಿರಾಶೆಯಾಗಿದೆ. ಹಳೇ ಕಂದಾಯ ಪದ್ಧತಿಯನ್ನು ಮುಂದುವರಿಸಿಕೊಂಡು ಬರುವಹಾಗೆ ಈ ಮಸೂದೆಯಲ್ಲಿ ಅಡಕವಾಗಿದೆ. ಒಂದು ಹೆಜ್ಜೆ ಹಿಂದಕ್ಕೆ ಹೋಗಿದೆಯೇ ಹೊರತು ಮುಂದಕ್ಕೆ ಹೋಗಿಲ್ಲ. ಪಂಚಾಯಿತಿ ರಾಜ್ಯ ಸ್ಥಾಪನೆ ಮಾಡಲಾಗುವುದು ಎಂದು ಹೇಳುತ್ತಾರೆ. ಆಡಳಿತ ಪುನರ್ವಿಂಗಡಣೆ ಮಾಡಿ ಜನ ಪ್ರತಿನಿಧಿ ತಯಾರುಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆನು. ಆದರೆ ಈಗ ಏನಾಗಿದೆ ಎಂದರೆ ಒಂದು ಜಿಲ್ಲೆಗೆ ಇಬ್ಬರು ಜಿಲ್ಲಾಧಿಕಾರಿಗಳು, ಒಂದು ತಾಲ್ಲೂಕಿಗೆ ಇಬ್ಬರು ತಹಶೀಲದಾರರು ಇರುವುದಕ್ಕೆ ಈ ಮಸೂದೆಯಲ್ಲಿ ಅವಕಾಶವಿರುವುದರಿಂದ ಯಾವ ಫಲ ಸಾಧಿಸಿದಂತಾಗುತ್ತದೆ? ಸಾಮ್ರಾಜ್ಯಶಾಹಿ ಆಡಳಿತ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಆದುದರಿಂದ ಪೂರ್ಣವಾಗಿ ನಿರಾಶೆಯಾಗಿದೆ. ನಮ್ಮ ದೇಶದಲ್ಲಿ ಪಂಚಾಯಿತಿ ರಾಜ್ಯಸ್ಥಾಪನೆ ಮಾಡುವ ಮುಖ್ಯ ಉದ್ದೇಶವೇನು? ಅಧಿಕಾರವಿಕೇಂದ್ರೀಕರಣಮಾಡಿ ಪಾರ್ಲಿಮೆಂಟರಿ ಆಡಳಿತ ಪದ್ಧತಿ ಜಾರಿ ಮಾಡ ಬೇಕು. ಇದು ಮುಖ್ಯ ಉದ್ದೇಶವಾಗಿತ್ತು.

The House adjourned for recess at Ten of the Clock and reassembled at Thirty Minutes past Ten of the Clock.

[MR. DEPUTY SPEAKER in the Chair]

Sri ANNA RAO GANAMUKHI.—Mr. Speaker, Sir, before we start, I want to request you to let us know about the holiday on Monday; we are all very anxious to get a holiday on Monday.

Mr. DEPUTY SPEAKER.—That point will be considered after the Speaker comes.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೆ, ಈ ಭೂಮಸೂದೆಯ ಮೇಲೆ ಮಾತನಾಡುತ್ತಾ, ಅಡಿಷನಲ್ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡತಕ್ಕಂಥ ಕಲಮಿನ ಬಗ್ಗೆ ಹೇಳಿದೆ. ಈಗ ನಮ್ಮ ದೇಶದಲ್ಲಿ ಒಂದು ಸಮಗ್ರವಾಗಿ ಅಧಿಕಾರಿಗಳನ್ನು ವ್ಯವಸ್ಥೆ ಮಾಡತಕ್ಕಂಥ ವಿಚಾರದಲ್ಲಿ ಒಂದು ಸಮಗ್ರವಾದ ನೀತಿ ನಮ್ಮ ದೇಶದಲ್ಲಿಲ್ಲ. ಏತಕ್ಕೆಂದರೆ ಈ ಪಂಚಾಯಿತಿ ರಾಜ್ಯ ಬಂದಮೇಲೆ ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಜಿಲ್ಲಾ ಅಭಿವೃದ್ಧಿ ಮಂಡಳಿಗಳ ಕಾನೂನು ಪ್ರಕಾರ, ಈಗ ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಒಂದೇ ಕೆಲಸವನ್ನು ಇಬ್ಬರು ಅಧಿಕಾರಿಗಳು ಮಾಡ ತಕ್ಕಂಥ ಸಂಭವವಿದೆ. ಒಂದು ತಾಲ್ಲೂಕನ್ನೇ ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಇವತ್ತಿನ ದಿವಸ ತಾಲ್ಲೂಕು ಮಟ್ಟದಲ್ಲಿ ಅಮಲ್ದಾರರ ಕೆಲಸ ಏನು? ಬಿ.ಡಿ.ಓ ಕೆಲಸವೇನು? ಒಂದೊಂದು ತಾಲ್ಲೂಕಿಗೆ ಇಬ್ಬರು-ಇಬ್ಬರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳು ಇದ್ದಾರೆ. ಇವರ ಅಧಿಕಾರ ಏನು ಎನ್ನತಕ್ಕಂಥಾದ್ದನ್ನು ನಾವು ವಿಮರ್ಶೆಮಾಡಬೇಕಾಗಿದೆ. ನಾವೂ ನೀವೂ ಕಂಡಹಾಗೆ ತಾಲ್ಲೂಕು ಮಟ್ಟದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ ಮತ್ತು ತಹಸೀಲ್ದಾರರ ಕೆಲಸ ಹೆಚು

ಕಡಿಮೆ ಒಂದೇ ಆಗಿದೆ. ತಹಸೀಲ್‌ದಾರರದು ಏನು ಕೆಲಸ ಬಿ.ಡಿ. ಓದು. ಏನು ಕೆಲಸ ಎಂದು ನಿರ್ದಿಷ್ಟವಾಗಿ ಯಾವುದೂ ಕೂಡ ಒಂದು ರೂಪತಾಳಿಲ್ಲ. ಬಿ.ಡಿ. ಓದು. ಪಂಚಾಯಿತಿಯ ಮೇಲೆ ಅಧಿಕಾರ ಚಲಾವಣೆ ಮಾಡುತ್ತಾರೆ; ಹಾಗೆಯೇ ಅಮಲ್ದಾರರು ಕಂದಾಯ ವಸೂಲು ಮಾಡಲು ಬರುತ್ತಾರೆ. ಇದರಿಂದ ಒಂದಕ್ಕೊಂದಕ್ಕೆ Confusion, overlapping, ಆಗಿದೆ. ಹೀಗೆ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಇದ್ದೀರಿ. ಅಧಿಕಾರವನ್ನು ವಿಕೇಂದ್ರೀಕಾರಣಮಾಡತಕ್ಕಂಥ ಸಮಯದಲ್ಲಿ ಯಾರ ಯಾರ ಅಧಿಕಾರ ಎಷ್ಟೆಷ್ಟು ಎಂದು ನಿರ್ದಿಷ್ಟವಾಗಿ ಮಾಡಿಲ್ಲ. ಇದರಿಂದ ದೇಶದಲ್ಲಿ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಜಾಸ್ತಿಯಾಗಿದ್ದಾರೆಯೇ ಹೊರತು ಕೆಲಸ ಮಾತ್ರ ಆಗಿಲ್ಲ. ತಹಸೀಲ್‌ದಾರರಿಗೆ ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಿಗೆ ಇಬ್ಬರಿಗೂ ಒಂದೇ ಕೆಲಸ. ಪಂಚಾಯಿತಿಗೆ ಅಕೌಂಟೆಂಟ್ ಒಬ್ಬರನ್ನು ಕೊಟ್ಟಿದ್ದಾರೆ; ಅವರು ಇಬ್ಬರಿಗೂ ಜವಾಬ್ದಾರರು; ಅಮಲ್ದಾರರಿಗೂ ಜವಾಬ್ದಾರರು, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಿಗೂ ಜವಾಬ್ದಾರರು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಒಂದು ಊರಿಗೆ ಹೋದರೆ ಆ ಪಂಚಾಯಿತಿ ಅಕೌಂಟೆಂಟ್, ತನಗೆ ಅಮಲ್ದಾರರ ಹತ್ತಿರ ಕೆಲಸವಿದೆಯೆಂದು ಹೊರಟು ಹೋಗುತ್ತಾನೆ. ಅಮಲ್ದಾರರು ಬಂದರೆ ಬಿ.ಡಿ.ಓ. ನ ಹತ್ತಿರ ಕೆಲಸವಿದೆಯೆಂದು ಸಬೂಬು ಹೇಳುತ್ತಾನೆ. ಹೀಗೆ ಇಬ್ಬರ ಕೈಗೂ ಸಿಕ್ಕುವುದಿಲ್ಲ; ಅವನು ತಪ್ಪಿಸಿಕೊಂಡು ಓಡಾಡುತ್ತಾನೆ. ಇನ್ನೊಬ್ಬರಮೇಲೆ ನೆಪ ಹಾಕುವುದಕ್ಕೆ ನೀವೇ ಅಕೌಂಟೆಂಟಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಅಧಿಕಾರಿಗಳನ್ನು ಹೆಚ್ಚು ಹೆಚ್ಚು ಮಾಡುತ್ತಾ ದಕ್ಷತೆ ಕಡಿಮೆಯಾಗುತ್ತದೆ, ಏಕೆಂದರೆ ಯಾರಮೇಲೂ ನಿರ್ದಿಷ್ಟವಾದ ಜವಾಬ್ದಾರಿಯನ್ನು ಹಾಕುವುದಕ್ಕಾಗವುದಿಲ್ಲ. ಅಧಿಕಾರಿಗಳನ್ನು ಜಾಸ್ತಿಮಾಡಿರುವುದರಿಂದ. ನಾನು ಮೊದಲೇ ಹೇಳಿಧ ಹಾಗೆ overlapping, confusion ಉಂಟಾಗಿದೆ, ಅದರೂ ಇನ್ನೂ ಜಾಸ್ತಿಮಾಡುತ್ತಲೇ ಇದ್ದೀರಿ.

ತಮ್ಮ ಮಸೂದೆಯಲ್ಲಿ ಅಡಕವಾಗಿರುವಂತೆ ಒಂದು ಜಿಲ್ಲೆಯಲ್ಲಿ ಇಬ್ಬರು ಡೆಪ್ಯುಟಿ ಕಮೀಷನ್ ರ ಗಳನ್ನು ಉತ್ಪತಿಮಾಡುತ್ತೀರಿ. ಒಬ್ಬ ಡೆಪ್ಯುಟಿ ಕಮೀಷನರು ಇನ್ನೊಬ್ಬ ಡೆಪ್ಯುಟಿ ಕಮೀಷನರಿಗೆ ಅಧೀನನಲ್ಲ. ಒಂದೇ ಜಿಲ್ಲೆಯಲ್ಲಿ ಸಮವಾದ ಅಧಿಕಾರವಿರತಕ್ಕಂಥ ಇಬ್ಬರು ಜಿಲ್ಲಾಧಿಕಾರಿಗಳನ್ನು ಉತ್ಪತ್ತಿಮಾಡಿ, ಅವರಲ್ಲಿ ಯಾರು ಯಾರಿಗೆ ಅಧೀನರು ಎಂದು ಗೊತ್ತುಮಾಡದೆ, ಇಬ್ಬರು ಜಗಳ ವಾಡಬೇಕು. ಅವರಿಬ್ಬರೂ ಡಿವಿಜನಲ್ ಕಮಿಷನರಿಗೆ ಮಾತ್ರ ಅಧೀನರು. ಇಬ್ಬರು ಡೆಪ್ಯುಟಿ ಕಮಿಷನರಿಗೂ equal status. ಒಬ್ಬರ ಅಧೀನದಲ್ಲಿ ಇನ್ನೊಬ್ಬರು ಇಲ್ಲದೆ Coordination ಇಲ್ಲ. ಒಂದು ಜಿಲ್ಲೆಗೆ ಇಬ್ಬರು ಗಂಡಂದಿರು ಇದ್ದಹಾಗಿದೆ. ಒಂದು ಮನೆಗೆ ಇಬ್ಬರು ಯಜಮಾನ ರಿದ್ದರೆ ಅವರು ಜಗಳ ಮಾಡುತ್ತಾರೆ. ತಮ್ಮ ತಮ್ಮ ಪ್ರತಿಷ್ಟೆಯನ್ನು ಸಾಧನೆ ಮಾಡುವುದಕ್ಕೆ ಈ ಇಬ್ಬರು ಜಿಲ್ಲಾಧಿಕಾರಿಗಳಿಗೆ ಅವಕಾಶ ಕಲ್ಪನೆ ಮಾಡಿಕೊಟ್ಟಿದ್ದೀರಿ; ಅವರು ಜಗಳವಾಡುತ್ತಾ ರೆಯೇ ವಿನಾ ಅವರಿಂದ ಕೆಲಸವೇನು ಆಗುವುದಿಲ್ಲ. ಈ ಅಡಿಷನಲ್ ಜಿಲ್ಲಾಧಿಕಾರಿಗಳ ನೇಮಕ ದಿಂದ ಕೆಟ್ಟ, ದುಷ್ಪರಿಣಾಮ ಉಂಟಾಗುತ್ತದೆ. ಒಂದು ಜಿಲ್ಲೆಗೆ ಒಬ್ಬ ಜಿಲ್ಲಾಧಿಕಾರಿ ಇರುವುದು ಸಾಧುವಾದುದು; ಅಡಿಷನಲ್ ಜಿಲ್ಲಾಧಿಕಾರಿಯ ನೇಮಕ ಅಷ್ಟು ಸಾಧುವಾದುದಲ್ಲವೆಂದು ನಾನು ಇವತ್ತಿನ ದಿವಸ ಹೇಳಬೇಕಾಗಿದೆ. ಏಕೆಂದರೆ ನಾನು ಮೊದಲೇ ಹೇಳಿದಹಾಗೆ, ಕೆಲಸವನ್ನು ನಿರ್ವಹಿಸುವುದಕ್ಕೋಸ್ಕರ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು, ಜಿಲ್ಲಾ ಅಭಿವೃದ್ಧಿ ಮಂಡಳಿಗಳು ಇರುತ್ತವೆ separate agency ಮೇಲ್ವಿಚಾರಣೆಗೆ ಇದೆ-ಒಬ್ಬ ಜಿಲ್ಲಾಧಿಕಾರಿಯನ್ನು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ ಇಟ್ಟಿರುತ್ತೀರಿ. ಈ ಅಭಿವೃದ್ಧಿ ಮಂಡಲಿಗಳಲ್ಲಿ ಶಾಸನ ಸಭಾ ಸದಸ್ಯರು ಕೂಡ ಸದಸ್ಯರಾಗಿದ್ದಾರೆ. ಅದಕ್ಕೆ ನಾಮಿನೇಟೆಡ್ ಚೇರ್ಮನ್ ಜಿಲ್ಲಾಧಿಕಾರಿಗಳಿದ್ದಾರೆ. ಅಭಿವೃದ್ಧಿ ಮಂಡಲಿಗಳ ಕೆಲಸಗಳನ್ನು ಜಿಲ್ಲಾಧಿಕಾರಿಗಳಿಗೇ ವಹಿಸಬೇಕು. ಆಡಳಿತ ಸುಗಮವಾಗಿ ನಡೆಯಲು ಒಬ್ಬ ಜಿಲ್ಲಾಧಿಕಾರಿ ಇರುವುದೇ ಸೂಕ್ತ; ದಯೆಯಿಟ್ಟು ಇನ್ನೊಬ್ಬರನ್ನು ಮಾಡಬೇಡಿ.

ಅದೇರೀತಿಯಲ್ಲಿ ತಹಸೀಲುದಾರರ ವಿಚಾರವಾಗಿ ನಾನು ಹೇಳುವುದಾದರೆ, ಅಡಿಶನಲ್ ತಹಸೀಲುದಾರರು ಖಂಡಿತವಾಗಿ ಬೇಡ. ತಾಲ್ಲೂಕು ಅಭಿವೃದ್ಧಿ ಮಂಡಲಿ ಒಂದೊಂದಕ್ಕೆ ಇಬ್ಬರಿಬ್ಬರು ಬಿ.ಡಿ. ಓ.ಗಳಿದ್ದಾರೆ. ಅವರಲ್ಲಿ ಬೇಕಾದರೆ ಒಬ್ಬರನ್ನು ಕಡಿಮೆಮಾಡಿ, ಇಬ್ಬರು ಬಿ.ಡಿ. ಓ.ಗಳು ಬೇಡ. ಅವರುಗಳು ಪೆಟ್ರೋಲ್ ಹಾಳು ಮಾಡುವುದು, ಜೀಪಿನಲ್ಲಿ ಓಡಾಡುವುದು. ಈ ಅವಾಂತರ ದಿಂದ ಕೆಲಸ ನಡೆಯುತ್ತಾ ಇಲ್ಲ. ಅಧಿಕಾರ ಚಲಾಯಿಸಿಕೊಂಡು ಓಡಾಡುವುದರಲ್ಲಿರುತ್ತಾರೆಯೇ ಹೊರತು, ಅವರು ಏನು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಾ ಇಲ್ಲ, ಅದ್ದರಿಂದ ಹೆಚ್ಚಿನ ಅಧಿಕಾರಿ ಗಳನ್ನು ಸೃಷ್ಟಿ ಮಾಡುವುದು ಸಾಧುವಾದುದಲ್ಲ.

ಇನ್ನೊಂದು ಮಹತ್ವದ ಬದಲಾವಣೆಯನ್ನು ಮಾಡಿರತಕ್ಕಂಥಾದ್ದು ಎಂದರೆ ರೀಸೆಟಲ್ ಮೆಂಟ್ ವಿಚಾರದಲ್ಲಿ ಐದು ದೇಶದ ಭಾಗಗಳು ನಮ್ಮ ರಾಜ್ಯಕ್ಕೆ ಬಂದ ಮೇಲೆ ಐದು ತರಹ ಕಂದಾಯ ಪದ್ಧತಿಗಳು ರಾಜ್ಯದಲ್ಲಿರುವುದರಿಂದ, ಏಕ ರೂಪತೆ ಮಾಡಿ, ಕಂದಾಯವನ್ನು ಒಂದೇ

(ಶ್ರೀ ಎಸ್. ಶಿವಪ್ಪ)

ತರಹ ಮಾಡಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಅದು ಸಾಧುವಾದುದು ಮತ್ತು ಯೋಗ್ಯವಾದುದು. ಏಕ ರೂಪತೆ ಸಾಧನೆ ಮಾಡತಕ್ಕಂಥ ಕಾಲದಲ್ಲಿ ಕಂದಾಯದ ಹೊರೆಯನ್ನು ಜಾಸ್ತಿಮಾಡುತ್ತಾ ಇದ್ದೀರಿ. ಇದರಲ್ಲಿ ನಿಮಗೆ ಬಹುಶಃ ನಾಲ್ಕೈದು ಕೋಟಿ ರೂಪಾಯಿ ಬರಬಹುದು. Indirect Taxation ನಿಂದ ಐದು ಕೋಟಿ ರೂಪಾಯಿ ಹೆಚ್ಚಿನ ವರಮಾನ ಬರತಕ್ಕಂಥ ಮಸೂದೆಯಾಗಿದೆ ಇದು. ಇದರಿಂದ ನಮ್ಮ ರೈತನಿಗೆ ಐದು ಕೋಟಿ ರೂಪಾಯಿಗಳ ಒಂದು ಹೊರೆ ಜಾಸ್ತಿಯಾಗಿದೆ. ಏಕರೂಪತೆ ಯನ್ನು ಸಾಧನೆ ಮಾಡತಕ್ಕಂಥ ಕಾಲದಲ್ಲಿ ಹೆಚ್ಚಿನ ಕಂದಾಯ ಎಲ್ಲಿದೆಯೋ ಅದನ್ನು ಅನುಕರಣೆ ಮಾಡುತ್ತೀರೇ ಹೊರತು, ಕಡಮೆ ಎಲ್ಲಿದೆಯೋ ಅದನ್ನು ಅನುಕರಣೆ ಮಾಡುವುದಿಲ್ಲ. ಒಟ್ಟಿನಲ್ಲಿ ಭೂಗಂದಾಯ ಹೆಚ್ಚು ಮಾಡಬೇಕೆಂಬ ಮನೋಭಾವ ಇದೆ. ನಮ್ಮ ಸರ್ಕಾರದವರು ಹೆಚ್ಚಿನ ಕಂದಾಯ ಎಲ್ಲಿದೆಯೋ ಅದನ್ನು ನೋಡಿ, ಅದರ ದರ್ಜೆಗೆ ಏರಿಸುವದರ ಬದಲು, ಶಾಸ್ತ್ರೀಯವಾಗಿ ಕಂದಾಯದ ಹೊರೆಯನ್ನು ಕಡಮೆಮಾಡಿ. ಕಂದಾಯವನ್ನು ಇಳಿಸುವ ನೀತಿಯನ್ನು ಯೋಚನೆ ಮಾಡಬೇಕಾಗಿದೆ. ಏಕೆಂದರೆ ದೇಶದಲ್ಲಿ ಆಹಾರೋತ್ಪತ್ತಿ ಮಾಡತಕ್ಕಂಥ ರೈತನ ವಿಚಾರದಲ್ಲಿ ಈ ಮಸೂದೆ ಎಷ್ಟು ಮಟ್ಟಿಗೆ ರಿಯಾಯಿತಿ ತೋರಿಸಬೇಕೋ, ಅಷ್ಟು ಮಟ್ಟಿಗೆ ರಿಯಾಯಿತಿ ತೋರಿಸುತ್ತಿಲ್ಲ.

ಹೀಗೆ ರೈತನಮೇಲೆ ತೆರಿಗೆಹೊರೆ ಕಂದಾಯದಹೊರೆ ಜಾಸ್ತಿ ಆದುದರಿಂದಲೂ, ವ್ಯವಸಾಯದ ಖರ್ಚುವೆಚ್ಚಗಳೂ ಅಧಿಕವಾಗಿರುವುದರಿಂದ ರೈತನು ಹೆಚ್ಚು ಬೆಳೆ ಬೆಳೆಯಲು ಇದರಿಂದ ಧಕ್ಕೆ ಬರುತ್ತದೇನೋ ಎಂಬ ಒಂದು ಸಂಶಯ ಸಹ ಇದರಿಂದ ಉದ್ಭವವಾಗುವಂಥ ಪರಿಸ್ಥಿತಿಯುಂಟಾಗಿದೆ. ಸರ್ಕಾರದವರು ಇಂಥಾ ಮನೋಭಾವವನ್ನು ಬದಲಾವಣೆಮಾಡಿಕೊಂಡು ರೈತರಿಗೆ ಉತ್ತೇಜನ ದೊರೆಕಿಸಲು ಪ್ರಯತ್ನ ಮಾಡಿದರೆ ದೇಶಕ್ಕೆ ಒದಗಿರತಕ್ಕ ಈ ತುರ್ತುಪರಿಸ್ಥಿತಿಯಲ್ಲಿ ಅವರು ಹೆಚ್ಚಿನ ಆಹಾರ ಧಾನ್ಯ ಬೆಳೆಯಲು ಸಾಧ್ಯವಾದೀತು. ಸರ್ಕಾರ ಸರ್ವಥಾ ಈ ರೈತನ ವಿಚಾರದಲ್ಲಿ ಒಂದು ಸಹಕಾರ ಮನೋಭಾವವನ್ನಿಟ್ಟುಕೊಂಡಿರಬೇಕು. ಈ ಹಿಂದೆ ಸರ್ಕಾರಕ್ಕೆ ಇನ್ನು ಯಾವ ಬಾಬುಗಳಿಂದಲೂ ಈಗಿನಹಾಗೆ ಉತ್ಪತ್ತಿ ಬಾರದಿದ್ದಕಾಲದಲ್ಲಿ ಈ ರೈತರು ಕೇವಲ ಭೂಕಂದಾಯ ಒಂದರಿಂದಲೇ ಈ ರಾಜ್ಯಾದಾಯವನ್ನು ದೊರಕಿಸಿಕೊಟ್ಟು ಈ ದೇಶದ ಆಡಳಿತ ನಡೆಸಲು ಸಹಕಾರ ಮಾಡಿಕೊಂಡು ಬಂದಿದ್ದಾರೆ. ಹೀಗೆ ಬಹುಕಾಲದಿಂದಲೂ ಈ ದೇಶದ ಕ್ಷೇಮ ಲಾಭಗಳೆಲ್ಲ ರೈತರ ಕಂದಾಯವನ್ನೇ ಅವಲಂಬಿಸಿಕೊಂಡಿದ್ದುವು. ಆದರೆ ಇತ್ತೀಚೆಗೆ ರಾಜ್ಯಾದಾಯವು ಬೇರೆ ಬೇರೆ ಬಾಬುಗಳಿಂದ ಭೂಕಂದಾಯಕ್ಕಿಂತ ಜಾಸ್ತಿಯಾಗಿ ಬರುತ್ತಿರಬಹುದು. ಆದರೆ ಶತಮಾನಗಳಿಂದಲೂ ಆ ರೈತನು ದೇಶಾಡಳಿತಕ್ಕೆ ಬೇಕಾದ ಆದಾಯವನ್ನು ತೆರುತ್ತಾ ಬಂದಿರುವುದರಿಂದ ಈ ದಿವಸ ಸರ್ಕಾರಕ್ಕೆ ಬೇರೆ ಬೇರೆ ಆದಾಯ ಮಾರ್ಗಗಳಿರುವಾಗ ರೈತನಮೇಲೆ ಹೆಚ್ಚಿನ ತೆರಿಗೆಹೊರೆಯನ್ನು ಹಾಕತಕ್ಕದ್ದು ಸರಿಯಲ್ಲ, ಇವರ ವಿಚಾರದಲ್ಲಿ ಸರ್ಕಾರಕ್ಕೆ ಈಹೊತ್ತು ಒಂದು ಹೆಚ್ಚಿನ ಸಹಾನುಭೂತಿ ಇರಬೇಕಾದ್ದು ಅತ್ಯಗತ್ಯವೆಂದು ಹೇಳುತ್ತೇನೆ. ಏನೋ ಈ ದಿವಸ ಈ ಯೂನಿಫಾರಂ ಶಾಸನವನ್ನು ಜಾರಿಗೆ ತರತಕ್ಕ ನೆಪದಲ್ಲಿ ರಾಜ್ಯಕ್ಕೆ ಇದರಿಂದ 5 ಕೋಟಿ ರೂ.ಗಳ ಆದಾಯ ಬರುತ್ತದೆ ಎನ್ನುವ ಒಂದು ಮನೋಭಾವ ಸರ್ಕಾರಕ್ಕೇನಿದೆ ಅದು ಅಷ್ಟುಸರಿಯಾದ್ದಲ್ಲ ಎಂದು ಹೇಳುತ್ತೇನೆ. ಆ ದೃಷ್ಟಿ ಸರ್ಕಾರಕ್ಕಿದ್ದರೆ ಇತ್ತಹೆಚ್ಚು ಆಹಾರೋತ್ಪತ್ತಿಗೆ ಕುಂದುಕ ಬರುತ್ತದೆ ಎಂಬ ಅಂಶವನ್ನು ನಾನೀಗ ಈ ವೇದಿಕೆಯಿಂದ ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕಾಗಿದೆ. ಆದರೆ ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಪರಿಶೀಲನೆಗೆ ಹೋಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈಗ ನಮ್ಮ ಕೈಯಲ್ಲಿರತಕ್ಕ ಮಸೂದೆಯಲ್ಲಿ ರೆವಿನ್ಯೂ ಅಪಲೇಟ್ ಟ್ರೈಬುನಲ್ಲಿಗೆ ಒಂದೇ ಒಂದು ಅಪೀಲ್ ಹೋಗುವುದಕ್ಕೆ ಮಾತ್ರ ಅವಕಾಶ ಕಲ್ಪಿಸಿದೆ. ಆದರೆ ಹಿಂದೆ ಇದ್ದ ಕಲಂ ಪ್ರಕಾರ ಒಬ್ಬರು ಮಾಡಿದ ತೀರ್ಮಾನದಲ್ಲಿ ಅನಾನುಕೂಲವಾದರೆ ಅವರು ಅವರ ಮೇಲಿನ ಅಧಿಕಾರಿಗಳಿಗೆ ಅಪೀಲ್ ಹೋಗಲು ಅವಕಾಶವಿತ್ತು. ಹಿಂದೆ ಅಮಲ್ದಾರರು ಮಾಡಿದ ತೀರ್ಮಾನದ ಮೇಲೆ ಅಸಿಸ್ಟೆಂಟ್ ಕಮಿಷನರಿಗೂ, ಅಸಿಸ್ಟೆಂಟ್ ಕಮಿಷನರ ತೀರ್ಮಾನದಮೇಲೆ ಡೆಪ್ಯುಟಿ ಕಮಿಷನರಿಗೂ, ಡಿ. ಸಿ. ತೀರ್ಮಾನದಮೇಲೆ ರೆವಿನ್ಯೂ ಟ್ರೈಬುನಲ್ಲಿಗೂ ಅಪೀಲ್ ಹೋಗಲು ಹೀಗೆಲ್ಲ ಅವಕಾಶವಿತ್ತು. ಆದರೆ ಈ ದಿವಸ ಇಲ್ಲಿ ಹೇಳಿರತಕ್ಕರೀತಿಯಲ್ಲಿ ಅನ್ಯಾಯಕ್ಕೊಳಗಾದವರಿಗೆ ನ್ಯಾಯ ದೊರೆಕಿಸಿಕೊಳ್ಳಲು ಸಾಕಷ್ಟು ಅವಕಾಶವಿಲ್ಲ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಆದಕಾರಣ ಹಿಂದೆ ಹೀಗೆ ನ್ಯಾಯ ದೊರಕಿಸಿಕೊಳ್ಳಲು ಸಾಕಷ್ಟು ಅವಕಾಶಕಲ್ಪಿಸಲಾಗಿತ್ತೋ ಅದನ್ನು ತಪ್ಪಿಸಬಾರದೆಂದು ಕೇಳಿಕೊಳ್ಳುತ್ತೇನೆ. ಈ ಅಪೀಲಿನ ವಿಚಾರದಲ್ಲಿ ಹಿಂದಿನ ಕಾನೂನುಗಳಲ್ಲಿ ಏನಿತ್ತೋ ಅದನ್ನೇ ಮುಂದುವರಿಸಿಕೊಂಡು ಬರುವುದಲ್ಲದೆ ಈಗ ಈ ಮಸೂದೆಯಲ್ಲಿ ಹೆಚ್ಚು ನಿರ್ಬಂಧ ಮಾಡಿರತಕ್ಕ ಕೆಲವು ಕಲಂಗಳನ್ನು ಅವುಗಳನ್ನು ಸ್ವಲ್ಪಮಟ್ಟಿಗೆ ಸಡಿಲ ಮಾಡಬೇಕೆಂದು ಹೇಳುತ್ತೇನೆ

ಇನ್ನು ಸರ್ಕಾರ ಈಗ ರೈತನಮೇಲೆ ಹಾಕಿರತಕ್ಕ ಸಾರ್‌ಛಾರ್ಜು ಏನಿದೆ ಇದು ಶಾಸ್ತ್ರೀಯವಾದ ರೀತಿಯಲ್ಲಿ ಇರುವುದಿಲ್ಲವೆಂಬ ಅಂಶವನ್ನು ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಏನೋ ಆ ಒಂದು ಯುದ್ಧದ ಗಂಡಾಂತರ ಬಂದುದರಿಂದ ಅನಿವಾರ್ಯವಾಗಿ ಈ ತೆರಿಗೆಯನ್ನು ಹಾಕಬೇಕಾಗಿ ಬಂದಿತೆಂದು ಸರ್ಕಾರದವರು ಹೇಳಿದ್ದಾರೆ. ಅಂತೂ ಈ ಕಂದಾಯದ ಏರಿಕೆ ರೈತನಮೇಲೆ ಜಾಸ್ತಿ ಆಗಿದೆ ಎಂಬುದು ಸರ್ಕಾರಕ್ಕೂ ಮನವರಿಕೆಯಾಗಿದೆ. ಆದ್ದರಿಂದ ಇದನ್ನು ಸರ್ಕಾರದವರು ಕೂಡಲೇ ರದ್ದುಮಾಡಿ ರೈತನಮೇಲೆ ಹಾಕಿರತಕ್ಕ ನಿರ್ಬಂಧದ ಹೊರೆಗಳನ್ನು ತಪ್ಪಿಸತಕ್ಕ ಒಂದು ದೊಡ್ಡ ಹೊಣೆಗಾರಿಕೆ ಅವರಮೇಲೆ ಬಿದ್ದಿದೆ. ಈ ವಿಚಾರವನ್ನು ನಾನು ಎಷ್ಟು ಒತ್ತಿ ಒತ್ತಿ ಹೇಳಿದರೂ ತೀರದು. ಆದರೆ ಈಗ ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಸಮಿತಿಯಮುಂದೆ ಪರಿಶೀಲನೆಗಾಗಿ ಹೋಗತಕ್ಕದ್ದಾಗಿದೆ. ಅಲ್ಲಿ ನಾನು ಈವರೆಗೂ ಹೇಳಿದ ಕಲಂಗಳನ್ನು ಮತ್ತು ನೀತಿಗಳನ್ನು ಪುನರ್ವಿಮರ್ಶೆಮಾಡಿ ಅವುಗಳನ್ನೆಲ್ಲ ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಸೂಚಿಸುತ್ತೇನೆ. ಈ ಮಸೂದೆ ಆ ಸೆಲೆಕ್ಟ್ ಕಮಿಟಿಯವರ ಪರಿಶೀಲನೆನಂತರ ಈ ಸಭೆಯಲ್ಲಿ ಈಗ ಯಾರಾರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ಒಂದು ಪ್ರೊಗ್ರೆಸೀವ್ ಮಾದರಿಯಲ್ಲಿ ಬದಲಾವಣೆಮಾಡಿ, ನಮ್ಮ ಆ ಹಿಂದಿನ ಹಳೇಪದ್ಧತಿಗಳನ್ನು ಮರೆತು ಈ ಮಸೂದೆಯು ಒಂದು ಹೊಸ ಸ್ವರೂಪವನ್ನು ತಾಳಿ ಮತ್ತೆ ಈ ಸಭೆಯಮುಂದೆ ಬರುವಂತಾಗಲೆಂದು ಆಶಿಸಿ ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸಬಹುದೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೆ, ಈಗ ನಮ್ಮ ಮುಂದಿರತಕ್ಕ ಭೂಕಂದಾಯದ ಮಸೂದೆಯನ್ನು ಸ್ವಾಗತಿಸುತ್ತಾ ಇದರಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಈಗ ಸರ್ಕಾರದವರ ಗಮನಕ್ಕೆ ತರಬಿಚ್ಛಿಸುತ್ತೇನೆ.

ಈ ಹಿಂದೆ ಮಾತನಾಡಿದ ವಿರೋಧ ಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಈ ಮಸೂದೆಯಲ್ಲಿ ಹೆಚ್ಚು ಹೆಚ್ಚು ಅಧಿಕಾರಿಗಳನ್ನು ನೇಮಕ ಮಾಡತಕ್ಕ ಮನೋಭಾವ ಈ ಸರ್ಕಾರಕ್ಕಿದ್ದ ಹಾಗೆ ಈ ಮಸೂದೆಯಿಂದ ವ್ಯಕ್ತವಾಗುತ್ತದೆಂದು ಅವರು ಪ್ರಸ್ತಾಪಮಾಡಿದರು. ಅದು ವಾಸ್ತವವಾದ ಸಂಗತಿಯೇ ಹೌದು. ಈಗಿನ ತುರ್ತು ಪರಿಸ್ಥಿತಿಯಲ್ಲಿ ಇವೆಲ್ಲವೂ ಅನವಶ್ಯಕ. ಆದರೆ ಈ ಬಿಲ್ಲನ್ನು ಮಂಡಿಸುವಕಾಲದಲ್ಲಿ ಮಾನ್ಯ ಮಂತ್ರಿಗಳು ಈಗಿರತಕ್ಕ ಜಿಲ್ಲಾಧಿಕಾರಿಗಳಿಗೆ ಹೆಚ್ಚು ಕೆಲಸಗಳಿರುವುದರಿಂದ ಅವರಿಗೆ ಸಹಾಯಕರಾಗಿ ಒಬ್ಬ ಅಡಿಷನಲ್ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡುವ ಪರಿಸ್ಥಿತಿಯುಂಟಾಗಿದೆ ಎಂದು ಹೇಳಿದರು. ಈ ವಿಚಾರದಲ್ಲಿ ನನಗಾದರೂ ಅನಿಸುತ್ತಿದೆ: ಡೆಪ್ಯುಟೀ ಕಮಿಷನವರ ಕೆಲಸ ಜಾಸ್ತಿಯಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದನ್ನು ತುಲನಮಾಡಿ ನೋಡಿದರೆ ಅವರು ಹೇಳಿರತಕ್ಕದ್ದು ಸರಿಯಲ್ಲವೆಂದು ಕಾಣುತ್ತದೆ. ಏತಕ್ಕೆಂದರೆ ಪ್ರತಿಯೊಬ್ಬ ಜಿಲ್ಲಾಧಿಕಾರಿಯ ಕೈಕೆಳಗೂ ಅವರಿಗೆ ಸಹಾಯಕರಾಗಿ—ಅಂದರೆ ಅವರಿಗೆ ಅಸಿಸ್ಟೆಂಟರುಗಳಾಗಿ—8 ಜನ ಅಸಿಸ್ಟೆಂಟರುಗಳಿದ್ದಾರೆ. ಇವರಲ್ಲಿ ಅನೇಕರು ಅಸಿಸ್ಟೆಂಟ್ ಕಮಿಷನರ ಗ್ರೇಡಿನವರು, ಗೆಜಿಟೆಡ್ ರ್ಯಾಂಕಿನಲ್ಲಿರತಕ್ಕವರೂ ಆಗಿದ್ದಾರೆ. ಇವರೆಲ್ಲರೂ ಅಸಿಸ್ಟೆಂಟ್ ಕಮಿಷನರುಗಳೇ. ಡೆಪ್ಯುಟಿ ಕಮಿಷನರಮೇಲೆ ಬೀಳತಕ್ಕ ಪ್ರತಿಯೊಂದು ಕೆಲಸವನ್ನೂ ಆಯಾ ಬಾಬಿಗೆ ಇರತಕ್ಕ ಅಸಿಸ್ಟೆಂಟ್ ಕಮಿಷನರುಗಳು ನೋಡಿಕೊಳ್ಳುತ್ತಿದ್ದಾರೆ. ಇಷ್ಟಿದ್ದರೂ ಅವರು ಮುತವರ್ಜಿಯಿಂದ ಕೆಲಸ ಮಾಡುತ್ತಿಲ್ಲ. ಎಲ್ಲ ಕೆಲಸಗಳಲ್ಲೂ ನಿಧಾನವಾಗುತ್ತಿದೆ. ಆದುದರಿಂದ ಈಗಿರತಕ್ಕ ಅಧಿಕಾರಿಗಳ ಸಿಬ್ಬಂದಿಯೇ ಜಾಸ್ತಿಯಾಗಿರುವುದರಿಂದ ಇನ್ನೊಬ್ಬ ಡಿ. ಸಿ. ನೇಮಕದ ಅಗತ್ಯ ಅಷ್ಟಾಗಿ ಉದ್ಭವಿಸುವುದಿಲ್ಲವೆಂದು ಹೇಳುತ್ತೇನೆ. ಆದುದರಿಂದ ಸರ್ಕಾರದವರು ಈಗೇನು ಈ ಅಡಿಷನಲ್ ಜಿಲ್ಲಾಧಿಕಾರಿಗಳನ್ನು ನೇಮಕಮಾಡಬೇಕೆಂದು ಉದ್ದೇಶವಿಟ್ಟುಕೊಂಡಿದ್ದಾರೋ ಈ ವಿಚಾರವನ್ನು ಅವರು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲನೆ ಮಾಡತಕ್ಕದ್ದು ಅಗತ್ಯವೆಂದು ಹೇಳುತ್ತೇನೆ. ಈಗಾಗಲೇ ಸರ್ಕಾರಿ ಆಡಳಿತಯಂತ್ರ ಬಹಳ ಜಾಸ್ತಿಯಾಗಿದೆ ಎಂದು ಹೇಳುತ್ತಿರುವ ಕಾಲದಲ್ಲಿ ಈ ಆಡಳಿತ ಯಂತ್ರವನ್ನು ಮತ್ತಿಷ್ಟು ಹೆಚ್ಚಿಸಿಕೊಂಡುಹೋಗುವಂಥಾ ಸರ್ಕಾರ ಇದಾಗಬಾರದು. ಅಂಥ ಅವಶ್ಯಕತೆಗಳಿದ್ದರೆ ಮಾಡಲಿ. ಹಾಗಿಲ್ಲದೆ ಇರುವಾಗ ಈ ರೀತಿ ಅನಾವಶ್ಯಕವಾಗಿ ಅಧಿಕಾರಿಗಳನ್ನು ಜಾಸ್ತಿ ಜಾಸ್ತಿ ಬೆಳೆಸುತ್ತಾ ಬಂದರೆ ಇದರಿಂದ ಮುಂದೆ ಬಹಳ ಅನ್ಯಾಯಗಳೂ ಹಾಗೂ ಕೆಟ್ಟ ಪರಿಣಾಮಗಳುಂಟಾಗುತ್ತವೆ. ಹೀಗೆ ಈಗ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕ ಅಮಲ್ದಾರರ ಜೊತೆಗೆ ಮತ್ತೊಬ್ಬ ಅಡಿಷನಲ್ ತಹಶೀಲ್‌ದಾರರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಆದರೆ ಈಗ ತಾಲ್ಲೂಕಿಗೊಬ್ಬರಂತೆ ಇರತಕ್ಕ ತಹಶೀಲ್‌ದಾರರಿಗೆ ಸಾಕಷ್ಟು ಕೆಲಸಗಳಿಲ್ಲ. ಅಷ್ಟಿಷ್ಟು ಕೆಲಸಗಳಿದ್ದರೆ ಅವುಗಳೆಲ್ಲ ಹಾಗೇ ಪೆಂಡಿಗ್ ಬಿದ್ದಿರುತ್ತವೆ. ಈಗ ತಹಶೀಲ್ದಾರರಿಗೆ ಇರತಕ್ಕ ಕೆಲಸವೆಂದರೆ ಸರ್ಕಾರಕ್ಕೆ ಬರಬೇಕಾದ ಹಣವನ್ನು ವಸೂಲ್ಮಾಡುವುದು ಎಂದರೆ ಕಂದಾಯವನ್ನು ವಸೂಲ್ಮಾಡುವುದು, ಸಾಲಗಳನ್ನು ವಸೂಲ್ಮಾಡುವುದು, ದರಖಾಸ್ತು ಮಂಜೂರ

(ಶ್ರೀ ಹೆಚ್. ಡಿ. ದೇವೇಗೌಡ)

ಮಾಡುವುದು ಇಂಥಕೆಲವೇ ಕೆಲಸಗಳು. ತಹಶೀಲ್‌ದಾರರಿಗೆ ಇವೊತ್ತಿನ ಪರಿಸ್ಥಿತಿಯಲ್ಲಿ ಹೆಚ್ಚಾಗಿ ಕೆಲಸವಿಲ್ಲ. ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳೆಲ್ಲ ತಾಲ್ಲೂಕು ಬೋರ್ಡಿನ ಎಕ್ಸಿಕ್ಯುಟಿವ್ ಆಫೀಸರ್ ; ಮತ್ತು Block Development ಆಫೀಸರ್ ಇವರಿಗೆ ಸೇರಿವೆ.

ಈ ಮಸೂದೆಯೊಳಗೆ Village Accountants will be the Secretaries of Panchayats ಎಂದು ಹೇಳಿದ್ದಾರೆ. ವಿಲೇಜ್ ಅಕೌಂಟೆಂಟ್ ಕೆಲಸ ಮಾಡಲು ಅವರಿಗೆ ಕೊಟ್ಟಿರುವ ತರಪೇತಿ ಮೂರು ತಿಂಗಳು ಮಾತ್ರ. ಇಂಥವರನ್ನು ಡೆಪ್ಯುಟಿ ಕಮಿಷನರು ವಿಲೇಜ್ ಅಕೌಂಟೆಂಟ್ ಗಳಾಗಿ ನೇಮಕ ಮಾಡಿದ್ದಾರೆ. ಅವರಿಗೆ ಕೆಲಸದ ಅರಿವೇಇಲ್ಲ. ಎಷ್ಟೋ ಜನಗಳಿಗೆ ಏನು ಕೆಲಸ ಮಾಡಬೇಕೆಂಬುದೇ ಗೊತ್ತಿಲ್ಲ. ವಿಲೇಜ್ ಅಕೌಂಟೆಂಟ್‌ಗೆ ಇರುವ ಕೆಲಸದ ವ್ಯಾಪ್ತಿ ಬಹಳ ಜಾಸ್ತಿ. ಪಂಚಾಯಿತಿಯ ಲೆಕ್ಕ ಪತ್ರಗಳನ್ನು ನೋಡಿಕೊಳ್ಳಬೇಕು, ಡೆವಲಪ್‌ಮೆಂಟ್ ಕಮಿಷನರ್ ಕಳಿಸತಕ್ಕ ಸರ್ಕ್ಯುಲರ್ ನೋಡಿ ಬಿಲ್ಲುಗಳನ್ನು ಮಾಡತಕ್ಕ ಲೆಕ್ಕವನ್ನು ಸಹ ಅವನೇ ನೋಡಿಕೊಳ್ಳಬೇಕು, record of rights ಎಲ್ಲವನ್ನೂ ಅವನೇ ಮಾಡಬೇಕು. ಇಷ್ಟೊಂದು ಜವಾಬ್ದಾರಿಯನ್ನು ನಿರ್ವಹಿಸಲು ಒಬ್ಬನಿಂದ ಆಗುತ್ತದೆಯೋ ಇಲ್ಲವೋ ಎನ್ನುವುದು ಗೊತ್ತಿಲ್ಲ. ವಿಲೇಜ್ ಅಕೌಂಟೆಂಟರನ್ನೇ *ex officio* Secretary of the Village Panchayats ಮಾಡುವುದಕ್ಕೆ ಬದಲಾಗಿ ಸೆಕ್ರೆಟರಿಯನ್ನು ಬೇರೆ ನೇಮಕ ಮಾಡುವುದು ಸೂಕ್ತ. ಇಲ್ಲದೆ ಹೋದರೆ ಪಂಚಾಯಿತಿಗಳ ಕೆಲಸ ನಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ತೀವ್ರತರವಾದ ಪರಿಶೀಲನೆಮಾಡಿ ಇತ್ಯರ್ಥಕ್ಕೆ ಬರಬೇಕು.

ಅರವತ್ತೈದನೆಯ ಕ್ಲಾಜಿನಲ್ಲಿ industries-agriculture ಅಥವಾ ಯಾವುದೇತರಹ ಸಾರ್ವಜನಿಕರ ಉಪಯೋಗಕ್ಕೆ ಬರುವಂಥ ಜಮೀನನ್ನು dispose ಮಾಡಬಹುದು ಎಂದು ತಿಳಿಸಿದ್ದಾರೆ. ಹಾಗೆಯೇ 66ನೆಯ ಕ್ಲಾಜಿನಲ್ಲಿ mines and mineral products ಏನು ಬರುತ್ತವೆ. ಅದೆಲ್ಲ ಸರ್ಕಾರಕ್ಕೆ ಸೇರತಕ್ಕದ್ದು ಎಂದು ತಿಳಿಸಿದ್ದಾರೆ. Land disposal ಅಥವಾ leaseಗೆ ಕೊಡುವ ವಿಚಾರವೆಲ್ಲ land distribution rules ನಲ್ಲಿವೆ ಎಂದು ಕಾಣುತ್ತದೆ. ಒಂದೇ ಒಂದು ಸಲಹೆಯನ್ನು ನಾನು ಸರ್ಕಾರದಮುಂದೆ ಇಡುತ್ತೇನೆ. ಮೈನ್ಸ್ ವಗೈರೆಗಾಗಿ ಲೀಸ್‌ಮೇಲೆಕೊಟ್ಟ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಕೊಡಲಾಗುತ್ತದೆಯೋ ಅದಕ್ಕೇ ಅನೇಕವೇಳೆ ಉಪಯೋಗಿಸಿರುವುದಿಲ್ಲ. ಲೀಸ್‌ಮೇಲೆ ಕೊಟ್ಟ ಜಮೀನಿನಲ್ಲಿ ಹತ್ತಾರುವರ್ಷಕಾಲ ವ್ಯವಸಾಯಮಾಡಲೂ ಅನುಕೂಲವಿಲ್ಲದೆ ಯಾವುದೇ ತರಹ ಖನಿಜ ಅಥವಾ ಅದಿರನ್ನು ತೆಗೆಯದೇ ಹಾಗೇಬಿಡುತ್ತಾರೆ. ಇಂಥದ್ದರ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮತೆಗೆದುಕೊಳ್ಳಬೇಕೆಂದು ಪ್ರಾರ್ಥನೆಮಾಡುತ್ತೇನೆ.

ಇನ್ನೊಂದುಕಡೆ "recovery of the value of natural produce "ಎಂದು 69ನೆಯ ಕ್ಲಾಜಿನಲ್ಲಿ ಹೇಳಿದ್ದಾರೆ. Natural produce ಏನು ಎನ್ನುವುದರಬಗ್ಗೆ ವಿಶದವಾಗಿ ತಿಳಿಸಿದ್ದರೆ ಚೆನ್ನಾಗಿತ್ತು. ಇದರಲ್ಲಿ ಯಾವ ಯಾವುದು ಬರುತ್ತದೆನ್ನುವುದನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಸರ್ವೆ ಸೆಟಲ್‌ಮೆಂಟ್ ಕೆಲಸಗಳನ್ನು ಈ ಕೋಡ್‌ನಲ್ಲಿ ನಾವು ಸೇರಿಸುತ್ತೇವೆಂದು ಹೇಳಿದರು. ಕೋಲಾರ ಜಿಲ್ಲೆಯಲ್ಲಿ ಹಿಂದೆ ಕಂದಾಯ ಜಾಸ್ತಿಮಾಡಲು ಕಾರಣ, ಆ ಕೆಲಸ ಮಾಡಲು ಬಂದಿದ್ದವರಿಗೆ ಕುರಿ ಕೋಳಿ ಸಿಕ್ಕಲಿಲ್ಲವಾದ್ದರಿಂದ ಕಂದಾಯವನ್ನು ಜಾಸ್ತಿ ಮಾಡಿದರೆಂಬುದಾಗಿ ಹಿರಿಯರು ಹೇಳುತ್ತಿದ್ದರು ಎಂದು ಬಹಳ ಸ್ವಾರಸ್ಯವಾಗಿ ಮಂತ್ರಿಗಳು ಹೇಳಿದರು. ಈಗಲೂ ನಮಗೆ ಹಾಗೆಯೇ ಅನ್ನಿಸುತ್ತದೆ. ಸರ್ವೆ ಸೆಟಲ್‌ಮೆಂಟ್ ಅಧಿಕಾರಿಗಳನ್ನಾಗಿ ಯಾರನ್ನು ನೇಮಕ ಮಾಡುತ್ತಾರೆಯೋ ಅವರು ಆ ಜಮೀನಿನ fertility ಏನು ಎಂಬುದನ್ನು ಶಾಸ್ತ್ರೀಯವಾಗಿ ಪರಿಶೀಲನೆಮಾಡಿ ಏನು assessment ಗೊತ್ತುಮಾಡುತ್ತಾರೆಯೋ ಅದರ ಬಗ್ಗೆ ಅನೇಕ ಕಡೆ ಲೋಪದೋಷಗಳಿವೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ನನಗೆ ತಿಳಿದದ್ದರಲ್ಲಿ ಅಧಿಕಾರಿಗಳು ಸರಿಯಾದ ರೀತಿಯಲ್ಲಿ assess ಮಾಡುತ್ತಿಲ್ಲ. ಹಳ್ಳಿಗಳಿಗೆ ಹೋಗಿ ಊರಿನ ಪಕ್ಕದಲ್ಲಿರುವ ಜಮೀನನ್ನು ಮಾತ್ರನೋಡಿ, ಸರಿಯಾದ ಅಂಕಿಅಂಶಗಳನ್ನು ಸಂಗ್ರಹ ಮಾಡದೆ ಎಲ್ಲ ಜಮೀನುಗಳ assess ಮಾಡುತ್ತಿರುವುದರ ಬಗ್ಗೆ ದೂರುಗಳು ಬಂದಿವೆ. ರೈತರಿಗೆ ಈ ತರಹ ಅನ್ಯಾಯವಾಗಬಾರದೆನ್ನುವುದರ ಕಡೆಗೆ ಸರ್ಕಾರ ಪೂರ್ಣ ಗಮನ ಕೊಡಬೇಕೆಂದು ಹೇಳುತ್ತೇನೆ.

ಈ ಮಸೂದೆ ಒಳ್ಳೆಯ ಉದ್ದೇಶದಿಂದ ಕೂಡಿದೆ. ರಾಜ್ಯದಲ್ಲಿರುವ ಐದು ಭಾಗಗಳಿಂದ ಬೇರೆ ಬೇರೆ ರೀತಿಯ ಕಾನೂನು ಇದ್ದುದನ್ನು ಕ್ರೋಢೀಕರಿಸಿ ಒಂದೇ ಕಾನೂನನ್ನು ಜಾರಿಗೆ ತರತಕ್ಕದ್ದು ಒಳ್ಳೆಯದು. ಇದಕ್ಕಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದನೆ ಮಾಡಲು ಸಂತೋಷವಾಗುತ್ತದೆ

ಇದರಲ್ಲಿರಬಹುದಾದ ಲೋಪದೋಷಗಳನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪರಿಶೀಲನೆಮಾಡಿ ಒಳ್ಳೆಯ ರೂಪರೇಖೆ ಕೊಡಬೇಕೆಂದು ಹೇಳಿ, ನನಗೆ ಎರಡು ಮಾತುಗಳನ್ನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಮಾನ್ಯ ಕಂದಾಯ ಮಂತ್ರಿಗಳು ಈ ಮಸೂದೆಯನ್ನು ತಂದದ್ದಕ್ಕೆ ಸ್ವಾಗತಿಸುತ್ತ ಕೆಲವು ಲೋಪದೋಷಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಅಧಿಕಾರಿಗಳನ್ನು ಜಾಸ್ತಿ ಮಾಡತಕ್ಕ ಮನೋಭಾವ ಇವರಿಗೆ ಏಕೆ ಬಂತು ಎಂದು ನಮಗೆ ನಿಜವಾಗಿಯೂ ಬಹಳ ದುಃಖವಾಗುತ್ತದೆ. ಬಹುಭಾಗ ಅಧಿಕಾರಿಗಳು, ಡೆಪ್ಯುಟಿ ಕಮಿಷನರುಗಳು, ಮಂತ್ರಿಗಳ ಪ್ರವಾಸಕಾರ್ಯಕ್ಕಾಗಿಯೇ spare ಆಗಿ ಅವರ ಟೂರ್ ಪ್ರೋಗ್ರಾಂ ಬರುವುದನ್ನೇ ಎದುರು ನೋಡುತ್ತಿರುತ್ತಾರೆ. ಮಂತ್ರಿಗಳು ಬರುವುದಕ್ಕೆ ಎರಡು ಮೂರು ದಿನ ತಡವಾದರೂ, ಅವರು ಬರುವವರೆಗೂ ಕಾದಿರುತ್ತಾರೆ. ಹೀಗಾದರೆ ಅವರು ಮಾಡುವ ಕೆಲಸವಾದರೂ ಏನು ? ಇದನ್ನು ತೀವ್ರವಾಗಿ ಪರಿಶೀಲಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಇವೊತ್ತು ಡೆಪ್ಯುಟಿ ಕಮಿಷನರಿಗೆ ಮತ್ತು ತಹಶೀಲ್ದಾರ್ ಅವರಿಗೆ ಇರತಕ್ಕ ಉದ್ಯೋಗವೆಂದರೆ ಪ್ರತಿಯೊಂದು ಕಮಿಟಿಗೂ ಅವರನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ. ಮೀಟಿಂಗ್‌ಗಳಬಗ್ಗೆ ಅಧ್ಯಕ್ಷತೆ ವಹಿಸುವುದೇ ಅವರ ಕೆಲಸವಾಗಿದೆ. ಯಾವ ಮೀಟಿಂಗಿಗೇ ಆಗಲಿ ಡೆಪ್ಯುಟಿ ಕಮಿಷನರನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ. ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್, ವಿಧಾನಸಭಾ ಸದಸ್ಯರು, ಸ್ಥಳದ ಮುಖ್ಯಾಧಿಕಾರಿಗಳು, ಇವರೆಲ್ಲ ಇದ್ದರೂ ಸಹ ಡೆಪ್ಯುಟಿ ಕಮಿಷನರಾದವರು ಆ ಮೀಟಿಂಗ್‌ಗಳಿಗೆ ಹೋಗಬೇಕು. ನ್ಯಾಯವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳು ಈಗ ಇಲ್ಲವೆಂದಲ್ಲ, ಕೆಲವರಿದ್ದಾರೆ. ಮಧ್ಯಾಹ್ನ ಮೂರು ಗಂಟೆಯನಂತರ ಏನೂ ಕೆಲಸವಿಲ್ಲವೆಂದು ಹೇಳತಕ್ಕ ತಹಸೀಲ್ದಾರರೂ ಇದ್ದಾರೆ. ನಾನೂ ಕೆಲವು ಆಫೀಸುಗಳಿಗೆ ಹೋಗಿ ನೋಡಿದ್ದೇನೆ. ನ್ಯಾಯವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಮೂರು ಗಂಟೆಗೆ ಮೇಲ್ಪಟ್ಟು ಕೆಲಸವಿರುವುದಿಲ್ಲ. ಕೆಲಸ ಮಾಡದೆ ಸೋಮಾರಿಗಳಾಗಿ, ಮಂತ್ರಿಗಳ ಹತ್ತಿರ ಬಂದು ಚಾಡಿ ಹೇಳಿಕೊಂಡು ಓಡಾಡುವವರಿಗೆ ಕೆಲವರಿಗೆ ಕೆಲಸ ಹೆಚ್ಚಾಗಿದೆಯೇ ವಿನಾ ಉಳಿದ ನ್ಯಾಯವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ಆಫೀಸಿನಲ್ಲಿ ಮೂರು ಗಂಟೆಕಾಲ ಕೆಲಸ ಮಾಡುವುದಕ್ಕೂ ಕಾಗದಗಳಿಲ್ಲ.

ನಾವೇನೋ ರೆವೆನ್ಯೂ ಕೋಡ್, ಅದಕ್ಕೆ ಬೇಕಾದ ರೂಲ್ಸ್ ಎಲ್ಲ ಮಾಡುತ್ತೇವೆ. ಆದರೆ ಅದರಂತೆ ಅನೇಕರು ನಡೆಯುತ್ತಿಲ್ಲ. ಯಾವುದಾದರೂ ಜಮೀನನ್ನು ಮಂಜೂರು ಮಾಡಬೇಕಾಗಿದ್ದರೆ, ಸ್ಥಳದಲ್ಲಿರುವವನಿಗೆ ಅದರಲ್ಲಿಯೂ depressed class ಆದವರಿಗೆ ಮೊದಲು ಕೊಡಬೇಕು ಎಂದು ಏನೇನೋ ನಿಯಮಗಳನ್ನು ಹಾಕಿದ್ದಾರೆ. ಅದನ್ನು ಯಾರು ನಿರ್ವಹಿಸುತ್ತಿದ್ದಾರೆ ? ಅವರ ಮನಸ್ಸಿಗೆ ಬಂದರೆ political sufferer ಎಂದು ಹತ್ತು, ಇಪ್ಪತ್ತು, ನಲವತ್ತು, ಐವತ್ತು ಎಕರೆ ಜಮೀನನ್ನು ಬೆಂಗಳೂರಿನಲ್ಲಿರುವವನಿಗೋ, ಮದ್ರಾಸಿನಲ್ಲಿರುವವನಿಗೋ ಕೊಡಬಹುದು. ಆ ರೀತಿ ಕೊಟ್ಟರೆ ಏನು ಕ್ರಮ ತೆಗೆದುಕೊಳ್ಳುವುದಕ್ಕೂ ಅವಕಾಶವಿಲ್ಲ.

11-00 A.M.

ಈಗಿರುವ ಸಬ್‌ಡಿವಿಜನ್ನು ಆಫೀಸರುಗಳನ್ನು ತೆಗೆಯಬೇಕೆಂದು ಹೇಳುತ್ತಿರುವಾಗ ಈ ಅಧಿಕಾರಿಗಳಿಗೇ ಕಂದಾಯದ ವಸೂಲಿ, ಸರ್‌ಚಾರ್ಜು, ಎಮರ್ಜೆನ್ಸಿಗಾಗಿ ದುಡ್ಡು ವಸೂಲಿ, ಇವನ್ನೆಲ್ಲಾ ಮಾಡಬೇಕೆಂದು ಹೇಳುತ್ತಿರುವಾಗ ಅವರು ಪ್ರತಿಯೊಂದರಲ್ಲಿಯೂ ರೈತನ ಮೇಲೂ ಈ ಭಾರವನ್ನು ಹಾಕುತ್ತಾರೆ. ಶ್ರೀಮಂತ ವರ್ಗದವರು ಯಾರು ಬೇಕಾದಷ್ಟು ಹಣವನ್ನಿಟ್ಟುಕೊಂಡು, ಬಂಗಾರವನ್ನಿಟ್ಟುಕೊಂಡು ಇರುತ್ತಾರೋ ಅವರನ್ನೂ ಯಾರೂ ಕೇಳುವುದಿಲ್ಲ. ಬರೀ ಕಂದಾಯ, ಸರ್‌ಚಾರ್ಜು ಎಂದು ನಮ್ಮ ರೈತರಿಗಾಗಿ ಹಾಕುವ ಹೊರೆಯೇ ಜಾಸ್ತಿ. ರೈತರು ಯಾರು ಮಾತನಾಡುವುದಿಲ್ಲ ಎಂದು ಅವರ ಮೇಲೆ ಹೊರಿಸುವ ಹೊರೆಯೇ ಜಾಸ್ತಿಯಾಗಿದೆ. ರೈತರು ಸರ್ಕಾರದ ಭಯದಿಂದ ಸರ್ಕಾರಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟರೆ ಕೋಟ್ಯಾಂತರ ರೂಪಾಯಿಗಳಷ್ಟು ವ್ಯವಹಾರ ಮಾಡುವವರು ೨೫೦ ರೂಪಾಯಿಗಳನ್ನು ತುರ್ತಿನ ನಿಧಿಗಾಗಿ ಎಂದು ಕೊಟ್ಟರೆ, ಇಂತಹ ಮನುಷ್ಯರು ೨೫೦ ನಷ್ಟು ನಿಧಿಗೆ ಕೊಟ್ಟರು ಎಂದು ದೊಡ್ಡದಾಗಿ ಪೇಪರಿನಲ್ಲಿ ಬರೆದು ಮಂತ್ರಿಗಳ ಮತ್ತು ಶ್ರೀಮಂತರ ಫೋಟೋಗಳು ಬರುತ್ತದೆ. ೧೫೦ ರೂಪಾಯಿಗಳಷ್ಟು ಕಂದಾಯ ಕೊಡುವವನಿಂದ, ನಿಧಿಗೆ ಸುಮಾರು ಒಂದು ಸಾವಿರ ರೂಪಾಯಿಗಳಷ್ಟು ಎಂದು ವಸೂಲು ಮಾಡಿದರೂ ಅವನ ವಿಷಯವೇ ಪೇಪರಿನಲ್ಲಿ ಬರುವುದಿಲ್ಲ. ಹೀಗೆ ರೈತರನ್ನು ಉದ್ಧಾರಮಾಡುತ್ತೇವೆ ಎಂದು ಹೇಳಿ ಹೀಗೆ ಮಾಡುವುದು ಏಕೋ ನನಗೊಂದೂ ಅರ್ಥವಾಗುವುದಿಲ್ಲ. ಅಲ್ಲದೇ ಈಗ ಇಲ್ಲಿ ಹೇಳಿರುವಂತೆ ಅಧಿಕಾರಿಗಳನ್ನು ಜಾಸ್ತಿಮಾಡುವುದು ಸರ್ವಥಾ ನ್ಯಾಯವಲ್ಲ. ಮಾನ್ಯ ಸಚಿವರು ಸರ್ವೆ ಸೆಟೆಲ್

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಮೆಂಟು ಕೆಲಸವಾದ ಮೇಲೆ ರೈತರಿಗೆ ಅನುಕೂಲವಾಗುತ್ತದೆಂದು ಹೇಳಿದರು. ಆದರೆ, ಸರ್ವೆಯರುಗಳು ಗ್ರಾಮಗಳಿಗೆ ಬರುತ್ತಾರೆ. ಯಾರು ದುಡ್ಡು ಕೊಡುತ್ತಾರೋ ಅವರಿಗೆ ಕಂದಾಯ ಕಡಮೆ ಹಾಕುತ್ತಾರೆ ಯಾರು ದುಡ್ಡು ಕೊಡುವುದಿಲ್ಲವೋ ಅಂತಹವರ ಭೂಮಿಗೆ ಕಂದಾಯ ಹೆಚ್ಚಾಗಿ ಹಾಕುತ್ತಾರೆ. ಎಷ್ಟು ಹಾಕಿದ್ದಾರೆ ಎನ್ನುವುದು ಕೂಡ ತಿಳಿಯಲು ಕೆಲವು ರೈತರಿಗೆ ತಿಳಿವಳಿಕೆ ಇರುವುದಿಲ್ಲ. ಕೆಲವು ಕಡೆ ರೈತರಿಗೆ ಬಾಗಾಯಿತು ಜಮೀನಿದ್ದರೆ, ಎಷ್ಟು ಕೊಡುತ್ತೀರಿ ಎಂದು ಆ ರೈತನನ್ನು ಕೇಳಿ ಹೊಲ ಎಂದು ಬರೆಯುತ್ತಾರೆ. ಇದನ್ನು ಬೇಕಾದರೆ ಪರೀಕ್ಷೆ ಮಾಡಿ ನೋಡಬಹುದು. ಸೆಟಲ್‌ಮೆಂಟಿಗಾಗಿ ಬರುವವರು ಅಲ್ಲಿ ಎಷ್ಟು ಬೆಳೆ ಬರುತ್ತದೆ, ರೈತನ ಉತ್ಪತ್ತಿ ಏನಿದೆ ಎನ್ನುವುದನ್ನು ಕಂಡು ಹಿಡಿಯದೇ ಸುಮ್ಮನೆ ಬರೆಯುತ್ತಾರೆ. ಅದರಲ್ಲೂ ಈಗ ಟ್ರೇನಿಂಗ್ ಆದ ಸರ್ವೆಯರುಗಳೆಂದು ಬರುತ್ತಾರೆ, ಅವರಿಗೆ ಚೈನು ಹಿಡಿಯುವುದಕ್ಕೇ ಬರುವುದಿಲ್ಲ. ಎಲ್ಲ ಕಡೆಯೂ ಹೀಗೇ ನಡೆಯುತ್ತಿದೆ. ಇದು ಮಾನ್ಯ ಮಂತ್ರಿಗಳಿಗೂ ತಿಳಿದೇ ಇದೆ. ಇದರಲ್ಲಿ ಖಂಡಿತ ಒಂದು ರೂಪಾಯಿನಲ್ಲಿ ಹದಿನೈದಾಣೆ ಹನ್ನೊಂದು ಕಾಸಿನಷ್ಟು ಭಾಗ ಈ ದೇಶದ ಭೂ ಕಂದಾಯದ ಪರಿಸ್ಥಿತಿ ಉತ್ತಮವಾಗಿ ಫಲ ಸರಿಯಾಗಿ ದೊರೆಯುತ್ತದೆ ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಯಾರು ದುಡ್ಡು ಕೊಟ್ಟರೆ ಅವರಿಗೆ ಕಂದಾಯ ಕಡಮೆ ಮಾಡಬಹುದು, ಯಾರು ದುಡ್ಡು ಕೊಡುವುದಿಲ್ಲವೋ ಅಂತಹವರಿಗೆ ಜಾಸ್ತಿ ಮಾಡಬಹುದು. ಇದೆಲ್ಲ ಹಳ್ಳಿಯವರಿಂದ ಬರುವ ಮಾಮೂಲಿನ ಮೇಲೆ ಅವಲಂಬಿಸಿರುತ್ತದೆ. ಇದರಿಂದ ಸಾಮಾನ್ಯ ರೈತ ಎಲ್ಲಿ ಉಳಿಯುತ್ತಾನೆ ಎನ್ನುವುದನ್ನು ತಾವೇ ಯೋಚನೆ ಮಾಡಬಹುದು.

ಇನ್ನು ಇದರಲ್ಲಿ ಹೇಳಿರುವಂತೆ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದರಿಂದ ನಮ್ಮ ಸರಕಾರದ ಕೆಲಸ ಉತ್ತಮವಾಗುತ್ತದೆ ಎಂದು ತಾವು ನಿರೀಕ್ಷೆ ಮಾಡುವುದು ಸರಿಯಲ್ಲ. ಈಗಿರುವ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ ಎಂದು ಅನೇಕ ಸಲವೂ ಹೇಳುತ್ತಿದ್ದೇವೆ. ಆದಷ್ಟು ಕಡಮೆ ಸಂಖ್ಯೆಯಲ್ಲಿ ಅಧಿಕಾರಿಗಳನ್ನಿಟ್ಟು ಸರ್ಕಾರದ ಕೆಲಸ ಮಾಡಬಹುದು. ಅನೇಕ ಸಂದರ್ಭಗಳಲ್ಲಿ ದುಡ್ಡು ಹೆಚ್ಚಾಗಿ ವೆಚ್ಚವಾಗುತ್ತದೆ. ನಮ್ಮ ಕಣ್ಣಿಗೇ ಕಾಣುವಂತೆ ಈ ಹಿಂದೆ ಬೆಟರುಮೆಂಟು ಲೇವಿ ಆಫೀಸರುಗಳೆಂದು, ಎಸ್.ಡಿ.ಓ. ಗ್ರೇಡಿನಲ್ಲಿ ನೇಮಿಸಿದರು. ಸುಮಾರು ಎರಡು ವರ್ಷಗಳಿಂದ ಅವರೇನು ಕೆಲಸ ಮಾಡಿದರೋ ನಮಗೆ ಗೊತ್ತಾಗಲಿಲ್ಲ. ಹೀಗೇಕೆ ಅಧಿಕಾರಿಗಳನ್ನು ನೇಮಿಸಿ ಸಂಬಳ ಕೊಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಬೆಟರುಮೆಂಟು ಲೇವಿ ಆಫೀಸರುಗಳಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಎಷ್ಟು ದಿವಸ ಇವರಿಗೆ ಸಂಬಳ ಕೊಟ್ಟಿರಿ ? ಅವರಿಂದ ಎಷ್ಟು ದುಡ್ಡು ಸರಕಾರಕ್ಕೆ ವಸೂಲಾಯಿತು ? ಹಾಗೆ ಈ ಕಾನೂನು ಮುಂದೆ ಬರುತ್ತದೆ ಎಂದು ಅದಕ್ಕೆ ಮೊದಲೇ ಅಧಿಕಾರಿಗಳನ್ನು ಅಪಾಯಿಂಟು ಮಾಡಿ ಕಳುಹಿಸುತ್ತಾರೆ. ಈಗಿರುವ ಅಧಿಕಾರಿಗಳಿಗೇ ಕೆಲಸವಿಲ್ಲ ಹೀಗಿರುವಾಗ ಯಾರಿಗೆ ಯಾರು ಎಷ್ಟು ಕೆಲಸ ಎನ್ನುವುದನ್ನು ನಿಗದಿ ಮಾಡದೆ ಸುಮ್ಮನೆ ಅಧಿಕಾರಿಗಳನ್ನು ನೇಮಿಸಿದರೆ ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಒಂದು ಆಫೀಸಿನಲ್ಲಿ ನಾಲ್ಕು ಜನ ಕ್ಲಾರ್ಕುಗಳಿದ್ದರೆ ಅವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ಪುನಃ ನೌಕರರನ್ನು ನೇಮಿಸಿದರೆ, ಅಲ್ಲಿದ್ದವರಿಗೆ ಬರುವ ಕಾಸು ಹೋಗುತ್ತದೆ ಎನ್ನುವುದನ್ನು ನಾವು ನೋಡಿದ್ದೇವೆ. ಈ ಮಂತ್ರಿಗಳ ಆಫೀಸಿನಲ್ಲಿ ಅನೇಕ ಜನ ನೌಕರರುಗಳಿಗೆ ನಾವು ನೋಡಿದ ಹಾಗೆ ಕೆಲಸವೇ ಇಲ್ಲ. ಅಂತಹವರನ್ನು ಕೆಲಸವಿರುವ ಕಡೆ ನೇಮಿಸಿ ಸರಿಪಡಿಸಬೇಕು. ಇದನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ವ್ಯವಸ್ಥೆ ಮಾಡಬೇಕು. ಇಲ್ಲದೇ ಸುಮ್ಮನೆ ವಿಶ್ವಾಮಿತ್ರ ಸೃಷ್ಟಿಯಂತೆ ಇಷ್ಟು ಅಧಿಕಾರಿಗಳನ್ನು ನೇಮಕ ಮಾಡಿ ತ್ರಿಶಂಕು ಸ್ವರ್ಗಕ್ಕೆ ವಿಶ್ವಾಮಿತ್ರ ಕಳುಹಿಸಿದಂತೆ ಏಕೆ ಮಾಡುತ್ತೀರಿ ? ಈ ರೀತಿ ನಿರ್ಮಾಣ ಮಾಡಬೇಡಿ. ಸಾಧ್ಯವಾದಮಟ್ಟಿಗೂ ರೈತರಿಗೆ ಸೌಕರ್ಯಗಳನ್ನು ಮಾಡಿ ಕೊಡಲು ಎಷ್ಟು ಮಿನಿಮಂ ಸಂಖ್ಯೆಯಲ್ಲಿ ಅಧಿಕಾರಿಗಳು ಬೇಕೋ ಅಷ್ಟು ಇರಲಿ.

ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ ಏಕರೂಪತೆಯ ಗುರಿಯನ್ನಿಟ್ಟುಕೊಂಡು ಅದನ್ನು ಸಾಧಿಸಲು ಸಹಾಯಕವಾಗಿರತಕ್ಕ ಭೂಕಂದಾಯದ ಸುಧಾರಣಾ ಮಸೂದೆಯನ್ನು ತರುವುದರಲ್ಲಿ ಸರ್ಕಾರವು ವಿಫಲವಾಗಿದೆ ಎಂದು ನನಗನ್ನಿಸುತ್ತದೆ.

ಭಾರತ ದೇಶ ಬಹುತೇಕವಾಗಿ ರೈತರನ್ನೊಳಗೊಂಡಿರತಕ್ಕ ದೇಶ. ಯಾವುದೇ ಕಾಯಿದೆಯನ್ನು ನಾವು ಮಾಡಿದರೂ ಅದು ರೈತನ ಜೀವನವನ್ನು ಸುಗಮವಾಗಿ ಮಾಡುವುದರಲ್ಲಿ ಒಂದು ಹೆಜ್ಜೆಯನ್ನಾದರೂ ಮುಂದೆ ಇಡುವಂತೆ ಸಹ ಹಾಗಿದ್ದರೆ, ಅಂತಹ ಮಸೂದೆಯನ್ನು ನಾವೆಲ್ಲ ಮೆಚ್ಚಿಕೊಳ್ಳತಕ್ಕದ್ದು. ಮೈಸೂರು ಸಂಸ್ಥಾನದಲ್ಲಿ ೧೮೮೮ನೇ ಇಸವಿಯಿಂದ ಜಾರಿಯಲ್ಲಿದ್ದಂತಹ

ಹಲವಾರು ವಿಧಿಗಳನ್ನು ಸೇರಿಸಿ ಒಂದು ಹೊಸ ಭೂಕಂದಾಯದ ಮಸೂದೆಯನ್ನು ಮಾಡಿ ಮಾನ್ಯ ಸಚಿವರು ನಮ್ಮ ಮುಂದಿಟ್ಟಿದ್ದಾರೆ. ದೇಶದಲ್ಲಿ ಅನೇಕ ಬದಲಾವಣೆಗಳು ಆಗಿ ಹೋಗಿವೆ. ಹೊಸ ನ್ಯಾಯ ತತ್ವಗಳನ್ನು ಅನುಸರಿಸುತ್ತೇವೆ ಎಂದು ಹೇಳಿ ಹಳ್ಳಿಯವರ ಜೀವನಕ್ಕೆ ಬೇಕಾದ ಅನುಕೂಲಗಳನ್ನೆಲ್ಲಾ ಮೂಲೆಗೊತ್ತಿದ್ದೇವೆ. ಆದರೂ ಹೊಸ ಧ್ಯೇಯ ಸನ್ನಿವೇಶಗಳಿಗನುಗುಣವಾಗಿ ಭೂ ಮಸೂದೆ ನಮ್ಮ ಮುಂದೆ ಬರಲಿಲ್ಲವಲ್ಲಾ ಎಂಬ ಶಂಕೆ ನಮ್ಮನ್ನು ಬಾಧಿಸುತ್ತಿದೆ. ಭೂಕಂದಾಯದ ಮಸೂದೆ ನಿಜವಾಗಿಯೂ ಏಕ ರೂಪತೆಯನ್ನು ಸಾಧಿಸಿದೆ. ಆ ಇಡೀ ಮೈಸೂರು ರಾಜ್ಯದಲ್ಲಿಯೂ ಏಕ ರೂಪವಾದ ಶಾಸನವನ್ನು ತರಬೇಕೆಂದು ಹೇಳುವುದರಲ್ಲಿ ಅನುಮಾನವಿಲ್ಲ ಏಕ ರೂಪತೆಯನ್ನು ತರುವ ಪ್ರಯತ್ನದಲ್ಲಿ ಕಾಲ ವಿಳಂಬವಾಗುತ್ತದೆ ಎಂದು ಮಾನ್ಯ ಸಚಿವರು ಹೇಳಿದ್ದನ್ನು ನಾವೂ ಕೂಡ ಒಪ್ಪುತ್ತೇವೆ. ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ತಮ್ಮ ಭಾಷಣದಲ್ಲಿ ಈ ಅಧಿಕಾರಿಗಳನ್ನು ಸೃಷ್ಟಿ ಮಾಡತಕ್ಕ ನೀತಿಯನ್ನು ಟೀಕೆ ಮಾಡಿದ್ದಾರೆ. ಕಳೆದ ಹದಿನೈದು ವರ್ಷಗಳಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲೇ ಉದಾಹರಣೆಯಾಗಿ ತೆಗೆದುಕೊಂಡರೆ ಸುಮಾರು ನೂರಕ್ಕೆ ನೂರರಷ್ಟು ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿದೆ. ಅಧಿಕಾರಿಗಳನ್ನು ಹೆಚ್ಚು ಮಾಡುತ್ತ ಹೋಗುವುದರಿಂದ ಜನರ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆದುಹೋಗತಕ್ಕ ಭರವಸೆ ಇದೆಯೇ ಎಂದು ಪ್ರಶ್ನೆ ಮಾಡಿದರೆ ಅದಕ್ಕೆ ದೊರಕತಕ್ಕ ಉತ್ತರವನ್ನು ಊಹಿಸುವುದು ಕಷ್ಟವೇನೂ ಅಲ್ಲ.

ಹಿಂದಕ್ಕೆ ಒಂದು ಕಾಗದ ಸರಕಾರದ ಮಟ್ಟದಲ್ಲಿ ತಹಶೀಲದಾರರ ಮಟ್ಟದಲ್ಲಿ ಎಷ್ಟು ವಿಚಕ್ಷಣೆಯಿಂದ ಮುಂದೆ ಹೋಗುತ್ತಿದ್ದಿತೋ ಅಷ್ಟೇ ವಿಚಕ್ಷಣೆಯಿಂದ ಈಗಲೂ ಮುಂದೆಹೋಗುತ್ತದೆ. ಇದು ಏಕೆ ಹೀಗೆ ಆಗಿದೆಎಂಬುದಕ್ಕೆ ಕಾರಣ ಹುಡುಕಬೇಕಾಗಿದೆ. ರೆವೆನ್ಯೂಇಲಾಖೆಯಲ್ಲಿ ಈರೀತಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ವಿಳಂಬ ಮತ್ತು ನಿಧಾನವಾಗುವುದನ್ನು ಪ್ರತಿ ದಿವಸ ನೋಡುತ್ತೇವೆ. ಇದರಲ್ಲಿ ಏನಾದರೂ ಸುಧಾರಣೆ ಮಾಡಲು ಮನಃಪೂರ್ವಕವಾಗಿ ನಾವು ಪ್ರಯತ್ನ ಮಾಡಿಲ್ಲ. ಅಧಿಕಾರಿಗಳನ್ನು ಹೆಚ್ಚಿಗೆ ಮಾಡುವ ಸರಕಾರದ ನೀತಿಯ ಬಗ್ಗೆ ಪ್ರಶ್ನೆ ಮಾಡಬೇಕಾಗಿದೆ. ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ದ್ವಿಗುಣಿತರಾಗಿದ್ದಾರೆ. ತಾಲ್ಲೂಕು ಮಟ್ಟದಲ್ಲೂ ಅಧಿಕಾರಿಗಳು ದ್ವಿಗುಣವಾಗಿದ್ದಾರೆ. ಎಲ್ಲಿ ನೋಡಿದರೂ ಅಧಿಕಾರಿಗಳು ಕಾಣುತ್ತಾರೆ ಆದರೆ ಎಷ್ಟರಮಟ್ಟಿಗೆ ಜನರ ಕೆಲಸ ಕಾರ್ಯಗಳು ಆಗಬೇಕೋ ಅಷ್ಟುಮಟ್ಟಿಗೆ ಆಗುತ್ತಿಲ್ಲ ಎನ್ನುವುದು ಸರ್ವೇ ಸಾಮಾನ್ಯವಾಗಿ ಎಲ್ಲರ ಅನುಭವಕ್ಕೆ ಬರುತ್ತಿದೆ. ಈ ಸಭೆಯ ಮುಂದೆ ಅಡಿಷನಲ್ ಡೆಪ್ಯುಟಿ ಕಮಿಷನರ್ ನೇಮಕದ ಬಗ್ಗೆ ಮಸೂದೆ ಬಂದಾಗ್ಗೆ ಅದು ಅನಾವಶ್ಯಕ ಎಂದು ನಾವೆಲ್ಲರೂ ಹೇಳಿದ್ದೇವೆ. ಈಗ್ಗೆ ಕಂದಾಯ ಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟರು. ಕೆಲವು ಜಿಲ್ಲೆಗಳಲ್ಲಿ ರೆವೆನ್ಯೂ ಬಾಬು ಬಹಳ ಹಿಂದೆ ಬಿದ್ದಿದೆ. ಅದನ್ನೆಲ್ಲ ಚೆಕ್ ಮಾಡುವುದಕ್ಕೆ ಹೊಸ ಅಧಿಕಾರಿಗಳನ್ನು ಸೃಷ್ಟಿಸುವುದು ಅಗತ್ಯವಾಗಿದೆ. ಆದ್ದರಿಂದ ಈ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳಿದರು. ಆದರೆ ಇವತ್ತಿನ ದಿವಸ ಏನಾಗಿದೆಂದರೆ ಆ ಮಸೂದೆಯಲ್ಲಿ ಇರುವ ಹಾಗೆ ಅಡಿಷನಲ್ ಡೆಪ್ಯೂಟಿ ಕಮಿಷನರ್ ಅವರಿಗೆ ಏನಾದರೂ ಅಧಿಕಾರವಿದೆಯೇ ಎಂದು ಅನುಮಾನ ಬರುತ್ತದೆ. ಅನೂಚಾನವಾಗಿ ಅಧಿಕಾರಿಗಳ ಸೃಷ್ಟಿಯಾಗುತ್ತಿದೆಯೋ ಏನೋ ಎಂಬ ಅನುಮಾನ ಬರುತ್ತದೆ. ಸರಕಾರದ ವ್ಯವಹಾರವನ್ನು ನೋಡಿದರೆ ಒಂದು ಸಾರಿ ಹೊಸ ಆಫೀಸು ಸೃಷ್ಟಿ ಮಾಡಿದರೆ ಆ ಆಫೀಸ್‌ನ್ನು ಪುನಃ ಮುಚ್ಚುವುದಿಲ್ಲ, ಅದರಲ್ಲಿ ಸರಕಾರ ಕೈಹಾಕುವುದಿಲ್ಲ, ಆದುದರಿಂದ ಹೊಸ ಅಧಿಕಾರಿಗಳನ್ನು ಸೃಷ್ಟಿ ಮಾಡತಕ್ಕಂಥ ವಿಚಾರದಲ್ಲಿ ಸರಕಾರ ಬಹಳ ನಿಧಾನವಾಗಿ ಹೋಗಬೇಕು. ವ್ಯವಧಾನದಿಂದ ಸರಕಾರ ಆಲೋಚನೆ ಮಾಡಬೇಕು. ಯಾವ ಯಾವ ಜಿಲ್ಲೆಗಳಲ್ಲಿ ಈ ಅಡಿಷನಲ್ ಡೆಪ್ಯೂಟಿ ಕಮಿಷನರ್‌ಗಳನ್ನು ನೇಮಕ ಮಾಡಿದ್ದಾರೆಯೋ ಅಂಥಲ್ಲಿ duplication of duties ಆಗಿರುವುದು ನಮಗೆ ಕಂಡುಬರುತ್ತದೆ. ಮಂಡ್ಯ ಜಿಲ್ಲೆಯೊಂದರಲ್ಲಿ ಮಾತ್ರ ಅದಕ್ಕೆ ಒಂದು ಒಳ್ಳೇ ಕಾರಣವಿದ್ದಿತು. ಆದರೆ ಬೇರೆ ಕಡೆ ಅಂಥ ಕಾರಣವಿದ್ದುದು ಕಂಡು ಬರುವುದಿಲ್ಲ, ಅಧಿಕಾರಿಗಳನ್ನು ಜಾಸ್ತಿ ಮಾಡುತ್ತಾ ಹೋದರೆ ಉತ್ತರೋತ್ತರ ಕೋ-ಆರ್ಡಿನೇಷನ್ ಸಾಧ್ಯವಾಗುವುದಿಲ್ಲ ಎಂಬುದನ್ನು ಈ ಸಮಯದಲ್ಲಿ ಸರಕಾರದ ಜ್ಞಾಪಕಕ್ಕೆ ತರಬೇಕಾಗಿದೆ. ತಾಲ್ಲೂಕ್ ಮಟ್ಟದಲ್ಲಿ ಅಮಲ್ದಾರರು ಮುಖ್ಯ ಅಧಿಕಾರಿಗಳು, ಇವತ್ತಿನ ದಿವಸ ಅಮಲ್ದಾರರು ಇರುತ್ತಾರೆ. ಅಡಿಷನಲ್ ಅಮಲ್ದಾರರು ಇರುತ್ತಾರೆ, ಎಕ್ಸಟ್ರಾ ಅಧಿಕಾರಿಗಳೊಬ್ಬರು ಇರುತ್ತಾರೆ. ಈ ರೀತಿ ವಿಸ್ತರಣೆ ಹೊಂದಿದೆ. ಇದಲ್ಲದೆ ಇನ್ನೂ 50 ಡೆಪ್ಯೂಟಿ ಬಿ. ಡಿ. ಓ. ನೇಮಕ ಮಾಡಬೇಕೆಂದು ಸರಕಾರ ಯೋಚನೆ ಮಾಡಿದೆಂದು ವರ್ತಮಾನ ಪತ್ರಿಕೆಗಳಲ್ಲಿ ಓದಿದ್ದೇನೆ. ಇದನ್ನು ನೋಡಿದರೆ ಸರಕಾರ ಇರುವುದು ಕೆಲವು ಜನಗಳಿಗಾಗಿ ಹುದ್ದೆ ಕಲ್ಪನೆ ಮಾಡುವುದಕ್ಕೋಸ್ಕರವಾಗಿಯೇ ಎಂದು ಅನಿಸುತ್ತದೆ. ಕೆಲವು ಜನರ ಜೀವನ ಸುಧಾರಣೆ ಮಾಡುವದಕ್ಕಾಗಿಯೇ ಸರಕಾರ ಎಲ್ಲ ವ್ಯವಹಾರ ನಡೆಸುತ್ತಿದೆಯೋ ಏನೋ ಎಂದು ಶಂಕೆಯುಂಟಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ರೆವಿನ್ಯೂ ಇಲಾಖೆಯ ಆಡಳಿತ ಹದಗೆಟ್ಟಿದೆ

(ಶ್ರೀ ಎಸ್. ಎಂ. ಕೃಷ್ಣ)

ಎನ್ನುವುದನ್ನು ಬಹಳ ವಿಷಾದದಿಂದ ರೆವೆನ್ಯೂ ಸಚಿವರ ಅವಗಾಹನೆಗೆ ತರಬೇಕಾಗಿದೆ. ಬಿ. ಡಿ. ಓ. ಏನು ಕೆಲಸ ಮಾಡಬೇಕು, ತಹಶೀಲದಾರರು ಏನು ಕೆಲಸ ಮಾಡಬೇಕು ಎಂಬ ಸ್ಪಷ್ಟ ಚಿತ್ರವಿಲ್ಲ, ಅಧಿಕಾರಿಗಳ ನಡುವೆ ಸಾಮರಸ್ಯ ಇಲ್ಲದಿದ್ದರೆ ಯಾವ ಕೆಲಸವೂ ನಡೆಯುವುದಿಲ್ಲ ಎಂಬುದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಗ್ರಾಮಾಭಿವೃದ್ಧಿ ಕೆಲಸ ಮಾಡಬೇಕಾದುದು ಮುಖ್ಯ. ಈಗ ಪಂಚಾಯಿತಿ ರಾಜ್ಯ ರಚನೆ ಮಾಡುವ ಕಾರ್ಯ ಭಾರತ ಸರಕಾರ ಮಾಡಿದೆ. ಭೂಕಂದಾಯ ವಸೂಲ್ಮಾಡತಕ್ಕ ಅಧಿಕಾರ ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಬೇಕೋ ಬೇಡವೋ ಎಂಬ ಹಲವಾರು ವಿಚಾರಗಳ ಬಗ್ಗೆ ಯೋಚನೆ ನಡೆದಿದೆ. ನಮ್ಮ ರಾಜ್ಯದಲ್ಲಿ ಇದಕ್ಕಾಗಿ ಒಂದು ಸಣ್ಣ ಸಮಿತಿಯನ್ನು ನೇಮಕ ಮಾಡಿದ್ದಾರೆ. ಈ ಸಮಿತಿ ಏನು ಅಭಿಪ್ರಾಯ ಕೊಡುತ್ತದೆ ಎನ್ನುವುದನ್ನು ಕಾದು ನೋಡಬೇಕಾಗಿದೆ. ಈ ವಿಚಾರವನ್ನು ಮಸೂದೆಯಲ್ಲಿ ಸ್ಪಷ್ಟವಾಗಿ ಕಾಣಿಸಿಲ್ಲ. ಹಿಂದೆ ಬ್ರಿಟಿಷರ ಕಾಲದಲ್ಲಿ ಯಾವ ಮನೋಭಾವನೆಯಿಂದ ಕಂದಾಯ ವಸೂಲ್ಮಾಡುತ್ತಿದ್ದರೋ ಅದೇ ಮನೋಭಾವನೆಯಿಂದ ಈಗ ಪ್ರಜಾಪ್ರಭುತ್ವ ಸರಕಾರ ಬಂದಮೇಲೂ ವಸೂಲ್ಮಾಡಲು ಹೊರಟಿದ್ದಾರೆ. ಇಂದು ಭೂಕಂದಾಯ ಪಡೆಯುವ ದೃಷ್ಟಿಯಲ್ಲಿ ಮನೋಭಾವನೆಯಲ್ಲಿ, ಮೂಲ ಭೂತವಾದ ಕ್ರಾಂತಿಕಾರಕವಾದ ಬದಲಾವಣೆಯನ್ನು ಮಾಡಬೇಕಾಗಿದೆ. ಇಂಥದೊಂದು ಕ್ರಾಂತಿಕಾರಕ ಬದಲಾವಣೆಗೆ ಈ ಮಸೂದೆಯಲ್ಲಿ ಅವಕಾಶವಿಲ್ಲ. ವಿಮರ್ಶೆಮಾಡಿ ನೋಡಿದರೆ ಈ ಮಸೂದೆ ಯಾವರೀತಿಯ ಸುಧಾರಣೆ ಮಾಡುವುದಕ್ಕೆ ಹೊರಟಿಲ್ಲ ಎಂದು ಅನಿಸುತ್ತದೆ.

ಈ ಸೆಟಲ್‌ಮೆಂಟ್ ವಿಚಾರದಲ್ಲಿ ನಮಗೆ ಕಂದಾಯ ಮಂತ್ರಿಗಳು ಹಲವಾರು ಭರವಸೆಗಳನ್ನು ಕೊಟ್ಟರೂ ನಮ್ಮ ದೇಶದಲ್ಲಿ ಅದರಲ್ಲಿಯೂ ನಮ್ಮ ಸಂಸ್ಥಾನದಲ್ಲಿ, ರೈತಾಪಿ ಜನರಲ್ಲಿ ಒಂದು ರೀತಿಯ ಅನಿಶ್ಚಿತತೆ ಇವೊತ್ತು ಉಂಟಾಗಿದೆ. ಕಳೆದ ಸೆಷನ್ನಿನಲ್ಲಿ ನಾವು 100ಕ್ಕೆ 100ರಷ್ಟು ಭೂಗಂದಾಯವನ್ನು ಜಾಸ್ತಿ ಮಾಡಿದೆವು: ಅದಕ್ಕೆ ಸರ್ಚಾರ್ಜ್ ಎಂದಾದರೂ ಕರೆಯಿರಿ ಏನಾದರೂ ಕರೆಯಿರಿ. ಯಾವ ಹೆಸರಿನಲ್ಲಿ ಕರೆದರೂ ಅದು ಪ್ರತ್ಯಕ್ಷ ರೈತರಮೇಲೆಯೇ ಪರಿಣಾಮ ಉಂಟಾಗುವುದು ಇವೊತ್ತು ದುರ ದೃಷ್ಟದಿಂದ ನಮ್ಮ ರೈತಾಪಿ ಜನ ಬೆಳೆಯತಕ್ಕಂಥ ಭತ್ತದ ಬೆಲೆ ಭಯಂಕರವಾಗಿ ಇಳಿಯುತ್ತಾ ಬಂದಿದೆ. ಇದೇ ರೀತಿಯಲ್ಲಿ ಭತ್ತದ ಬೆಲೆ ಇಳಿಯ ತೊಡಗಿದರೆ ಕಂದಾಯವನ್ನು ಕೊಡುವುದರ ಮೇಲೆಯೂ ಎಲ್ಲ ಪರಿಣಾಮವಾಗುತ್ತದೋ ? ಈ ಹಿನ್ನೆಲೆಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರುಗಳು ಡಿಮ್ಯಾಂಡ್ ನೋಟೀಸ್ ತಗೆದುಕೊಂಡು ಹೊರಟುಬಿಟ್ಟಿದ್ದಾರೆ. ಈಗ ರೈತರಿಗೆ ಜೀವನಕ್ಕೆ ಬೇಕಾದಂಥ ಎಲ್ಲ ವಸ್ತುಗಳ ಬೆಲೆಗಳೂ ಕೂಡ ಹೆಚ್ಚಿ ಒಂದೇ ಮಟ್ಟದಲ್ಲಿವೆ, ಆದರೆ ನಮ್ಮರೈತಾಪಿ ಜನ ಏನು ಪಾಪ ಮಾಡಿದ್ದಾರೋ ಅವರು ಬೆಳೆಯತಕ್ಕಂಥ ಧಾನ್ಯಗಳ ಬೆಲೆ ಮಾತ್ರ ಭಯಂಕರವಾಗಿ ಇಳಿಯುತ್ತಾ ಇರತಕ್ಕಂಥಾ ರೀತಿಯಲ್ಲಿ ಸರ್ಕಾರ ಮಧ್ಯೇ ಪ್ರವೇಶ ಮಾಡುವುದಕ್ಕೆ ಕಾಲ ಸನ್ನಿಹಿತವಾಗಿದೆ. ಹಾಗೆಯೇ ಒಂದು ಪಕ್ಷ ಸರ್ಕಾರ ಕಣ್ಣುಮುಚ್ಚಿ ಕುಳಿತರೆ, ಬಹುಶಃ ಅವರ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದಂತೆ ಆಗುವುದಿಲ್ಲ ಎಂಬ ಮಾತನ್ನು ಸರ್ಕಾರದವರ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ.

ಅಸೆಸ್‌ಮೆಂಟ್ ವಿಚಾರದಲ್ಲಿಯೂ ಕೂಡ, ಸೆಟಲ್‌ಮೆಂಟ್ ಮಾಡುವಾಗಲೂ ಕೂಡ, ಸೆಟಲ್ ಮಾಡತಕ್ಕಂಥ ಅಧಿಕಾರಿಗಳು ಕುರಿ, ಕೋಳಿ, ಕೋಣ, ಇವುಗಳ ದಾಕ್ಷಿಣ್ಯಕ್ಕೆ ಬೀಳದೆ, ಮುಖ್ಯವಾಗಿ ಈ ವಿಧಿಯಲ್ಲಿ ಏನೇನು ಕಾರ್ಯಕ್ರಮಗಳನ್ನು ನೀವು ನಿವೇದನೆ ಮಾಡಿದ್ದೀರೋ, ಅವುಗಳ ಮೂಲಕವಾಗಿ ರೆವಿನ್ಯೂ ಅಧಿಕಾರಿಗಳು ಹೋದರೆ ರೈತರಿಗೆ ಅನುಕೂಲವಾಗುತ್ತದೆಂದು ನಾನು ಭಾವನೆ ಮಾಡುತ್ತೇನೆ. ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಕೆಲವು ಕಡೆ ಒಂದು ಪ್ರದೇಶದಲ್ಲಿ ರೈತಾಪಿ ಜನರು ವರ್ಷಕ್ಕೆ ಮೂರು ಬೆಳೆ ತೆಗೆಯುತ್ತಿದ್ದಾರೆ. ಅವರೂ ಒಂದೇ ಕಂದಾಯ ಒಂದೇ ವಾಟರ್‌ರೇಟ್ ಒಂದೇ ಕಂಟ್ರಿಬೂಷನ್ ಕೊಡುತ್ತಿದ್ದಾರೆ. ಇನ್ನೂ ಕೊಂಚ ಮುಂದೆ ಹೋದರೆ, tail end ಪ್ರದೇಶಗಳಲ್ಲಿ ಒಂದು ಬೆಳೆಯನ್ನು ಬೆಳೆಯುವುದಕ್ಕೆ ಕೂಡ ಬಹಳ ಕಷ್ಟವಾಗಿದೆ ಇಂಥ ಉದಾಹರಣೆಗಳನ್ನು ನಮ್ಮ ಮೈಸೂರು ಸಂಸ್ಥಾನದಲ್ಲಿ ಬೇಕಾದಷ್ಟನ್ನು ನಾವು ಕೊಡಬಲ್ಲೆವು. ಆದರೆ ಆ ಜನರೂ ಅದೇ ವಾಟರ್‌ರೇಟ್, ಅದೇ ಕಂಟ್ರಿಬೂಷನ್, ಅದೇ ಕಂದಾಯವನ್ನು ಕೊಡಬೇಕು ಎಂದು ಹೇಳುವುದರಲ್ಲಿ ಯಾವ Justice equity ಇದೆ ಎನ್ನುವುದನ್ನು ಸರ್ಕಾರದವರು ಕೊಂಚಮಟ್ಟಿಗೆ ಆಲೋಚನೆ ಮಾಡಬೇಕು. ಸರ್ಕಾರ ರೈತ ಜನರಿಗೆ ಒದಗಿಸಿಕೊಡುವ ಅವಕಾಶಗಳೂ ಮತ್ತು ಸೌಲಭ್ಯಗಳಿಗೆ ತಕ್ಕ ರೀತಿಯಲ್ಲಿ ನಾವು ಒಂದು ಕಂದಾಯವನ್ನು ನಿರೀಕ್ಷಣೆ ಮಾಡಬೇಕಾಗಿದೆ. ತೆಗೆದುಕೊಳ್ಳಬೇಕಾಗಿದೆ. ಈ ಒಂದು ವಿಚಾರವನ್ನು ಕೂಡ ಕಂದಾಯ ಮಂತ್ರಿಗಳು ತಮ್ಮ ಮನಸ್ಸಿನಲ್ಲಿಟ್ಟುಕೊಂಡರೆ ಬಹಳ ಅನುಕೂಲವಾಗುತ್ತದೆಂದು ನಾನು ಭಾವನೆ ಮಾಡುತ್ತೇನೆ.

ಈ ಡಿವಿಜನ್ ಕಮಿಷನರುಗಳು ಎಂದು ಪ್ರತಿಯೊಂದು ಡಿವಿಜನ್ನಿಗೂ ಒಬ್ಬೊಬ್ಬ ಉನ್ನತಾಧಿಕಾರಿಯನ್ನು ಸರ್ಕಾರದವರು ನಾಮಕರಣ ಮಾಡಿದ್ದಾರೆ. ಹಳೇ ಮೈಸೂರಿನಲ್ಲಿ ಒಬ್ಬ ರೆವಿನ್ಯೂ ಕಮಿಷನರು ಇದ್ದರು, ಇವತ್ತಿನ ದಿವಸ ವಿಸ್ತೃತವಾದ ಈ ಮೈಸೂರಿನಲ್ಲಿ ನಾಲ್ಕು ಜನ ಡಿವಿಜನಲ್ ಕಮಿಷನರ್‌ಗಳನ್ನು ನೇಮಕ ಮಾಡಿದ್ದಾರೆ. ಈ ಡಿವಿಜನಲ್ ಕಮಿಷನರುಗಳ ಆಫೀಸುಗಳು ಅವು ಕೇವಲ ಪೋಸ್ಟ್ ಆಫೀಸು. ಡಿವಿಜನಲ್ ಕಮಿಷನರುಗಳು ರಚನಾತ್ಮಕವಾಗಿ, ಕ್ರಿಯಾತ್ಮಕವಾಗಿ ಏನನ್ನಾದರೂ ಸಾಧನ ಮಾಡುತ್ತಿದ್ದಾರೆಯೇ ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಕೇವಲ ದೊಡ್ಡ ದೊಡ್ಡ ಅಧಿಕಾರಿಗಳನ್ನು ನೇಮಕ ಮಾಡಿಬಿಟ್ಟು ಅಧಿಕಾರಿಗಳ ಕೆಳಗಡೆ 7-8 ಜನ ಅಸಿಸ್ಟೆಂಟ್ ಕಮಿಷನರುಗಳನ್ನು ಕೂಡಿಸಿರುವುದು ರೈತರ ದೃಷ್ಟಿಯಿಂದ ಬಹಳ ತೊಂದರೆಯಾಗಿದೆ. ಈ ಡಿವಿಜನಲ್ ಕಮಿಷನರು ಏನು ನಿರ್ಣಯವನ್ನು ಮಾಡುತ್ತಾರೆಯೋ ಅಥವಾ ಏನು ತೀರ್ಮಾನವನ್ನು ಮಾಡುತ್ತಾರೆಯೋ ಆ ಎಲ್ಲಾ ತೀರ್ಮಾನಗಳೂ ಸರ್ವೆ ಸಾಮಾನ್ಯವಾಗಿ ಸರ್ಕಾರ ಮಟ್ಟಕ್ಕೆ ಒಂದಲ್ಲ ಒಂದು ರೀತಿಯಲ್ಲಿ—ಇಲ್ಲ ಒಂದು ಅಪೀಲು ರೀತಿಯಲ್ಲಿ ಅಥವ ಒಂದು ಡಿವಿಜನ್ ರೀತಿಯಲ್ಲಿ ಬರುತ್ತವೆ. ಆದ್ದರಿಂದ ಡೆಪ್ಯುಟಿ ಕಮಿಷನರುಗಳು ಸ್ಥಳದ ವಿದ್ಯಮಾನಗಳನ್ನು ಕೂಡ ಪರಿಶೀಲನೆ ಮಾಡಿ ಒಂದು ತೀರ್ಮಾನವನ್ನು, ನಿರ್ಣಯವನ್ನು ತೆಗೆದುಕೊಂಡಾಗ, ಅದರ ಮೇಲೆ ನೇರವಾಗಿ ರೆವಿನ್ಯೂ ಅಪಲೇಟ್ ಟ್ರಿಬ್ಯುನಲ್ಲಿಗೇ ಅಥವಾ ಸರ್ಕಾರಕ್ಕೆ ಹೋಗತಕ್ಕಂಥ ಅವಕಾಶವನ್ನು ನಾವು ಏಕೆ ಕೊಡಬಾರದು. ಈ ಮಸೂದೆಯನ್ನು ತಿದ್ದುಪಾಡು ಮಾಡಿ—ಈ ವಿಚಾರದಲ್ಲಿಯೂ ಕೂಡ ನಾವು ಕೊಂಚಮಟ್ಟಿಗೆ ಆಲೋಚನೆ ಮಾಡಬೇಕಾಗಿದೆ.

The offices of the Divisional Commissioners are mere post offices and they are simple forwarding offices. The Divisional Commissioners have no function whatever except sitting in review and revision over the orders passed by the Deputy Commissioners.

ಉತ್ತರ ಕರ್ಣಾಟಕದ ಭಾಗಗಳಲ್ಲಿ ಈ ಡಿವಿಜನಲ್ ಕಮಿಷನರುಗಳಿದ್ದರೆ ಕೆಲಮಟ್ಟಿಗೆ ಅನುಕೂಲವಾಗಬಹುದು ಎಂಬ ವಾದ ಬರಬಹುದು. ಏಕೆಂದರೆ ಬೆಂಗಳೂರು ರಾಜಧಾನಿ ಬಹಳ ದೂರವಿದೆ ಆದ್ದರಿಂದ ಪ್ರತಿಯೊಂದು ಅಪೀಲಿಗೂ ಕೂಡ ಬೆಂಗಳೂರಿಗೆ ಬರುವುದಕ್ಕೆ ಸಾಧ್ಯವೇ ಎಂದು ನಾವು ಯೋಚನೆ ಮಾಡಬೇಕು. ಅದಕ್ಕೇ ಈ ಮಸೂದೆಯಲ್ಲಿ ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್ಲಿನವರ ಒಂದು ಬೆಂಚು ಬೆಳಗಾಮಿನಲ್ಲಿ ಕೂಡಬಹುದೆಂದಿದೆ ಸಮಯ ಬಂದಾಗ ಬೆಂಚು ಮಂಗಳೂರಿನಲ್ಲ ಮತ್ತು ಮಿಕ್ಕ ಇತರ ಪ್ರದೇಶಗಳಲ್ಲಿ ಕೂಡ ಕೂಡುವುದಕ್ಕೆ ಸಾಕಾದಷ್ಟು ಅವಕಾಶವಿದೆ ಆದ್ದರಿಂದ, ಈ ದೃಷ್ಟಿಯಲ್ಲಿ ಈ ಹಿನ್ನೆಲೆಯಲ್ಲಿ ಡಿವಿಜನಲ್ ಕಮಿಷನರುಗಳ ವಿಚಾರವನ್ನು ಕೂಡ ನಾವು ಯೋಚನೆ ಮಾಡಬೇಕು.

ಇನ್ನು ಹಲವಾರು ವಿಧಿಗಳು ಬಹಳ ಡೀಟೆಲ್ ಆಗಿವೆ. ಇವೆಲ್ಲವನ್ನು ಕೂಡ ಜಂಟೀ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಿ, ಈ ವಿಧೇಯಕ ಈ ಸಭೆಯ ಮುಂದೆ ಬರುವುದಿದೆ. ಸದ್ಯಕ್ಕೆ ಇಷ್ಟನ್ನು ಹೇಳಿ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಬಹುದೆಂದು ಹೇಳಬಯಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಸಭಾಪತಿಗಳೆ, ತಾತನ ಕೆಲಸ ಮೊಮ್ಮಗ ಪೂರೈಸಬೇಕು ಎಂದು ಕಂಕಣ ಕಟ್ಟಿರುವುದು ನಿಜವಾಗಿಯೂ ಕೂಡ ಹೆಮ್ಮೆಯ ವಿಷಯ ಇದರಲ್ಲ 200 ಕಲಮ್ಮುಗಳಿವೆ.

ಹೀಗೆ ಮಾನ್ಯ ಮಂತ್ರಿಗಳು ಈ 200 ಕಲಂಗಳಿಂದ ಕೂಡಿರತಕ್ಕ ಈ ಬಿಲ್ಲನ್ನು ಇದು ಬಹಳ ಚೆನ್ನಾಗಿದೆ ತಾವೆಲ್ಲರೂ ಇದನ್ನು ಎರಡು ನಿಮಿಷಗಳಲ್ಲೇ ಒಪ್ಪಿಕೊಂಡು ಬಿಡಿ ಎಂದು ಹೇಳಿದರು. ನಮ್ಮ ರೆವಿನ್ಯೂ ಮಂತ್ರಿಗಳು ಹೀಗೆ ಹೇಳಿದುದನ್ನು ನೋಡಿದರೆ ಇದು ಆ ದೀಪಾವಳಿ ಹಬ್ಬಕ್ಕೆ ಬಂದಿದ ಅಳಿಯ ತನ್ನ ಕೈಯಲ್ಲಿರುವ ಖಾಲಿ ಪುಸ್ತಕವನ್ನು ನೋಡಿಸಿ 'ನಿಮಗೆ ಈ ಪುಸ್ತಕವನ್ನು ಪೂರೈಸಿದ್ದಾರೆಯೇ' ಎಂದು ಕೇಳಿದಹಾಗಿದೆ. ದೇಶದಲ್ಲಿ ಭೂಹೀನರಿಗೆ ಹಂಚಲು ಒಂದಿಂಚು ಸಹ ಭೂಮಿಯಿಲ್ಲದಿರುವ ಈ ಕಾಲದಲ್ಲಿ ಒಬ್ಬ ಅಡಿಷನಲ್ ಡೆಪ್ಯುಟಿ ಕಮೀಷನರ್ ಒಬ್ಬ ಅಡಿಷನಲ್ ತಹಶೀಲ್ದಾರ ಒಂದು ಹೊಸ ರೆವಿನ್ಯೂ ಅಪಲೇಟ್‌ಟ್ರೈಬ್ಯುನಲ್ ಎಂದು ಹೀಗೆ ಯಾವ ಯಾವದನ್ನೋ ಸೇರಿಸಿ ಇಂಥ ಒಂದು ದೊಡ್ಡ ಲ್ಯಾಂಡ್ ರೆವಿನ್ಯೂ ಕೋಡನ್ನು ಕರೆ ತಂದಿದ್ದಾರೆ ಎಂಬುದೇ ಗೊತ್ತಾಗುವದಿಲ್ಲ. ಇದನ್ನೆಲ್ಲಾ ನೋಡಿದರೆ ನನಗೆ ಆಶ್ಚರ್ಯದಲ್ಲೆಲ್ಲಾ ಒಂದು ಅತ್ಯಂತ ಆಶ್ಚರ್ಯಕರವಾದ ಸಂಗತಿ ಏನು ಕಂಡು ಬಂಡಿತೆಂದ್ರೆ ದಾನ ಶೂರ ಕರ್ಣರುಗಳಲ್ಲೆಲ್ಲ ಅತ್ಯಂತ ದಾನಶೂರನೆಂದೂ ಮತ್ತು ವೀರ ಅಭಿಮನ್ಯುಗಳಲ್ಲೆಲ್ಲಾ ಅತ್ಯಂತ ವೀರನೆಂದೂ, ಹಿಂದೆ ಇಂಥ ವೀರಾಧಿವೀರರು, ಶೂರರು ದಾನಶೂರ ಕರ್ಣರು ಯಾರೂ ಹುಟ್ಟಿರಲಿಲ್ಲ, ಮುಂದೆ ಇಂಥವರು ಇನ್ನು ಹುಟ್ಟುವುದಿಲ್ಲ ಎಂಬುದಾಗಿ

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಬೇಕಾದವರಿಗೆ ಈ ನೌಕರಿಗಳನ್ನು ಹಂಚಿ, ಇಂಥ ಮಂತ್ರಿಗಳಿನ್ನಿಲ್ಲ ಎಂದು ಅವರೆಲ್ಲರಿಂದಲೂ ಅನ್ನಿಸಿಕೊಳ್ಳಬೇಕೆಂದು ಈ ರಾಜ್ಯ ಮಂತ್ರಿಗಳು ಈಗ ಈ ಶಾಸನವನ್ನು ಮಾಡಲಿಕ್ಕೆ ಹೊರಟಿದ್ದಾರೆಂಬುದಾಗಿ ಕಂಡುಬರುತ್ತಿದೆ. ಯಾರು ಏನೇ ಕೇಳಲಿ ಈ ಕೊಡುಗೈ ದಾನಿಯಾರಿಗೂ ಇಲ್ಲ ಎಂದು ಹೇಳತಕ್ಕವರಲ್ಲ ಎಂದು ಎನ್ನಿಸಿಕೊಳ್ಳಬೇಕೆಂಬ ಚಪಲವಿದೆ.

11—30 A.M.

ಶ್ರೀ ಎಂ. ವಿ. ಕೃಷ್ಣಪ್ಪ.—"ಕೂಡಲ ಸಂಗಮ" ವಚನವನ್ನು ಹೇಳಿ... ...

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಅದು ಸಾಯಂಕಾಲ 7 ಘಂಟೆ ಆದಮೇಲೆ ಆದರೆ ಒಳ್ಳೆಯದು. ಆದರೆ ಈಗ ಬೇರೆ ಆಡಳಿತಕ್ಕೊಳಪಟ್ಟಿದ್ದ ಐದು ಪ್ರದೇಶಗಳು ಸೇರಿ ಒಂದು ರಾಜ್ಯವಾಗಿರುವುದರಿಂದ ಈ ಐದು ಭಾಗಗಳಿಗೂ ಒಂದು ಏಕರೂಪತೆಯುಳ್ಳ, ಹಾಗೂ ಐದು ಭಾಗಗಳಲ್ಲಿದ್ದ ಬೇರೆ ಬೇರೆ ಕಾನೂನುಗಳನ್ನು ಸಮನ್ವಯಗೊಳಿಸಿ ಒಂದು ಏಕರೂಪತೆಯುಳ್ಳ ಕಾನೂನನ್ನು ಶಾಸನ ಕಡಿತಕ್ಕೇರಿಸಬೇಕಾದ್ದು ಅವಶ್ಯಕವಾಗಿತ್ತು. ಆದರೆ ಈ ಏಕರೂಪತೆಯುಳ್ಳ ಶಾಸನವನ್ನು ಜಾರಿಗೆ ತಂದರೆ ಜನಗಳಿಗೆ ದೊರೆಯತಕ್ಕ ಸೌಕರ್ಯಗಳೇನು, ಈ ಹಿಂದೆ ಯ ರಿಗೆ ಏನೇನು ಕಷ್ಟನಿಷ್ಠೂರಗಳಿದ್ದವು, ಅವುಗಳನ್ನು ಪರಿಹಾರ ಮಾಡಲು ಏನೇನು ಕ್ರಮ ಕೈಗೊಳ್ಳಲಾಗಿದೆ ಎಂಬ ವಿಚಾರವಾಗಿ ಒಂದು ಚಕಾರ ಕೂಡ ಇದರಲ್ಲಿ ಇಲ್ಲ. ಈ ಬಿಲ್ಲಿನಲ್ಲಿ ಎದ್ದು ಕಾಣಿಸತಕ್ಕದ್ದೇನೆಂದರೆ ಇದರಿಂದ ಸರ್ಕಾರಕ್ಕೆ 4-5 ಕೋಟಿ ರೂ.ಗಳ ಆದಾಯ ಬರುತ್ತದೆ, ಈಗಿರತಕ್ಕ ಅಧಿಕಾರಿಗಳ ಸಂಖ್ಯೆ ಕಡಮೆಯಾಗಿದೆ, ಇದನ್ನು ಇನ್ನು ಹೆಚ್ಚಿಸಬೇಕಾಗಿದೆ ಎಂಬ ತಕ್ಕ ವಿಚಾರಗಳು ಮಾತ್ರ ಕಂಡುಬರುತ್ತವೆ. ಇನ್ನು ಮುಂದೆ ಎಲ್ಲ ಕಡೆಗಳಲ್ಲೂ ಬರಿ ಡ್ರೈ ಅಸೆಸ್‌ಮೆಂಟನ್ನು ಮಾತ್ರ ಹಾಕುತ್ತೇವೆಂದು ಹೇಳುತ್ತಿದ್ದಾರೆ. ಈಗಿರತಕ್ಕ ತರಿ ಜಮೀನುಗಳನ್ನು ಏನು ಮಾಡುತ್ತೀರಿ ಎಂದು ಕೇಳಿದರೆ ಅದಕ್ಕೆಲ್ಲ ವಾಟರ್ ರೇಟನ್ನು ಹಾಕುತ್ತೇವೆಂದು ಹೇಳುತ್ತಾರೆ. ಆದರೆ ನನಗೆ ಅನಿಸುತ್ತಿದೆ ಇಂಥ ವಿಚಾರಗಳಲ್ಲಿ ಕೈ ಹಾಕಬೇಕಾಗಿದ್ದರೆ ಸ್ವಲ್ಪ ಅನುಭವ ಇರಬೇಕು ಎಂತದು ಯಾರೇ ಆಗಲಿ ಇಂಥ ಕಾರ್ಯಗಳನ್ನು ಮಾಡುವಾಗ ಅವರು ಮಮಕಾರವನ್ನು ಬಿಟ್ಟು ಮಾಡಬೇಕು ಎಂಬ ಅಂಶವನ್ನು ತಿಳಿಸಲು ಇದನ್ನು ಹೇಳಬೇಕಾಯಿತು. ಅಂಥಾ ಭಾವನೆಯುಟ್ಟುಕೊಂಡು ಇದರಲ್ಲಿರತಕ್ಕ ಲೋಪದೋಷಗಳನ್ನೆಲ್ಲ ನಿವಾರಣೆ ಮಾಡಿ ಈ ಬಿಲ್ಲನ್ನು ಒಂದು ಶಾಸ್ತ್ರೀಯವಾದ ರೀತಿಯಲ್ಲಿ ತರಲಿ-ಆಗಬೇಕಾದರೆ ನೀನೇ ಸೈ-ಭಲರೇ ರಾಮು ! ಎಂದು ಬೇಕಾದರೆ ಹೇಳೋಣ. ಹಾಗೇನೂ ಮಾಡದೆ ಈಗ ಮಾಡಿರತಕ್ಕದ್ದು ತನ್ನ ಕಾಲಿಗೆ ತಾನು ನಮಸ್ಕಾರ ಮಾಡಿಕೊಂಡ ಹಾಗಿದೆ. ಈ ದಿವಸ ಈ ಬಿಲ್ಲಿನಲ್ಲಿ ಏನೇನು ಇದೆಯೋ ಇದೆಲ್ಲಾ ಆ ಬೊಂಬಾಯಿ ಕಾನೂನಿನಲ್ಲಿ ಇರತಕ್ಕದೇ ವಿನಾ ಬೇರೆ ಏನೂ ಇಲ್ಲ. ಆ ದೇಶದ ಕಾನೂನಿನಲ್ಲಿ ರತಕ್ಕದ್ದನ್ನು ಈ ದಿವಸ ಇಲ್ಲ ತಂದು ಅದನ್ನು ಮೈಸೂರು ರಾಜ್ಯಕ್ಕೂ ಅನ್ವಯಿಸುವ ಹಾಗೆ ಮಾಡುವುದಕ್ಕೆ ಹೊರಟಿದ್ದಾರೆ. ಈ ಬಿಲ್ಲನ್ನು ಯಾರೋ ಡ್ರಾಫ್ಟ್ ಮಾಡಿದರು, ಮಂತ್ರಿಗಳು ಅದನ್ನಿಲ್ಲಿ ಮಂಡಿಸಿದ್ದಾರೆ. ಆದರೆ ಈ ಬಿಲ್ಲನ್ನು ತಯಾರಿಸಿದ ಸೆಕ್ರೆಟರಿಗಳನ್ನು ಕರೆದು ಪ್ರತಿಯೊಂದು ಕಲಂನ್ನು ಪರಿಶೀಲಿಸಿ ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಮಂತ್ರಿಗಳು ಕೇಳಿದ್ದಾರೇನು? ಹಾಗೆ ಕೇಳಿದ್ದರೆ ಈ 114 ನೇ ಕಲಂನಲ್ಲಿರುವುದೇನು ಎಂಬುದನ್ನು ವಿವರಿಸಿ ಹೇಳುತ್ತಾರೇನು ! ಈ ಕಲಂನಿಂದ ಮುಂದೆ ಜನರಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬಲ್ಲರೇನು ? ಈ ಮಸೂದೆಯಲ್ಲಿ ಇಷ್ಟೆಲ್ಲಾ ನ್ಯೂನತೆಗಳಿದ್ದರೂ ಕೇವಲ 7-8 ಕ್ಲಾಜುಗಳನ್ನು ಓದಿ ಮಾನ್ಯ ಸದಸ್ಯರುಗಳೆಲ್ಲರೂ ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳಿಬಿಟ್ಟರು. ನಾನಾಗಲೇ ಹೇಳಿದಹಾಗೆ ಈ ಮಸೂದೆಯಲ್ಲಿ ಕಾಣತಕ್ಕಂಥ ಮುಖ್ಯವಾದ ವಿಚಾರಗಳು ಎರಡೇ ಎರಡು. ಈಗಿರತಕ್ಕ ಕಂದಾಯವನ್ನು ಜಾಸ್ತಿ ಮಾಡಬೇಕು, ಆ ಹಣವನ್ನು ಅಧಿಕಾರಿಗಳಿಗೆ ಜನರು ತಪ್ಪದೆ ಪಾವತಿ ಮಾಡಬೇಕು, ಆ ಹಣದ ವಸೂಲಿಗೆ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಈ ಎರಡು ವಿಚಾರಗಳನ್ನು ಬಿಟ್ಟರೆ ಇದರಲ್ಲಿ ಬೇರೆ ಏನೂ ಇಲ್ಲ. ಇಲ್ಲಿಯವರೆಗೂ ನಾವು ಈ ಡಿವಿಜನ್ ಕಮಿಷನರುಗಳಿರುವುದು ಬೇಡ ಎಂದರೆ ಈಗ ಸರ್ಕಾರದವರು ಅವರೂ ಇರಲಿ ಎಂದು ಹೇಳಲು ಮುಂದೆ ಬಂದಿದ್ದಾರೆ. ಅಸಿಸ್ಟೆಂಟ್ ಕಮಿಷನರುಗಳಿರುವುದು ಬೇಡ ಎಂದರೆ ಅವರೂ ಇರಲಿ ಎಂದು ಹೇಳುತ್ತಿದ್ದಾರೆ; ಇದರ ಜೊತೆಗೆ ಪ್ರತಿಯೊಂದು ತಾಲ್ಲೂಕಿಗೂ ಇಬ್ಬಿಬ್ಬರೂ ಅಮಲ್ದಾರರೂ ಒಂದೊಂದು ಜಿಲ್ಲೆಗೆ ಇಬ್ಬಿಬ್ಬರೂ ಡೆಪ್ಯುಟಿ ಕಮಿಷನರು ಇರಬೇಕೆಂದು ಬೇರೆ ಹೇಳಿದ್ದಾರೆ. ರೈತನಮೇಲೆ ಈ ಅನ್ಯಾಯದ ಹೊರೆ ಹಾಕಿ ಯಾರು ಆ I. A. S. ಮತ್ತು I. P. S. ಪರೀಕ್ಷೆಗಳನ್ನು ಪಾಸ್ ಮಾಡಿಕೊಂಡು ಬಂದು ಕಾದಿದ್ದಾರೋ ಅಂಥವರಿಗೆ ಈ I. A. S. ಪದವಿಗಳನ್ನು ಕೊಟ್ಟು ತಮಗೆ ಬೇಕಾದವರನ್ನು ಖಾಯಂ ಮಾಡಿ ಈ ರೆವಿನ್ಯೂ ಮಂತ್ರಿಗಳಂಥ ಪುಣ್ಯಾತ

ಯಾರೂ ಇಲ್ಲಪ್ಪ' ಎಂದು ಅನ್ನಿಸಿಕೊಳ್ಳಬೇಕೆಂದು ಈ ಕೆಲಸ ಮಾಡಲು ಹೊರಟಿದ್ದಾರೇನು ? ಈ ಡೆಫಿನಿಷನ್ ಕ್ಲಾಜ್ ಎರಡರಲ್ಲಿ ಏನು ಹೇಳಿದ್ದಾರೆ ?

Item (40) of clause 2:

"Zone" means a local area comprising a taluk or group of taluks or portions thereof of one or more district, which in the opinion of the State Government, or an officer authorised by it in this behalf......"

ಈ ರೀತಿ ಜೋನುಗಳನ್ನು ವಿಂಗಡಿಸಿ ಡಿಕ್ಲೇರ್ ಮಾಡಲು ಸರ್ಕಾರದವರಲ್ಲಿ ಸಾಕಷ್ಟು ಅಂಕಿ ಅಂಶಗಳಿವೆಯೇನು ? ಒಂದು ರಾಜ್ಯಕ್ಕೆ ಎಷ್ಟು ಜೋನುಗಳಿರಬೇಕು ಎಂಬುದು ಅವರಿಗೆ ಮನವರಿಕೆ ಆಗಿದೆಯೇ ? ಯಾವ ಯಾವ ಜೋನಿನಲ್ಲಿ ಫಿಜಿಕಲ್ ಫೀಚರುಗಳೇನಿರಬೇಕು, ಒಂದೊಂದು ಜೋನಿಗೆಷ್ಟು ಜಿಲ್ಲೆಗಳಿರಬೇಕು ಎಂಬುದನ್ನೆಲ್ಲಾ ಪರಿಶೀಲನೆ ಮಾಡದೆ ಹೀಗೆ ಸುಮ್ಮನೆ ಮಕ್ಕೀಕಾಮಕ್ಕಿ ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಈ 40 ನೇ ಕಲಂನಲ್ಲೂ ಹೀಗೇ ಇದೆ. ಇಷ್ಟೆಲ್ಲಾ ಈ ಬಿಲ್ಲಿನಲ್ಲಿ ಲೋಪದೋಷಗಳಿದ್ದರೂ ನಮ್ಮ ರಾಜ್ಯದ ಮಂತ್ರಿಗಳು ಒಂದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಈ ಬಿಲ್ಲು ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಹೋಗುತ್ತದೆ. ಅಲ್ಲಿ ನಾವೂ ನೀವೂ ಸೇರಿ ರಾಗಿ ಬೀಸುತ್ತಾ 'ಸೋಬನ್ನಿರೆ-ಸೋಬಾನ ಬನ್ನಿರೇ-ಗಿರಿಜಾ ಕಲ್ಯಾಣ.' ಎಂದು ಸೋಬಾನ ಹೇಳೋಣಎಂದು ಹೇಳಿದರು.

ಶ್ರೀ ಎಂ. ವಿ. ಕೃಷ್ಣಪ್ಪ.—ನಿಮ್ಮಿಂದ ನಾವು ಕಲಿಯಬೇಕಾದ್ದಿಲ್ಲ.........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಎಲ್ಲವನ್ನು ಅರಿತವರು! ನನ್ನಿಂದ ಕಲಿಯಬೇಕಾದ್ದೇನೂ ಇಲ್ಲ. ನಾನಂಥ ಸರ್ವಜ್ಞನೂ ಅಲ್ಲ. ಮಮಕಾರದಲ್ಲಿರತಕ್ಕ ಮನುಷ್ಯರಿಗೆ ಯಾರು ಹೇಳಿದರೂ ಅರ್ಥವಾಗುವುದಿಲ್ಲ.

[MR. SPEAKER in the Chair]

ಈ ದಿವಸ ಸರ್ಕಾರದವರು ಈ ಡಿವಿಜನ್ ಕಮಿಷನರುಗಳಿರಬೇಕೆಂದು ಹೇಳುತ್ತಿದ್ದಾರೆ. ಆದರೆ ಈ ದಿವಸ ತಾಲ್ಲೂಕ್ ಮಟ್ಟದಲ್ಲಿ ಕೆಲಸಗಳು ಹೇಗೆ ನಡೆಯುತ್ತಿವೆ, ಈ ಡಿವಿಜನ್ ಕಮಿಷನರುಗಳ ಬಗ್ಗೆ ಜನರು ನು ಹೇಳುತ್ತಿದ್ದಾರೆ ಎಂಬುದೇನಾದರೂ ಸರ್ಕಾರದವರಿಗೆ ಗೊತ್ತಿದೆಯೇ ? ಕೆಲಸಗಳು ಒಂದೂ ಏಸರಾಗವಾಗಿ ಆಗುತ್ತಿಲ್ಲ. ಈ ಸಬ್ ಡಿವಿಜನ್ ಅಧಿಕಾರಿಗಳು ಬೇಡ ಎಂದು ಜನರು ಹೇಳುತ್ತಿದ್ದಾರೆ. ಹಾಗಿರುವಾಗ ಏತಕ್ಕೆ ಈಗ ಸರ್ಕಾರ ಇವುಗಳನ್ನು ಖಾಯಂ ಮಾಡಲು ಹೊರಟಿದೆಯೋ ಗೊತ್ತಾಗದು. ಈ ಹಿಂದೆ ಈ ಡಿವಿಜನ್ ಕಮಿಷನರುಗಳನ್ನು ಆದಷ್ಟು ಬೇಗ ಅಬಾಲಿಷ್ ಮಾಡಲಾಗುವುದೆಂದು ಶ್ರೀ ನಿಜಲಿಂಗಪ್ಪನವರು ಹೇಳಿದ್ದರು. ಈ ದಿವಸ ಸರ್ಕಾರ ಈ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಿಸಿದರೆ ನಾಳೆ ಆ ಪೋಸ್ಟುಗಳನ್ನು ಹೇಗೆ ಅಬಾಲಿಷ್ ಮಾಡುತ್ತಾರೆ ? ಸರಕಾರ ಯಾವ ವಿಚಾರವನ್ನು ಕೂಲಂಕಷವಾಗಿ ವಿಮರ್ಶೆಮಾಡಿಲ್ಲವೆಂದು ಇದರಿಂದ ಚೆನ್ನಾಗಿ ಗೊತ್ತಾಗುತ್ತದೆ. ಅದೇ ರೀತಿ ಈಗ ಈ ಸಬ್-ಡಿವಿಜನ್ ಅಧಿಕಾರಿಗಳ ಹುದೆ ಕೂಡ ಸೂಪರ್ ಫ್ಲೂಯಸ್ ಆಗಿದೆ. ಈ ಹುದ್ದೆಗಳೂ ಬೇಕಾಗಿಲ್ಲ. ಈ ದಿವಸ ಅವರಿಗೆ ಯಾವ ಕೆಲಸವೂ ಇಲ್ಲ. ಇವರು ಒಂದು ಪೋಸ್ಟಾಫೀಸಿನಂತೆ ಡಿ. ಸಿ. ಕಳುಹಿಸುವ ಪೇಪರನ್ನು ಕೆಳಗಡೆ ಇರತಕ್ಕ ತಹಶೀಲ್ದಾರರಿಗೂ, ತಹಸೀಲ್ದಾರರು ರವಾನಿಸತಕ್ಕ ಪೇಪರುಗಳನ್ನು ಅತ್ತ ಡಿ. ಸಿ.ಗೂ ರವಾನೆ ಮಾಡಿಕೊಂಡು ಆಗತಕ್ಕ ಕೆಲಸಗಳಿಗೆ ಅಡ್ಡಿಯಾಗಿದ್ದಾರೆ. N. E. S. ಮತ್ತು C. D. ಬ್ಲಾಕುಗಳಿಗೇ ಬೇರೆ ಬೇರೆ ಆಫೀಸರುಗಳಿದ್ದಾರೆ. ಹಾಗಿದ್ದರೂ ಈ ಸರ್ಕಾರ ನೌಕರರ ಸಂಖ್ಯೆಯನ್ನು ಜಾಸ್ತಿ ಮಾಡಲು ಉದ್ದೇಶವಿಟ್ಟುಕೊಂಡಿರುವಂತೆ ಕಾಣುತ್ತಿದೆ. ಹೀಗೆ ಅಧಿಕಾರಿಗಳನ್ನು ಸೃಷ್ಟಿಮಾಡುವ ಸರ್ಕಾರ ಕೊನೆಗೆ ಯಾವ ಕನಿಷ್ಠ ಮಟ್ಟಕ್ಕಿಳಿಯುವುದೋ ಅದು ಗೊತ್ತಾಗುತ್ತಿಲ್ಲ.

ಸರ್ಕಲ್‌ಗಳೆಂದು ಮಾಡಿದ್ದಾರೆ. ಈಗಿರುವ ಹೋಬಳಿಗಳನ್ನು ಸರ್ಕಲ್‌ಗಳೆಂದು ಕರೆಯುವುದಕ್ಕೆ ಹೊರಟಿದ್ದಾರೆಂದು ಕಾಣುತ್ತದೆ. ಒಂದು ಸರ್ಕಲ್‌ನಲ್ಲಿ ಎಷ್ಟು ಹಳ್ಳಿಗಳಿರಬೇಕು ? ನಾಳೆ ಯಾವುದಾದರೂ ಒಂದು ಹೋಬಳಿಯನ್ನು ವಿಭಾಗಮಾಡಬೇಕು ಎಂದರೆ ಆ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಂಡಿದ್ದಾರೆ. ಎಲ್ಲ ಅಧಿಕಾರವನ್ನು ಅವರೇ ಇಟ್ಟುಕೊಂಡು ತಾವೇ ಆರ್ಡರ್ ಮಾಡಲು ಸೇವಿಂಗ್ ಕ್ಲಾಜಿನಲ್ಲಿ ಅವಕಾಶವನ್ನು ಇಟ್ಟುಕೊಂಡಿದ್ದಾರೆ. ನಾವು ಕಂಠ ಶೋಷಣೆ ಮಾಡಿಕೊಳ್ಳುವುದಕ್ಕಾಗಿ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈ ಸಭೆಯಲ್ಲಿ ಚರ್ಚೆಯಾಗಿ, ಈ ಸಭೆಯ ಅಭಿಪ್ರಾಯವನ್ನು ತಿಳಿದುಕೊಂಡು ಮಾಡಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಒಂದು ಸರ್ಕಲ್ ಮಾಡಬೇಕಾಗಿದ್ದರೆ, ಒಂದು ಹಳ್ಳಿಯನ್ನು ವಿಭಾಗಮಾಡಬೇಕಾಗಿದ್ದರೆ, ಹಳ್ಳಿಯ ಅಥವಾ ತಾಲ್ಲೂಕಿನ ಎಲ್ಲೆಗಳನ್ನು ನಿಗದಿ ಮಾಡಬೇಕಾದರೆ ಸರ್ಕಾರಕ್ಕೆ ಅಧಿಕಾರವಿರಬೇಕು. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನಮಗೆ ಉದ್ಭವವಾಗಿರುವ ಅನೇಕ ಸಂದೇಹಗಳನ್ನು ನಿವಾರಣೆ ಮಾಡುತ್ತಾರೆಂದು ನಾನು ನಿರೀಕ್ಷಣೆ ಮಾಡುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನಾಲ್ಕನೆಯ ಕ್ಲಾಜ್‌ನ ಮೂರನೆಯ ಸಬ್ ಕ್ಲಾಜ್‌ನಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಎಷ್ಟು ತಾಲ್ಲೂಕುಗಳಿರಬೇಕು. ತಾಲ್ಲೂಕಿನಲ್ಲಿ ಎಷ್ಟು ಸರ್ಕಲ್‌ಗಳಿರಬೇಕು ಸರ್ಕಲ್‌ನಲ್ಲಿ ಎಷ್ಟು ಹಳ್ಳಿಗಳಿರಬೇಕು ಎಂದು ತೀರ್ಮಾನಮಾಡುವ ಅಧಿಕಾರ ಸರ್ಕಾರಕ್ಕೆ ಇರಬೇಕೆಂದು ತಿಳಿಸಿದ್ದಾರೆ. ಇದರಲ್ಲಿ ಸರ್ಕಾರದ ಉದ್ದೇಶವೇನೆಂದು ನಮಗಾದರೂ ಸ್ವಲ್ಪ ಹೇಳಬೇಕು. ಈಗಿರತಕ್ಕ ಹೋಬಳಿ ದೊಡ್ಡದಾಗಿದೆ, ತಾಲ್ಲೂಕು ದೊಡ್ಡದಾಗಿದೆ, ಜಿಲ್ಲೆ ದೊಡ್ಡದಾಗಿದೆ. ಆದ್ದರಿಂದ ಅವನ್ನು ಭಾಗ ಮಾಡುವುದಕ್ಕೆ ಪ್ರಯತ್ನ ನಡೆಸಿದ್ದೇವೆ. ಅದಕ್ಕೋಸ್ಕರ ಎಷ್ಟು ಜನಸಂಖ್ಯೆಯಿರಬೇಕು, ಎಷ್ಟು ಹಳ್ಳಿಗಳಿರಬೇಕು ಎಷ್ಟು ಎಕರೆ ಭೂಮಿ ಸಾಧಾರಣವಾಗಿ ಇರಬೇಕು ಎಂದು ತಿಳಿಸಿ, ಆಡಳಿತದ ಸೌಕರ್ಯಕ್ಕಾಗಿ Viable administrative units ಆಗಿ ಮಾಡಲು ಅವಕಾಶ ಮಾಡಿದ್ದೇವೆಂದು ಹೇಳಿದ್ದರೆ ವಾದ ಮಾಡುವುದಕ್ಕೇ ಅವಕಾಶವಿರುತ್ತಿರಲಿಲ್ಲ.

ಕ್ಲಾಜ್ ಎಂಟರಲ್ಲಿ ಅಡಿಷನಲ್ ಡೆಪ್ಯುಟಿ ಕಮೀಷನರನ್ನು ನೇಮಿಸುವ ವಿಚಾರವಿದೆ. ಬೆಂಗಳೂರು ಜಿಲ್ಲೆಗೆ ಇಬ್ಬರು ಡೆಪ್ಯುಟಿ ಕಮಿಷನರುಗಳನ್ನು ನೇಮಕಮಾಡಿದಾಗ ಒಂದು ತಿಂಗಳಕಾಲ ಒಬ್ಬರ ಫೈಲು ಇನ್ನೊಬ್ಬರಿಗೆ ಹೋಗುತ್ತಿತ್ತು. ರೆವಿನ್ಯೂ ಇಲಾಖೆಯಲ್ಲಿ ಎಷ್ಟು ಹುಡುಗಾಟಿಕೆಯ ಬದುಕಾಗಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಇದಲ್ಲದೆ ಇನ್ನೊಂದೇನಾಗಿದೆ ಎಂದರೆ, ಒಂದು ಕಡೆ ಡೆವಲಪ್‌ಮೆಂಟ್ ಕೌನ್ಸಿಲ್ಲಿಗೆ non-official President ಇರಬೇಕು, Deputy Commissioner must be relieved of his duties of development work ಎಂದು ಹೇಳುತ್ತಾರೆ. ಇನ್ನೊಂದು ಕಡೆ ಅಭಿವೃದ್ಧಿ ಕಾರ್ಯ ಡೆಪ್ಯುಟಿ ಕಮೀಷನರ ಕೈಯಲ್ಲೇ ಇರುತ್ತದೆ Development Council Chairman ಮತ್ತು N. D. F. Collection Committee Chairman ಸಹ ಡೆಪ್ಯುಟಿ ಕಮಿಷನರೇ ಆಗಿರುವುದರಿಂದ ಇನ್ನೊಬ್ಬ ಡೆಪ್ಯುಟಿ ಕಮೀಷನರನ್ನು ನೇಮಕ ಮಾಡಬೇಕು ಎಂದು ಹೇಳುತ್ತಾರೆ. ಒಂದಕ್ಕೊಂದಕ್ಕೆ ವಿರೋಧವಾದ ವ್ಯವಹಾರವಿದೆ ಎಂಬುದನ್ನು ನೋಡಬಹುದು.

ಸ್ವಾಮಿ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬೇಕಾಗಿದೆ. Can a Hon'ble Member of this House sit in the Officers' Gallery ? My friend Sri Kolkabail is sitting there and discussing with the Revenue Secretary. ಅವರು ಯಾವಾಗ ರಾಜೀನಾಮೆ ಕೊಟ್ಟರು ಈ ಸಭೆಗೆ ಎಂದು ಸ್ವಲ್ಪ ಅನುಮಾನವಾಯಿತು.

(Sri Kolkebail then left the Officers' Gallery and re-entered the House).

Appointment of Additional Deputy Commissioners ಸಂಬಂಧದಲ್ಲಿ ಈ ಸಭೆಯ ಮುಂದೆ ಒಂದು ಮಸೂದೆ ಬಂದಾಗ ಅದನ್ನು A to Z ವಿರೋಧ ಮಾಡಿದೆವು. ವಿವೇಚನೆಯಿಂದ ಈ ನೇಮಕಗಳನ್ನು ಮಾಡುತ್ತೇವೆಂದು ಹೇಳಿದರು. ವಿವೇಚನೆ ಮಾತ್ರ ಸೊನ್ನೆ. ಈ ತರಹದ ನೇಮಕಗಳನ್ನು ಮಾಡಬೇಕು ಎನ್ನುವ ತೀರ್ಮಾನಕ್ಕೆ ಸರ್ಕಾರ ಏಕೆ ಬಂತೋ ಅನಿಸುತ್ತದೆ. ಅಡಿಷನಲ್ ಡೆಪ್ಯುಟಿ ಕಮಿಷನರುಗಳನ್ನು ಸರ್ಕಾರ ನೇಮಕಮಾಡಬಾರದು ಎಂದು ಹೇಳುತ್ತೇನೆ.

ಹತ್ತನೆಯ ಕ್ಲಾಜಿನಲ್ಲಿ ತಹಸೀಲ್ದಾರ್ ಮತ್ತು ಅಡಿಷನಲ್ ತಹಸೀಲ್ದಾರರ ನೇಮಕದ ವಿಚಾರವಿದೆ.

Mr. SPEAKER.—If the Hon'ble Member goes clause by clause, no one else Can speak.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲ, ಸ್ವಾಮಿ, ಬೇಗ ಮುಗಿಸುತ್ತೇನೆ.

ಇವೊತ್ತು ತಹಸೀಲ್ದಾರರಿಗೆ ಮೂರೇ ಕಾಸಿನ ಕೆಲಸವಿಲ್ಲ. ಮಂತ್ರಿಗಳು ಬಂದರೆ ಅವರನ್ನು ಎದುರುಗೊಳ್ಳುವುದು ಕಳಿಸಿಕೊಡುವುದು. There are already two gazetted officers, in addition to the Taluk Board President. ಹೀಗಿರುವಾಗ additional ತಹಸೀಲ್ದಾರರನ್ನು ಏಕೆ ನೇಮಿಸಬೇಕೋ ಗೊತ್ತಿಲ್ಲ. ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರಿಗೆ ಏನೇನು ಅಧಿಕಾರವನ್ನು ಕೊಟ್ಟಿದ್ದಾರೆ ? ಅವರಿಗೇಕೆ ಅಧಿಕಾರ ಕೊಡಬಾರದು ? ಒಂದು ತಾಲ್ಲೂಕಿಗೆ ಇಬ್ಬರು ತಹಸೀಲ್ದಾರರು ಏಕೆ ಬೇಕೋ ಗೊತ್ತಾಗುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಕಾದರೆ ಮಾತ್ರ ನೇಮಕಮಾಡಿಕೊಳ್ಳಬೇಕು ಎಂದು ಸೇರಿಸಿದ್ದೇವೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—"ರ" ಬೇಕಾಗಿಲ್ಲ ಸ್ವಾಮಿ,

ತಾಲ್ಲೂಕಿನಲ್ಲಿ ಈಗ ಇರುವ ಅಧಿಕಾರಿಗಳಿಗೇ ಸಾಕಷ್ಟು ಕೆಲಸವಿಲ್ಲದೇ ಇರುವಾಗ ಇನ್ನೊಬ್ಬರನ್ನು ಏಕೆ ನೇಮಕ ಮಾಡುತ್ತೀರಿ ? ಮೂರು ಜನ ಏಕೆ ? ಕೆಲವು ಕಡೆ Deputy B. D. O. ಇರುತ್ತಾರೆ. ಇನ್ನೂ ಒಬ್ಬರನ್ನು ನೇಮಕ ಮಾಡಿದರೆ ಐದು ಜನರಾಗುತ್ತಾರೆ. ಇಬ್ಬರು ಮುಂದೆ, ಇಬ್ಬರು ಹಿಂದೆ, ಇನ್ನೊಬ್ಬರು ಶಂಖ ವಾದ್ಯ ಮಾಡುವುದಕ್ಕೆ. Retrenchment ತುರ್ತು ಪರಿಸ್ಥಿತಿ austerity measures, Resources and Economy Committee report, ಎಂದು ಹೇಳುತ್ತಾ ಅಧಿಕಾರಿಗಳ ಹುದ್ದೆಗಳನ್ನು ಹೆಚ್ಚು ಮಾಡುತ್ತ ಇದ್ದಾರೆ. ಅಧಿಕಾರ ನಡೆಸುವವರಲ್ಲಿ bankrupty of intelligence ಆಗಿದೆ...

Mr. SPEAKER.—Which is the clause which refers to bankruptcy of intelligence ?

Sri C. J. MUCKANNAPPA.—I say that the Government has no capacity to think. These additional Tahsildars are going to be appointed. I say that this Government is not intelligent government. It has not applied its mind.

Mr. SPEAKER.—Then the Hon'ble Member may say that the clause may be deleted. He should go to the next point.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರುತ್ತೇನೆ.

Mr. SPEAKER.—The Member will come to the point and conclude (his speech) in 10 minutes. Kindly deal with the Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ತಹಶೀಲುದಾರರೂ ಡೆಪ್ಯುಟಿ ತಹಶೀಲುದಾರರು ಎಂದು ನೇಮಿಸುವುದನ್ನು ಖಂಡಿತ ಕೈಬಿಡಬೇಕು. ಇದನ್ನು ಜಾಯಿಂಟು ಸೆಲೆಕ್ಟು ಕಮಿಟಿಯವರು ಪರಿಪೂರ್ಣವಾಗಿ ವಿಚಾರಮಾಡಿ Clause 10ನ್ನು ಬಿಡುವುದು ಉತ್ತಮ. ಹಾಗೇ ಕ್ಲಾಸು 3ರ sub-clause (4) ನಲ್ಲಿರುವ ಅಡಿಷನಲ್ ಡೆಪ್ಯುಟೀ ಕಮಿಷನರವರ ಅಪಾಯಿಂಟುಮೆಂಟುಗಳನ್ನು ಕೈಬಿಡಬೇಕೆಂದು ಸರಕಾರಕ್ಕೆ ಇಲ್ಲಿ ಸೂಚನೆ ಕೊಡುತ್ತೇನೆ. ಇದರಲ್ಲಿ ಇನ್ನೊಂದಿದೆ, ಅಡಿಷನಲ್ ತಹಶೀಲುದಾರರಿಗೆ ಮತ್ತು ಅಡಿಷನಲ್ ಡೆಪ್ಯುಟಿ ಕಮಿಷನರಿಗೆ ಎರಡು ಬಿಲ್ಡಿಂಗುಗಳು ಬೇಕು ಮತ್ತು ಅವರಿಗೆ ಬೇಕಾಗತಕ್ಕ ಎಸ್ಟ್ಯಾಬ್ಲಿಷ್‌ಮೆಂಟು ಇತಾ ದಿಗಳ ವೆಚ್ಚವೇನು ಎನ್ನುವುದನ್ನು ಇಲ್ಲಿ ಹೇಳಿಲ್ಲ. ಇದರಲ್ಲಿರುವ ಫೈನಾನ್‌ಷಿಯಲ್ ಮೆಮೊರ್ಯಾಂಡಂನಲ್ಲಿ ಎಷ್ಟು ದುಡ್ಡು ಬೇಕಾಗುತ್ತದೆ ಎನ್ನುವುದನ್ನು ಮಾತ್ರ ಹೇಳಿದ್ದಾರೆ. ಅಡಿಷನಲ್ ಡೆಪ್ಯುಟೀ ಕಮಿಷನರಿಗೇ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದನ್ನು ಹೇಳಿಲ್ಲ. ಇದಲ್ಲದೆ ಇಲ್ಲಿ ಅಧಿಕಾರಿಗಳಿಗೆ ಸಂಬಳ ಬರುತ್ತದೆ. ಇತರ ನೌಕರರ ಸಂಬಳ ಸಾರಿಗೆಗಳು, ಮತ್ತು ಅವರಿಗೆ ಬೇಕಾಗುವ ಮೇಜು ಕುರ್ಚಿ ಇವುಗಳಿಗಾಗುವ ಖರ್ಚು ಇವನ್ನೆಲ್ಲಾ ಯೋಚನೆ ಮಾಡಿ ಸರಕಾರ ಇದನ್ನು ಕಂಪ್ಲೀಟ್ ಆಗಿ ಡಿಲಿಟ್ ಮಾಡುವುದು ಒಳ್ಳೆಯದು.

ಇನ್ನು Chapter IIIನಲ್ಲಿ Procedure of Revenue Officers ಬಗ್ಗೆ ಹೇಳಿದ್ದಾರೆ. ರೆವೆನ್ಯೂ ಕೋರ್ಟಿನಲ್ಲಿ ಮಾಡುವ ಆರ್ಡರು ಬರೀ ಎಕ್ಸಿಕ್ಯುಟೀವ್ ಆರ್ಡರು. ಅದರ ಮೇಲೆ ಅಪೀಲು ಕೊಟ್ಟರೆ ಸರಕಾರ ಸ್ಟೇ ಆರ್ಡರು ಕೊಡುತ್ತಾರೆ. ತಹಶೀಲುದಾರರು ಯಾರಾದರೂ ಸರಿಯಾಗಿ ರೆವೆನ್ಯೂ ಕೋಡಿನಲ್ಲಿರುವಂತೆ ನೋಡಿ ತೀರ್ಮಾನ ಮಾಡುತ್ತಾರೇನು ? ರೂಲ್ಸುಗಳೇನೋ ಪ್ರಿಸ್ಕ್ರೈಬ್ ಮಾಡಿದ್ದಾರೆ. ಆದರೆ ಯಾವುದನ್ನೂ ನೋಡದೆ witness ಬಾರದೇಹೋದರೆ, ವಾರಂಟ್ ಕೊಡಬಹುದು, ಅವನಿಗೆ ಇಪ್ಪತ್ತು ರೂಪಾಯಿನಷ್ಟು ಜುಲ್ಮಾನೆ ಹಾಕಬಹುದು. ಈ ರೀತಿಯಾಗಿ ರೆವೆನ್ಯೂ ಅಧಿಕಾರಿಗಳು ಆರ್ಡರು ಮಾಡುವುದರಿಂದ ಬಡವರಿಗೆ ನ್ಯಾಯ ದೊರಕಿದಂತಾಗುತ್ತದೆಯೇ ? ಅಧಿಕಾರಿಗಳಿಗೆ ಯಾವ ಯಾವ ಅಧಿಕಾರವನ್ನು ಕೊಟ್ಟಿದೆ, ಯಾವ ರೀತಿಯಾದ ಜಡ್ಜ್‌ಮೆಂಟು ಬರೆಯಬಹುದು ಎಂಬ ಬಗೆಗೆ ಈ ಚಾಪ್ಟರಿನಲ್ಲಿ ಒಂದು ಪಂಕ್ತಿಯನ್ನೂ ಬರೆದಿಲ್ಲ. ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ ಹಿಂದಿನ ಕಾಲದಲ್ಲಿ ಬ್ಯೂರೋ ಕ್ರಾಟಿಕ್ ಸರಕಾರ ಇದ್ದಾಗ ತಹಶೀಲುದಾರರು ಯಾವ ರೀತಿ ಆರ್ಡರು ಬರೆಯುತ್ತಿದ್ದರು ಎನ್ನುವುದು ನಮ್ಮ ಮಾನ್ಯ ಮಂತ್ರಿಗಳಿಗೂ ಗೊತ್ತು. ಅವರ ಮೇಲೆ ಅಪೀಲನ್ನು ಮಾಡಿದರೆ ಡೆಪ್ಯುಟೀ ಕಮಿಷನರವರು ಕೊಡುತ್ತಿದ್ದ ಆರ್ಡರು ಮತ್ತು ಜಡ್ಜ್‌ಮೆಂಟನ್ನು ನೋಡಿದರೆ ನಮಗೆ ಅರ್ಥವಾಗುತ್ತಿತ್ತು. ಈ ಮೂರನೇ chapter ನಲ್ಲಿ ಕೋರ್ಟಿಗೆ ಇರಬೇಕಾದ ಸ್ಥಾನಮಾನಗಳೇನು ಎನ್ನುವುದನ್ನು ನೋಡಿ ಸರಿಯಾದ ರಕ್ಷಣೆ ಕೊಡಲು ಅಧಿಕಾರ ಕೊಟ್ಟಿಲ್ಲ. ಇದನ್ನು ಜಾಯಿಂಟು ಸೆಲೆಕ್ಟು ಕಮಿಟಿಯವರು ಪರಿಶೀಲನೆ ಮಾಡಬೇಕು. ಇನ್ನು Chapter IVನಲ್ಲಿ constitution and powers of Mysore Revenue Appellate Tribunal ನಲ್ಲಿ ಹೀಗೆ ಹೇಳಿದ್ದಾರೆ :

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

38 (1) "The State Government shall, by notification, constitute for the State of Mysore an Appellate Tribunal called

"Mysore Revenue Appellate Tribunal."

ಇದರಲ್ಲಿರುವ ಕ್ಲಾಜು 40 (2) ರಲ್ಲಿ ಹೀಗೆ ಹೇಳಿದೆ :

"Notwithstanding anything contained in sub-section (1), Benches of the Tribunal may from time to time and subject to such conditions as may be prescribed, have sittings at Gulbarga and Mangalore and at such other places as the State Government, may, by notification, specify."

ಈ ರೆವೆನ್ಯೂ ಅಪೆಲೆಟ್ಟು ಟ್ರಿಬ್ಯುನಲ್‌ನ್ನೂ ಮೊಬೈಲ್ ಕೋರ್ಟುಗಳ ಹಾಗೆ ಮಾಡಬಹುದು. ಎಲ್ಲಿಯಾದರೂ Nuisance ಇಂಟರಿ ಮಾಡಿದರೆ ಅಂತಹವರನ್ನು ಅಲ್ಲೇ ಹಿಡಿದು ಅವರಿಗೆ ಜುಲ್ಮಾನೆ ವಿಧಿಸುವುದು ಇದರ ಕೆಲಸ. ಈಗ ಎರಡು ಕೋಟಿ ಮೂವತ್ತೈದು ಲಕ್ಷ ಜನರಿರುವ ಈ ದೇಶಕ್ಕೆ ಒಂದೇ ಒಂದು ಹೈಕೋರ್ಟಿದೆ. ಆದರೆ ರೆವೆನ್ಯೂ ಅಪೆಲಟ್ ಟ್ರಿಬ್ಯುನಲ್‌ನ್ನು ಗುಲಬರ್ಗ ದಲ್ಲೊಂದು, ಮಂಗಳೂರಿನಲ್ಲೊಂದು ಎಂದು ಸೂಚಿಸಿ, ಹೀಗೆ ನಾಲ್ಕು ಬೆಂಚು ಇರಬಹುದು ಎಂದು ಹೇಳಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ರೈತರ ಅನುಕೂಲಕ್ಕೋಸ್ಕರ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಕೂಡ ಈ ಬಿಲ್ಲನ್ನು ಸರಿಯಾಗಿ ಓದಿ ನೋಡಿಲ್ಲ. ಡಿವಿಜನಲ್ ಕಮಿಷನರು ಆರ್ಡರು ಮಾಡುವುದೇ ಕೊನೆಯ ಆರ್ಡರು ಎಂದಿದೆ. ಅದರ ಮೇಲೆ ಅಪೀಲೇ ಇಲ್ಲ. ಈ ತರಹ ಎಲ್ಲಿಯೂ ಇಲ್ಲ. ಅದೂ ಅಲ್ಲದೆ ರೆವೆನ್ಯೂ ಟ್ರಿಬ್ಯುನಲ್ಲಿಗೆ ಹೆಚ್ಚು ಜನರನ್ನು ಅಪಾಯಿಂಟು ಮಾಡುವುದನ್ನು ಬಹಳ ಕಠಿಣವಾಗಿ ನಾನು ವಿರೋಧ ಮಾಡುತ್ತೇನೆ. ಪ್ರತಿಯೊಂದು ಸರಕಾರದ ಕ್ರತಿಯೂ ಜನತೆಯಮೇಲೆ ಭಾರವಾಗುತ್ತದೆ. ಜನತೆಯ ಹೆಸರಿನಲ್ಲಿ ನಿಮಗೆ ಯಾರೋ ಬೇಕಾದವರಿಗಾಗಿ ಕೆಲಸಗಳನ್ನೊದಗಿಸಿ ಅವರಿಗೆ ಸ್ಥಾನ ಮಾನಗಳನ್ನು ಕೊಟ್ಟು ವಿಶ್ವಾಮಿತ್ರ ಸೃಷ್ಟಿ ಮಾಡಿ ಕಲಿಯುಗದ ಬ್ರಹ್ಮನಂತೆ ನೀವು ಮಾಡಬಾರದು. ರೆವೆನ್ಯೂ ಟ್ರಿಬ್ಯುನಲ್ಲಿನಂತೆ ಹೆಚ್ಚಿಗೆ ಟ್ರಿಬ್ಯುನಲ್ಲನ್ನು ಅಪಾಯಿಂಟು ಮಾಡಬೇಕೆಂದು ಹೇಳುವುದು ಸರ್ವಥಾ ಸರಿಯಲ್ಲ. ಇದನ್ನು ಸರಕಾರ ತೀವ್ರವಾಗಿ ಯೋಚನೆ ಮಾಡಬೇಕು.

ಇನ್ನು Chapter IV ರಲ್ಲಿರುವ Clause 38, Sub-clause (3) ರಲ್ಲಿ ಹೀಗಿದೆ.

"If by reason of any increase in the business of the Tribunal......" ಎಂದಿದೆ.

ಇದರಲ್ಲಿ ಕಡೆಗೆ or "By reason" ಎಂದಿದೆ.

"or by reason of arrears of work therein or otherwise, it appears to the State Government that the number of members of the Tribunal should be, for the time being increased, the State Government, may by notification, appoint persons having the prescribed qualifications to be additional members of the Tribunal for such period as the State Government may specify."

ಹೀಗೆ ಮಾಡಿದರೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಟ್ರಿಬ್ಯುನಲ್ಲಿಗೆ ಎಷ್ಟು ಕೆಲಸವಿದೆ ಎನ್ನುವುದನ್ನು ನಿಗದಿ ಮಾಡಿಲ್ಲ. ಈಗ ಮೈಸೂರು ಹೈಕೋರ್ಟಿಗೆ ಇಷ್ಟೇ ಜನರು ಜಡ್ಜ್‌ಗಳಾಗಿರ ಬೇಕೆಂದು ಇದೆ. ಅದರಂತೆ ಈ ಟ್ರಿಬ್ಯುನಲ್ಲಿಗೂ ಇಷ್ಟೇ ಜನ ಇರಬೇಕೆಂದು ಹೇಳಬೇಕು. ಇದನ್ನು ಹೆಚ್ಚಿಗೆ ಮಾಡಿಕೊಳ್ಳುವ ಅಧಿಕಾರ ಇಟ್ಟು ಕೊಳ್ಳಬಾರದು ಎಂದು ಸರಕಾರಕ್ಕೆ ಸೂಚನೆ ಕೊಡುತ್ತೇನೆ.

ಇನ್ನು Chapter VII Land and Land Revenue ಎಂದು ಹೇಳಿರುವ ಈ ಚಾಪ್ಟ ರನ್ನು ಪೂರ್ತಿಯಾಗಿ ತೆಗೆದುಹಾಕಬೇಕು. ಏತಕ್ಕೆಂದರೆ, ಜನಕ್ಕೆ ಹಂಚುವುದಕ್ಕೆ ಭೂಮಿ ಎಲ್ಲಿದೆ? ಹಿಮಾಲಯ ಪರ್ವತದಲ್ಲಿದೆಯೇ? ಬಾಬಾಬುಡನ್ ಗಿರಿಯಲ್ಲಿದೆಯೇ? ವಿಂಧ್ಯಪರ್ವತದಲ್ಲಿದೆಯೇ? ಭೂಮಿ ಎಲ್ಲಿ ಹೆಚ್ಚಾಗಿದೆ ಎಂದು ಹೇಳಿ ಯಾರಿಗೆ ಹಂಚಬೇಕು ಎಂದಿದ್ದೀರಿ. ಯಾರೂ ಬೇಕಾದರೂ

ಹೋಗಿ ಉಳಲಿ ಎನ್ನುವುದಕ್ಕೆ free master ನಂತಿರಲು ಜಮೀನೆಲ್ಲಿದೆ? ನಿಮಗಿರತಕ್ಕ Paramount Power ಎಲ್ಲಿದೆ ? ಆದುದರಿಂದ ಇಷ್ಟೆಲ್ಲಾ ಅಧಿಕಾರ ಮತ್ತು ಆಡಳಿತಕ್ಕೆ ಅವಕಾಶವಿರುವ ಈ ಚಾಪ್ಟರನ್ನು ಪೂರ್ಣವಾಗಿ ತೆಗೆದುಹಾಕಬೇಕು. ತಾವು ಎಷ್ಟು ದೊಡ್ಡ ವ್ಯವಸಾಯಗಾರನಿಗೆ ಏನು ಮಾಡಿದಿರಿ ಎಂಬ ಬಗ್ಗೆ ಒಂದು ನಿದರ್ಶನವನ್ನು ಹೇಳುವುದಾದರೆ, ಸರಕಾರಿ ಜಮೀನಿನಲ್ಲಿ ಈಚಲು ಮರಗಳನ್ನು ತೆಗೆದುಹಾಕಿ ಅಲ್ಲಿ ಕೆಲವರು ವ್ಯವಸಾಯ ಮಾಡಿದ್ದರೆ ಅದನ್ನು ಡೆಪ್ಯುಟಿ ಕಮಿಷನರವರು unauthorised cultivator ಎಂದು ಅವರ ಬೆಳೆಯನ್ನು ಕಿತ್ತು ಜಡಿಸ ಬೇಕೆಂದಿದ್ದ ವಿಚಾರದಲ್ಲಿ ತಾವು ಸ್ಟೇ ಆರ್ಡರು ಕೊಟ್ಟು ಅಲ್ಲಿ ಬೆಳೆದಿರುವ ಜೋಳದ ಸಿಪ್ಪೆಯನ್ನು ತೆಗೆದುಕೊಳ್ಳಕೂಡದು ಎಂದು ಹೇಳುವಾಗ ನಿಮ್ಮ ಹತ್ತಿರ ಜಮೀನೆಲ್ಲಿದೆ ?
ಜಮೀನು ಕೊಡುವ ವಿಚಾರದಲ್ಲಿ ಪೊಲಿಟಿಕಲ್ ಸಫರರ್ಸನ್ನು ಮುಂತಾದವರ ಬಗ್ಗೆ ಏನೇನೋ ವ್ಯಾಖ್ಯಾನ ಮಾಡಿದ್ದಾರೆ ಯುದ್ಧ ರಂಗದಲ್ಲಿ ಕೆಲಸ ಮಾಡುವವರಿಗೆ ಜಮೀನು ಕೊಡಬೇಕೆಂದು ಹೇಳುತ್ತಾರೆ ಆದರೆ ಕೊಡುವುದಕ್ಕೆ ಜಮೀನು ಎಲ್ಲಿದೆ ? ಈ ಮಸೂದೆಯಲ್ಲಿ ಇಂಥ ಕಲಮುಗಳನ್ನು ಡಿಲೀಟ್ ಮಾಡಬೇಕು ಎಂದು ನಾನು ಹೇಳುತ್ತೇನೆ. ದೇಶದ ಜನತೆಗೆ ಅಗೌರವ ತರತಕ್ಕಂಥಾ ದಲ್ಲಿ ಇರಕೂಡದು. ಈ ಚಾಪ್ಟರ್ ಡಿಲೀಟ್ ಮಾಡಿ ಎಂದು ಹೇಳುತ್ತೇನೆ.

12 NOON

ಇನ್ನು 68ರಿಂದ 73ರವರೆಗೆ ಇರತಕ್ಕ ಕಲಮುಗಳ ಬಗ್ಗೆ ಸ್ವಲ್ಪ ಹೇಳುತ್ತೇನೆ. ಹಳ್ಳಿಗಳಲ್ಲಿ ಗೋಮಾಳ ಬಿಟ್ಟಿರುವುದಿಲ್ಲ. ಎಲ್ಲ ಭೂಮಿ ತೆಗೆದುಕೊಂಡು ಬಿಟ್ಟಿದ್ದಾರೆ. ಲಕ್ಷಾಂತರ ಎಕರೆ ಭೂಮಿಯನ್ನು ಮಂತ್ರಿಗಳು ತಮ್ಮ ಕೈಯ್ಯಲಿಟ್ಟುಕೊಂಡಿದ್ದಾರೆ. ಇದು ಸರಿಯಲ್ಲ. ಇನ್ನು recovery of value of natural produce unauthorisedly removed from certain lands ಎಂದು 69ನೇ ಕಾಲಮಿನಲ್ಲಿದೆ. ಒಂದು ಕಡೆ ವನಮಹೋತ್ಸವ ಆಚರಿಸಬೇಕೆಂದು ಹೇಳಿದರೆ ಇನ್ನೊಂದು ಕಡೆ ಮರಗಳನ್ನು ಕಡಿದು ಹಾಕುತ್ತಾರೆ. ಇದು ಯಾವ ನ್ಯಾಯ ? ಯಾರು ಯಾರು ಮರಗಳನ್ನು ಬೆಳೆಸುತ್ತಾರೆಯೋ ಅಂಥವರಿಗೆ ಒಂದು ಸರ್ಟಿಫಿಕೇಟ್ ಕೊಡಬೇಕು. ಗ್ರಾಮ ಪಂಚಾಯಿತಿ ಲಿಮಿಟ್ಟಿನಲ್ಲಿ ಗಿಡಗಳನ್ನು ನೆಡುವುದಕ್ಕೆ ಅವರಿಗೆ ಬಿಟ್ಟುಕೊಡಬೇಕು. ಎಲ್ಲವೂ ಸರಕಾರಕ್ಕೆ ಸೇರಿದ್ದು ಎಂದು ಹೇಳುವುದು ಸರಿಯಲ್ಲ. ಇದನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕೆಂದು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಕಾಲಮು 71 ಪ್ರಕಾರ ಈ ಕಾನೂನು ಜಾರಿಗೆ ಬರುವುದಕ್ಕೆ ಮುಂಚಿತವಾಗಿ ಯಾರು ಭೂಮಿಯನ್ನು ಹಂಚಿಕೊಳ್ಳುತ್ತಾರೆಯೋ ಅವರೇ ಧನ್ಯರು. ಯಾವುದಾದರೂ ಸರ್ಪ್ಲಸ್ ಲ್ಯಾಂಡ್ ಉಳಿದಿದ್ದರೆ ಅದನ್ನು ಸರ್ವೆ ಸೆಟಲ್‌ಮೆಂಟ್ ಆಗುವವರೆಗೆ ಕೊಡುವುದಿಲ್ಲ ಎಂದು ಹೇಳುವುದು ಬಹಳ ಅನುಮಾನವಾಗುತ್ತದೆ. ಇದರಲ್ಲಿ ದೋಷ ಉಳಿದಿದೆ ಎಂದು ಅನಿಸುತ್ತದೆ. ಆದುದರಿಂದ ಇದನ್ನು ಕೂಲಂಕಷವಾಗಿ ವಿಚಾರ ಮಾಡಬೇಕು ಎಂದು ಬಹಳ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

Clause 72. Trees and Forests vesting in the Government.

Mr. SPEAKER.—Are these new clauses or are they found in the old Land Revenue Code?

Sri M. V. KRISHNAPPA.—Most of the clauses are from the old Land Revenue Code Sir.

Mr. SPEAKER.—Did they justify their existence on the whole?

Sri M. V. KRISHNAPPA.—Only those clauses have been copied.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಕಂದಾಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರ ತಾತಂದಿರ ಕಾಲದಿಂದಲೂ ಇದ್ದಂಥ ಕಾನೂನು ಸರಿಯಾಗಿಲ್ಲ. ಅದನ್ನು ಈಗ ಅವರ ಮೊಮ್ಮಗ ನಾಗಿರುವ ಕಂದಾಯ ಮಂತ್ರಿಗಳು ಸರಿಯಾಗಿ ಮಾಡುವುದಕ್ಕೆ ಹೊರಟಿದ್ದಾರೆ. ಆಗ್ಗೆ ರೆವಿನ್ಯೂ ಕೋಡ್ ಇರಲಿಲ್ಲ. ಭೂಸುಧಾರಣೆ ಇರಲಿಲ್ಲ. ಪಿ. ಎಸ್. ಪಿ. ಕಾಂಗ್ರೆಸ್, ಸೋಷಲಿಸ್ಟ್ ಪಾರ್ಟಿ ಗಳು ಇರಲಿಲ್ಲ.

Mr. SPEAKER.—The Hon'ble Member on the whole forgets that he wanted the deletion of the whole chapter.

Sri C. J. MUCKANNAPPA.—Sir, you use all your wisdom and knowledge and mature experience and cross examine me, I will tumble down. I cannot stand it. I am shuddering in my shoes.

Mr. SPEAKER.—I am not doing it. I will again request you to deal with the clauses.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Clause 72. Trees and Forests vesting in the Government ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅರಣ್ಯ ಸರಕಾರದ್ದು. ಭೂಮಿ ಸರಕಾರದ್ದು ಆದರೆ ಅರಣ್ಯ ಖಾತೆ ಈದೆ. ರೆವಿನ್ಯೂ ಇಲಾಖೆ ಎಂದು ಬೇರೆ ಇದೆ. ಅರಣ್ಯ ಭೂಮಿ ಟ್ರಾನ್ಸಫರ್ ಮಾಡಬೇಕೆಂದು ರೆವಿನ್ಯೂ ಇಲಾಖೆಯವರು ಹೇಳಿದರೆ ರಾಜಸ್ವ ಮಂತ್ರಿಗಳು ಸ್ಟೇ ಆರ್ಡರ್ ಕೊಟ್ಟು ಬಿಟ್ಟಿದ್ದಾರೆ. ತಮಗೆ ಬೇಕಾದ ಮಾತು ಕೇಳಿ ಅನ್ಯಾಯ ಮಾಡುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅನ್ಯಾಯವಾಗುವುದನ್ನು ತಪ್ಪಿಸಲು ಕೆಲವು ಸಂದರ್ಭಗಳಲ್ಲಿ ಸ್ಟೇ ಆರ್ಡರ್ ಕೊಡಬೇಕಾಗುತ್ತದೆ. ಅನ್ಯಾಯ ಮಾಡಬಾರದು ಎಂದು ಸ್ಟೇ ಆರ್ಡರ್ ಕೊಡಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ನಿರ್ವಿಕಲ್ಪ ಸ್ವರೂಪ. 'ಸರ್ವೇಜನಾ ಸುಖಿನೋ ಭವಂತು' ಎಂಬುದು ನಿಮ್ಮ ಧ್ಯೇಯ. ಯಾರಿಗೂ ಅನ್ಯಾಯವಾಗಬಾರದು ರಾಕ್ಷಸರಿಗಾಗಲಿ ದೇವತೆಗಳಿಗಾಗಲಿ ಒಳ್ಳೆಯದಾಗಲಿ ಎಂಬುದು ನಿಮ್ಮ ಉದ್ದೇಶ. ನಿಮಗೆ ಇದೇ ಸದ್ಬುದ್ಧಿಯನ್ನು ದೇವರು ಕೊನೆಯವರೆಗೂ ಇಡಲಿ.

ಈ ಫಾರೆಸ್ಟಿನದು ಒಂದು ದೊಡ್ಡ ಕಥೆ. ಹಿಂದೆ ರೆವಿನ್ಯೂ ಮಿನಿಸ್ಟರು ಹೋಗಿ ಕಾಡಿನಲ್ಲಿ ಗುಡಿಸಲು ಹಾಕಿಕೊಳ್ಳಿ, ಕಾಡನ್ನು ಹಂಚಿಕೊಳ್ಳಿ ಎಂದು ಹೇಳಿದರು. ನಾನು ಹೇಳುತ್ತಿರುವುದು ನಡೆದಿರುವುದು. ಹಿಂದಿನ ಅಗ್ರಿಕಲ್ಚರ್ ಮಿನಿಸ್ಟರು ಚಾಮರಾಜನಗರದ ಹತ್ತಿರ ನೀವೆಲ್ಲಾ ಗೇಯಿಕೊಂಡು ಬಿಡಿರಿ ಎಂದು ಹೇಳಿದರು ಅವರು ಗೇಯಿಕೊಂಡು ಬಿಟ್ಟರು. ಉದ್ದೇಶ ಪ್ರೋಗ್ರಾಂ ಹಾಕಿಕೊಂಡು ಹೋಗಿ ಅಗ್ರಿಕಲ್ಚರ್ ಮಿನಿಸ್ಟರು ಹೇಳಿದರು. ಸಣ್ಣ ಸಣ್ಣ ರೈತರು ಹೋಗಿ ಕಾಡಿಗೆ ಬೆಂಕಿ ಹಚ್ಚಿದರು, ತಮ್ಮ ಮನೆ ಮಠ, ಆಸ್ತಿ ಪಾಸ್ತಿ ಎಲ್ಲಾ ಬೆಂಕಿಯಲ್ಲಿ ಬೆಂದುಹೋಯಿತು ಆದ್ದರಿಂದಲೇ ಜಮೀನನ್ನೇ ತಮಗೆ ಕೊಡಿ ಎಂದು ಕೇಳಿದರು. ಅಗ ಫಾರೆಸ್ಟ್ ಡಿಪಾರ್ಟ್‌ಮೆಂಟು ಏನು ಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಈ ವಿಚಾರದಲ್ಲಿ ಆರು ತಿಂಗಳ ಕಾಲ ಫಾರೆಸ್ಟ್ ಮಿನಿಸ್ಟರಿಗೂ ಅಗ್ರಿಕಲ್ಚರ್ ಮಿನಿಸ್ಟರಿಗೂ ಘರ್ಷಣೆ ನಡೆದು ಹೋಯಿತು. ಚೀಫ್ ಮಿನಿಸ್ಟರ್ ಜತ್ತಿಯವರು ಇಂಟರ್‌ಫಿಯರ್‌ಮಾಡಿ ಅಲ್ಲಿಗೇ ಬಿಟ್ಟುಬಿಡಿ ಎಂದು ಹೇಳಿದಮೇಲೆ, ಇಬ್ಬರೂ ಅಲ್ಲಿಗೇ ಬಿಟ್ಟುಬಿಟ್ಟರು ಭೂಮಿಯನ್ನು ಅನ್ಯಾಯವಾಗಿ ಆಕ್ರಮಣ ಮಾಡಿಕೊಂಡಿದ್ದಾರೆ ಎಂದು ನಾನು ಹೇಳುತ್ತಿರುವುದು. Trees and Forests vesting in the Government ಎಂದಿದೆ. ಫಾರೆಸ್ಟ್ ಸರ್ಕಾರದ್ದು ಲ್ಯಾಂಡ್ ಬಂದಿರಬಹುದು, ಗೋಮಾಳ ಇರಬಹುದು. ಯಾವ ತರಹ ಭೂಮಿಯೇ ಆಗಲಿ, ಹಂಚುವಾಗ ಎಷ್ಟರ ಮಟ್ಟಿಗೆ ಒಬ್ಬರಿಗೆ ತಿಕ್ಕಾಟ ನಡೆದಿದೆಯೆಂದು ಹೇಳುವುದ ಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಇಬ್ಬರು ಒಂದೇ ಆಗಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೇ ದೆಹಲಿಯಿಂದ ಇಲ್ಲಿಗೆ ಬಂದು ರೆವಿನ್ಯೂ ಮಿನಿಸ್ಟರಾಗಿರುವುದು. ಎಲ್ಲಾ ಕರತಲಾಮಲಕ ಮಾಡಿಕೊಂಡಿದ್ದೀರಿ. ನನಗೆ "ಮಂಕುತಿಮ್ಮನ ಕಗ್ಗ" ದಿಂದ ಈ ಪದ್ಯವನ್ನು ಹೇಳಿದರು :

"ಎದ್ದುದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ।
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ॥
ಉದ್ಧರಿಸುವೆನು ಜಗವನೆನ್ನುತಿಹ ಸಖಗೆ, ನಿ।
ನ್ನುದ್ಧಾರವೆಷ್ಟಾಯ್ತು ? ಮಂಕುತಿಮ್ಮ॥"

ಅದು ನನಗೆ relevant ಅಲ್ಲ. ಅವರಿಗೆ ಒಂದು ಪದ್ಯ ಹೇಳಬೇಕಾಗಿದೆ.

Mr. SPEAKER.—That itself will take you six minutes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅದನ್ನು ಈ ಸಭೆಯಲ್ಲಿ ಹೇಳಲೇಬೇಕು. ಅವರು ಮಮಕಾರ ಬಿಡಬೇಕು.

Mr. SPEAKER.—I suppose it is relevant to the clauses of the Bill otherwise I will not allow.

Sri C. J. MUCKANNAPPA.—Yes, Sir. ನಮ್ಮ ಸ್ನೇಹಿತರಿಗೆ ಎಷ್ಟು ಮಮಕಾರ ಇದೆಯೆಂದು ಹೇಳುತ್ತಿದ್ದೇನೆ. ಆ ಪದ್ಯ ಹೀಗಿದೆ ;

ಗರ್ವ ಭಂಗ

"ಎಂದೋ ನಿನಗೊಂದು ದಿನ ಮೂಗು ಮುರಿಯುವುದು ದಿಟ।
ವೃಂದಾರಕರು ಮತ್ಸರಿಸರೆ ಗರ್ವಿತರ?॥
ಸಂದರ್ಭಗಳನದಕೆ ಜೋಡಿಪನು ವಿಧಿರಾಯ ।
ಅಂದಿಕೊಳ್ಳನೆ ನಿನ್ನ ?—ಮಂಕುತಿಮ್ಮ॥
"ಗರುವ ಭಂಗವನಾಗಿಸಿದನು ಗರುಡಂಗೆ ಹರಿ ।
ಮುರಿಯಿಸಿದನಂತೆ ಫಲುಗುಣನ ಹೆಮ್ಮೆಯನು ॥
ಕರುಬುವಂ ವಿಧಿ ಸ್ವೈಸನಾರೊಳಂ ದರ್ಪವನು !
ಶಿರವ ಬಾಗಿಹುದೆ ಸರಿ—ಮಂಕುತಿಮ್ಮ ॥"

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ನಿಮಗೋಸ್ಕರ ಹೇಳಿರುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೋಸ್ಕರ ಹೇಳಿಲ್ಲ. ನಿಮಗೋಸ್ಕರ ಹೇಳಿರುವುದು.

Mr. SPEAKER.—I call upon the Member to tell me under which clause he is bringing these two poems.

Sri C. J. MUCKANNAPPA.—I am reciting these poems because my friend has not behaved in the manner in which he is expected to behave and so I want this to be recorded though outside the scope of the debate. Just I wanted to report him and I did it.

Mr. SPEAKER.—Please tell me this comes under which clause

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಮಮಕಾರದಿಂದ ಕೂಡಿರತಕ್ಕಂಥಾದ್ದು ಕೆಟ್ಟದು ಎಂದು ಹೇಳಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ನನಗೆ ಹೊಂದಿಕೊಳ್ಳುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕ್ಲಾಸ್ 76 ಹೀಗಿದೆ.

"All Land whether applied to agricultural or other purposes and whereever situate, is liable to the payment of land revenue to the State Government according to the provisions of this Act,...

Mr. SPEAKER.—You have taken about 40 minutes after I came. Please be brief.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ exemptionನ್ನು ಯಾರಿಗೆ ಹೇಗೆ ಕೊಡಬೇಕು? ಯಾವ ಭೂಮಿಗೆ ಕೊಡಬೇಕು? The clause is silent on that point. ನನಗೆ ಈ ಕ್ಲಾಸು ಅರ್ಥವಾಗಿಲ್ಲ. ಅದಕ್ಕೋಸ್ಕರ ರೆವಿನ್ಯೂ ಖಾತೆಯ ಸಚಿವರು ಬಹಳ ಯೋಚನೆ ಮಾಡಿ ಈ ಮಸೂದೆಯನ್ನು ಮಾಡಬೇಕು.

ಹೇಳುವುದು ಬೇಕಾದಷ್ಟಿದೆ. ಆದರೆ ತಾವು ಗಡಿಯಾರದ ಕಡೆ ನೋಡುತ್ತಾ ಇರುವುದರಿಂದ ಹೆಚ್ಚು ವೇಳೆ ತೆಗೆದುಕೊಳ್ಳಲು ಇಷ್ಟವಿಲ್ಲ. ತಮ್ಮ ಮಾತಿಗೆ ಮಿತಿಮೀರದೆ. ಚಾಚೂ ತಪ್ಪದೆ, ತಮ್ಮ ಮನಸ್ಸಿಗೆ ನೋವು ಮಾಡದೆ ಇಡಬೇಕೆಂಬುದು ನನ್ನ ಉದ್ದೇಶ. ಇನ್ನು 3—4 ನಿಮಿಷ ಕೊಡುವುದಕ್ಕೆ ಸಾಧ್ಯವಿದ್ದರೆ ಮಾತನಾಡುತ್ತೇನೆ.

Mr. SPEAKER.—The hon'ble member has taken 40 minutes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Exception ಕೊಡಬೇಕೆಂದು 76ರಲ್ಲಿದೆ. ಆ ಕ್ಲಾಸು 77ರಲ್ಲಿಲ್ಲ. 77 ಹೀಗಿದೆ.

"*Alluvial Land and its liability to Land Revenue.*—(1) Notwithstanding any law, custom or usage to the contrary all alluvial lands, newly formed islands. abandoned river beds, shall vest in the State Government, but the holder or occupant of the bank or shore on which such alluvial land is formed,"

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

Is it unauthorised occupation or is it authorised occupation?

ನನಗೆ ಅರ್ಥವಾಗುವುದಿಲ್ಲ. ಅದು ಪೂರ್ಣಯ್ಯನವರ ಕಾಲದಲ್ಲಿಯೋ; ಪುಟ್ಟಣ್ಣಚೆಟ್ಟಿಯವರ ಕಾಲದಲ್ಲಿಯೋ ಸರಿಯಾಗಿದ್ದಿರಬಹುದು. ಆಗ ರಾಜ್ಯ ಸುಭಿಕ್ಷವಾಗಿತ್ತು. ಈಗ ಏನು ಗತಿ? ಅಮೃತ ಮಹಲ್ ಕಾವಲಿನಲ್ಲಿ ಟ್ಯಾಂಕ್ ಬೆಡ್ಡುಗಳಲ್ಲಿ, ಗೋಮಾಳದಲ್ಲಿ ಫಾರೆಸ್ಟಿನಲ್ಲಿ ಎಷ್ಟು ಸಾವಿರ ಎಕರೆ unauthorised cultivation ಇದೆ? ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರ? unauthorised cultivation ಮತ್ತು occupation ಮಾಡಿರುವವರನ್ನು evict ಮಾಡುವುದಕ್ಕೆ ಎಲ್ಲಿಯೂ ಒಂದು ಕ್ಲಾಸನ್ನೂ ಸೇರಿಸಿಲ್ಲ. ಕಂದಾಯ ವಸೂಲು ಮಾಡುತ್ತಾರೆಯೆ? ಜುಲ್ಮಾನೆ ವಸೂಲು ಮಾಡುತ್ತಾರೆಯೆ? ಇದರಲ್ಲಿ ಯಾವುದೂ ಇಲ್ಲ. ಬೇಕಾದವರಿಗೆ 5 ರೂಪಾಯಿ ತಕರಾರು ತಃಖ್ತೆ ಹಾಕಿ ಬೇಡದವರಿಗೆ, ಬಡವರಿಗೆ 500 ರೂಪಾಯಿ ಜುಲ್ಮಾನೆ ಹಾಕಿ, ಮನೆ ಮಠ ಹರಾಜು ಮಾಡುತ್ತೀರ? "Land Revenue" chapterನಲ್ಲಿ, clauses 76 ಮತ್ತು 77 ನನಗೆ ಏನು ಅರ್ಥವಾಗಿಲ್ಲ. ಅದಕ್ಕೋಸ್ಕರ ಸೆಲೆಕ್ಟ್ ಕಮಿಟಿಯವರು ಇವುಗಳನ್ನು ಪೂರ್ಣವಾಗಿ ಪರಿಶೋಧಿಸಿ, perfect ಅಗಿ ಮಾಡಬೇಕು.

ಇಷ್ಟು ಹೇಳಿ ಅಧ್ಯಕ್ಷರ ಅಪ್ಪಣೆ ಪಡೆದು ನನ್ನ ಭಾಷಣವನ್ನು ಮುಗಿಸುತ್ತೇನೆ.

(Sri S. Gopal Gowda rose)

Mr. SPEAKER.—Addressing Sri S. Gopala Gowda you may not catch my eye unless it be for five minutes. You may be in the Select Committee let me watch you may speak for five minutes.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಚರ್ಚೆಯಾಗುತ್ತಲಿರುವ ಮೈಸೂರು ಲ್ಯಾಂಡ್ ರೆವಿನ್ಯು ಕೋಡ್ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೆ. ಅದರೆ ಮಾನ್ಯ ಅಧ್ಯಕ್ಷರು ನೀವು ಸೆಲೆಕ್ಟ್ ಕಮಿಟಿಯಲ್ಲಿ ಇರಬಹುದಾದ್ದರಿಂದ, ಬೇಗ ಮುಗಿಸಬೇಕೆಂದು ತಿಳಿಸಿದ್ದಾರೆ.

ಮುಖ್ಯವಾಗಿ ಈ ಭೂಕಂದಾಯದ ಪದ್ಧತಿ ಬಹಳ ಹಳೆಯದು ಕಂದಾಚಾರದ್ದು, ಮತ್ತು ಒಬೀರಾಯನ ಕಾಲದ್ದು.

ಸಮಾಜವಾದದಲ್ಲಿ ಇಂಥ ಪದ್ಧತಿಗೆ ಅವಕಾಶವಿಲ್ಲ. ಈ ಅಂಶವನ್ನು ಮಾನ್ಯ ಮಂತ್ರಿಗಳೂ ತಿಳಿದುಕೊಂಡಿದ್ದಾರೆಂದು ಭಾವಿಸುತ್ತೇನೆ. ಆದಾಗ್ಗೂ ಅವರು ತಮ್ಮ ತಾತನ ಜಾಡಿನಲ್ಲೇ ಹೆಜ್ಜೆ ಹಾಕತಕ್ಕ ಹೆಮ್ಮೆಯ ಮೊಮ್ಮಗನಾಗಿದ್ದಂತೆ ರಾಜ್ಯ ಸ್ವಶಾಖೆಯ ಮಂತ್ರಿಗಳೂ ಈ ದಿವಸ ಈ ಮಸೂದೆಯನ್ನು ಈ ಸಭೆಯ ಮುಂದಿಟ್ಟಿದ್ದಾರೆ ಎಂಬುದಾಗಿ ನಾನು ಭಾವಿಸುತ್ತೇನೆ. ಆದರೆ ಈ ಮಸೂದೆಯ ಬಗ್ಗೆ ನನ್ನ ದೃಷ್ಟಿ ಬಹಳ ಭಿನ್ನವಾಗಿದೆ. ಈ ಹಿಂದೆ ಒಂದಾವರ್ತಿ ಆಗಲೇ ನಾನು ಇದೇ ಮಾತನ್ನು ಹೇಳಿದ್ದೆ. ಅದೇನೆಂದರೆ ಭೂಮಿಯನ್ನು ಆಸ್ತಿ ಪಟ್ಟಿಯಿಂದ ತೊಡೆದುಹಾಕಬೇಕು ಎಂದು ಭೂಮಿಯನ್ನಿಟ್ಟುಕೊಂಡಿದ್ದಾರೆ ಇದೊಂದು ದೊಡ್ಡ ಸ್ಥಿರಾಸ್ತಿಯನ್ನು ಇಟ್ಟುಕೊಂಡಿದ್ದೇನೆಂಬ ಭಾವನೆ ಜನರ ಮನಸ್ಸಿನಲ್ಲಿರುವಂತೆ ಕಾಣುತ್ತಿದೆ. ಭೂಮಿ ಒಂದು ಉತ್ಪತ್ತಿಯ ಮುಖ್ಯ ಸಾಧನೆ ಅದನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳಬೇಕು ಹೆಚ್ಚು ಹೆಚ್ಚಾಗಿ ಆಹಾರ ಬೆಳೆಯನ್ನು ಬೆಳೆದು ದೇಶಕ್ಕೆ ಒದಗಿಸಬೇಕು ಇಂದಿನ ಭೂಮಿ ಹಂಚಿಕೆಯಲ್ಲಿ ವಿತರಣೆಯಲ್ಲಿ ಉತ್ಪಾದನೆ ಹೆಚ್ಚು ಆಗಬೇಕು ಅನ್ನತಕ್ಕ ಉದ್ದೇಶಗಳೇ ಇಲ್ಲ. ಭೂಮಿ ಇದ್ದರೆ ಸಾಕು. ಅದು ಬೆಳೆದರೆ ಬೆಳೆಯಲಿ, ಬೀಳು ಬಿದ್ದಿರುವುದು ಹಾಗೇ ಬೀಳು ಬಿದ್ದಿರಲಿ ಅನ್ನತಕ್ಕ ಮನೋಭಾವನೆಗಳು ಜನರಲ್ಲಿ ಬೆಳೆದು ಬಂದಿವೆ. ಆದರೆ ಈ ಭಾವನೆಗಳನ್ನು ನಾವೀಗ ಒಂದು ಕ್ರಾಂತಿಕಾರಕ ರೀತಿಯಲ್ಲಿ ಬದಲಾವಣೆ ಮಾಡುವುದಾದರೆ ಮಾತ್ರ ಸಾಧ್ಯವಿದೆ. ಈಗ ಈ ಮಸೂದೆಯಲ್ಲಿ ಹೇಳಿರತಕ್ಕ ಮಧ್ಯವರ್ತಿಗಳನ್ನು ಮೊದಲು ತೊಡೆದುಹಾಕಬೇಕು. ಈ ಮಸೂದೆಯಲ್ಲಿ ಮತ್ತೆ ಲ್ಯಾಂಡ್ ಲಾರ್ಡುಗಳನ್ನು ತಮ್ಮ ಪೂರ್ವದ ಉನ್ನತ ಸ್ಥಾನಕ್ಕೆ ಏರಿಸಲು ಪ್ರಯತ್ನ ಸಾಗಿದಂತೆ ಕಾಣುತ್ತದೆ. ಆದರೆ ಸರ್ಕಾರದವರು ಈಗ ಲ್ಯಾಂಡ್‌ಲಾರ್ಡ್ ಇರುವುದರಿಂದ ಅವನ ಹೆಸರನ್ನು ಈ ಡೆಫೆನಿಷನ್ನಿನಲ್ಲಿ ಸೇರಿಸಲೇಬೇಕಾಗಿ ಬಂದಿತು ಎಂದು ಹೇಳಬಹುದು. ಆದರೆ ಅದೇ ರೀತಿ ಆ ಕಲ್ಟಿವೇಟರನ ಹೆಸರು ಈ ಮಸೂದೆಯಲ್ಲೇ ಎಲ್ಲೂ ಇಲ್ಲ. ಭೂಸುಧಾರಣೆಯ ಹೆಸರಿನಲ್ಲಿ ಭೂಮಾಲೀಕರಿಗೂ ಗೇಣೀದಾರರಿಗೂ ಒಂದು ಹೊಸ ರೂಪದಲ್ಲಿ ಮತ್ತೆ ಸಂಬಂಧ ಕಲ್ಪಿಸಲು ಹೊರಟಿರುವಂತೆ ಕಾಣುತ್ತಿದೆ. ಈ ದಿವಸ ಕೆಲವು ಜನರೇನು ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದಾರೆ ಮತ್ತು ಅಂಥ ಭೂಮಿಯನ್ನು ಅವರು 10-15

ವರ್ಷಗಳಿಂದ ಏನು ಸಾಗುವಳಿ ಮಾಡಿಕೊಂಡು ಬಂದಿದ್ದಾರೋ ಅಂಥ ಜನರ ಪರಿಣಾಮವೇನಾಗುತ್ತದೆ? ಅವರಿಗೇನು ಖಾಯಂ ಖಾತೆ ಮಾಡಿಕೊಡುವುದೇ ಅಥವಾ ಅವರನ್ನು ಅಲ್ಲಿಂದ ಇವಿಕ್ಟ್ ಮಾಡಿಸುವುದೇ ಎಂಬ ಜಟಿಲ ಪ್ರಶ್ನೆ ಬಂದಿದೆ. ಇಂಥ ಕೇಸುಗಳು ಈ ದಿವಸ ಅನೇಕ ಇರುತ್ತವೆ. ಇದನ್ನೆಲ್ಲಾ ನಾವು ಸರಿಪಡಿಸಬೇಕಾದರೆ ಬಹುಬೇಗ ಆಮೂಲಾಗ್ರವಾಗಿ ನಾವು ಈ ನಮ್ಮ ಹಳೇ ಪದ್ಧತಿಯನ್ನೆಲ್ಲಾ ಮಾರ್ಪಾಡು ಮಾಡಬೇಕಾಗಿರುತ್ತದೆ. ಇದಕ್ಕಾಗಿ ನಾವು ಒಂದು ಹೊಸ ರೆವಿನ್ಯೂ ಕೋಡನ್ನೇ ತಯಾರುಮಾಡಬೇಕಾಗಿರುತ್ತದೆ. ಆದರೆ ಈಗ ನಮ್ಮ ಮುಂದಿರತಕ್ಕ ಮಸೂದೆಯ ಸ್ವರೂಪವನ್ನು ನೋಡಿದರೆ ಈ ಹಿಂದೆ ಬೇರೆ ಬೇರೆ ಭಾಗಗಳಲ್ಲಿ ಹಳೇ ಕಾನೂನು ಏನಿತ್ತೋ ಅದನ್ನೇ ಈ ಮಸೂದೆಯಲ್ಲಿ ಒಂದು ರೀತಿಯಲ್ಲಿ ಅಳವಡಿಸಿ ಇದಕ್ಕೆ ಒಂದು ಹೊಸ ರೂಪನ್ನು ಕೊಟ್ಟು ಈ ಹಳೇದನ್ನೆ ಮತ್ತೆ ಮುಂದುವರಿಸಿಕೊಂಡು ಹೋಗಬೇಕೆಂಬ ಮನೋಭಾವ ಇದ್ದಂತೆ ಕಾಣುತ್ತದೆ. ಈ ಭಾವನೆ ಸಂಪೂರ್ಣವಾಗಿ ಹೋಗಬೇಕು. ಮೇಲಾಗಿ ಈ ದಿವಸ ನಾವು ಈ ಮಸೂದೆಯಲ್ಲಿ ಏನು ಕೆಲವು ವಿಧಿಗಳನ್ನು ನೋಡುತ್ತಿದ್ದೇವೋ ಅವುಗಳ ಬಗ್ಗೆ ಬಹಳ ವಿಷಾದದಿಂದ ಒಂದು ವಿಚಾರವನ್ನು ಹೇಳಬೇಕಾಗಿದೆ. ಅದು ಭಾಷೆಯ ವಿಚಾರ. ನಮ್ಮ ಈ ಆಡಳಿತ ವ್ಯವಹಾರ ಎಲ್ಲಾ ಕನ್ನಡದಲ್ಲೇ ಆಗಬೇಕೆಂದು ಪದೇ ಪದೇ ಹೇಳುತ್ತಿದ್ದೇನೆ. ನಾನು ಹೀಗೆ ಹೇಳುತ್ತಿರುವುದರಿಂದ ಇವನಿಗೇನು ಈ ಕನ್ನಡದ ಹುಚ್ಚು ಇಷ್ಟೊಂದು ಹಿಡಿದಿದೆ ಇಲ್ಲವೇ ಇಂಗ್ಲೀಷ್ ಭಾಷೆಯಮೇಲೆ ಏತಕ್ಕೆ ಈತನಿಗಿಷ್ಟು ಕೋಪ ಎಂಬುದಾಗಿ ಕೆಲವರು ಹೇಳಬಹುದು. ಆದರೆ ಅಂಥ ಭ್ರಮಣೆ ಏನೂ ಇಲ್ಲ. ಜನರು ಭಾವನೆಗಳನ್ನು ವ್ಯಕ್ತ ಮಾಡತಕ್ಕ ಒಂದು ಸಾಧನವೆಂದರೆ ಅದು ಭಾಷೆಯೇ ಆದರೆ ಹಿಂದಿನಿಂದಲೂ ಈ ಭಾಷೆ ಎಂಬುದು ಆಡಳಿತಗಾರರ ಮನೋಭಾವನೆಗೆ ತಕ್ಕ ಹಾಗೆ ಬದಲಾವಣೆ ಆಗುತ್ತ ಬಂದಿದೆ. ಆದರೆ ಹಿಂದೆ ಈ ರೆಕಾರ್ಡುಗಳೆಲ್ಲ ಕನ್ನಡ ಭಾಷೆಯಲ್ಲೇ ಇದ್ದವು. ನಾನು ಈ ವಿಚಾರವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಈ ಮಸೂದೆಯಲ್ಲಿ ತಹಶೀಲ್ದಾರರು ಈ ವ್ಯವಹಾರಗಳನ್ನು ಇಂಗ್ಲೀಷಿನಲ್ಲಿ ನಡೆಸಬೇಕೆಂದು ಹೇಳಿದೆ. ಅದಕ್ಕೆ ಸರಿಯಾಗಿ ಈಗ ನಮ್ಮ ಶಾಸನಸಭಾ ಇಲಾಖೆಯವರೂ ಕೂಡ ಈ ಬಿಲ್ಲುಗಳನ್ನು ಕನ್ನಡದಲ್ಲಿ ಮಾಡಿಸಿಲ್ಲ. ನಮ್ಮ ಕನ್ನಡ ರಾಜ್ಯದಲ್ಲಿ ಗ್ರಾಮದಲ್ಲಿರತಕ್ಕ ಜನರು ಭೂಮಿಯ ವಿಷಯದಲ್ಲಿ ಏನಾದರೂ ವ್ಯವಹಾರ ನಡೆಸಬೇಕಾದರೆ ಅವರೇನು ಭಾಷೆಯಲ್ಲಿ ಮಾತನಾಡುತ್ತಾರೋ ಆ ಭಾಷೆಯಲ್ಲಿರಬೇಕಾದ್ದು ನ್ಯಾಯ. ಆದರೆ ಹೈದರ ನಂತರ ಶಿರಾ ಬಿಜಾಪುರಕ್ಕೆ ಸೇರಿದ ಮೇಲೆ ಕನ್ನಡ ಭಾಷೆಯಲ್ಲಿದ್ದದ್ದು ಪರ್ಷಿಯನ್ ಭಾಷೆಗೂ ಮರಾಠೆಯವರ ಆಡಳಿತಕ್ಕೆ ಹೋದಾಗ ಕೆಲವು ಮರಾಠಿಗಳ ಶಬ್ದಗಳೂ ಸೇರಿದವು. ಆದರೆ ಇಂಗ್ಲೀಷರಕಾಲದಲ್ಲಿ ಇಂಗ್ಲೀಷ್ ಶಬ್ದಗಳೇನೂ ಅಷ್ಟಾಗಿ ಸೇರಲಿಲ್ಲವೆಂದು ಕಾಣುತ್ತದೆ. ಷೇರ್‌ಷಹನ ಕಾಲದಲ್ಲಿ ಒಂದಾವರ್ತಿ ಸರ್ವೆ ನಡೆಯಿತು. ಆಗಲೇ ಅರಬ್ಬಿ ಫಾರಸೀ ಶಬ್ದಗಳು ಸೇರಿದ್ದು. ಶಿವಪ್ಪನಾಯಕನ ಕಾಲದಲ್ಲಿ ''ಕುಳ'' ಎಂಬ ಒಂದು ಶಬ್ದವನ್ನು ರೈತನಿಗೆ ಉಪಯೋಗಿಸಲಾಗುತ್ತಿತ್ತು. ಶಿವಪ್ಪನಾಯಕನ ಶಿಸ್ತು ಎಂದೇ ಒಂದು ಪದ್ಧತಿ ಇತ್ತು. ಆದುದರಿಂದ ಈ ದಿವಸ ನಮಗೆ ಬೇಕಾದ ಕನ್ನಡ ಶಬ್ದಗಳು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಬೇಕಾದಂಥ ಕನ್ನಡ ಶಬ್ದಗಳಿವೆ. ಆದುದರಿಂದ ಸಾಮಾನ್ಯ ಜನರಿಗೆ ಸಂಬಂಧಪಟ್ಟ ಈ ಮಸೂದೆ ಜನರಾಡತಕ್ಕ ಭಾಷೆಯಲ್ಲಿ ಚರ್ಚೆ ಮಾಡಿ ಅವರಿಗೆ ತಿಳಿಯುವಂಥ ಭಾಷೆಯಲ್ಲಿ ನಾವು ಈ ಶಾಸನಗಳನ್ನು ಬರೆದಿಡಬೇಕು ಎಂಬ ಅಂಶವನ್ನು ಮಾನ್ಯ ಸಚಿವರು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ರಾಮೇ ಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ ಮೈಸೂರು ರಾಜ್ಯದ ಲ್ಯಾಂಡ್ ರೆವಿನ್ಯೂ ಕೋಡು 200 ಕ್ಲಾಜುಗಳನ್ನು ಮತ್ತು ಅನೇಕ ಉಪಕ್ಲಾಜುಗಳನ್ನೂ ಒಳಗೊಂಡಿದೆ. ಈ ಮಸೂದೆಯನ್ನೆಲ್ಲ ಪರಿಶೀಲನೆ ಮಾಡಿ ನೋಡಿದ್ದರಲ್ಲಿ ರೈತರಿಗೇನೂ ಅಂಥ ಅನುಕೂಲಮಾಡಿರತಕ್ಕ ಅಂಶಗಳಾವುವೂ ಕಂಡು ಬರುವುದಿಲ್ಲ. ಹಾಗಿರುವಾಗ ಕಳೆದ 13 ವರ್ಷಗಳಿಂದ ರೈತರಿಗೇನೇನು ಕಷ್ಟಗಳಿದ್ದವು ಅವುಗಳನ್ನೆಲ್ಲ ಪರಿಹರಿಸಿ ಅವರಿಗೆ ಅನುಕೂಲ ಮಾಡಲು ಈಗ ಈ ಮಸೂದೆಯನ್ನು ತರಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಈ ದಿವಸ ಈ ವಿಚಾರದಲ್ಲಿ ಜನರ ಅಭಿಪ್ರಾಯವೇ ಬೇರೆಯಾಗಿದೆ. ಸರ್ಕಾರದವರು ತಿಳಿದುಕೊಂಡಿರುವುದೇ ಬೇರೆಯಾಗಿದೆ. ರೈತನಿಗೆ ಪ್ರತಿ ಹಂತದಲ್ಲಿಯೂ ಕಷ್ಟ ತಪ್ಪಿಲ್ಲ. ಅವನ ಪರಿಸ್ಥಿತಿಯನ್ನು ವಿಚಾರ ಮಾಡಿ ಅವನಿಗೆ ಸಾಕಷ್ಟು ಅನುಕೂಲ ಕಲ್ಪಿಸಲು ತಾಲ್ಲೂಕ್ ಮಟ್ಟದಲ್ಲಿ ಒಳ್ಳೇ ಅಧಿಕಾರಿಗಳು ಬೇಕಾಗಿದೆ. ಈಗಿರತಕ್ಕ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿರತಕ್ಕದ್ದೆಲ್ಲ ಬಹಳ ಹಳೆಯದು. ಅದೆಲ್ಲವು ತಿದ್ದುಪಡಿಯಾಗಬೇಕು, ಮಾರ್ಪಾಡಾಗಬೇಕು. ಇಲ್ಲಿಗೆ 50 ವರ್ಷಗಳ ಹಿಂದೆ ಗ್ರಾಮಗಳಲ್ಲಿ ಚಾವಡಿ ಎಂಬುದು ಒಂದು ಸ್ಥಳವಿತ್ತು. ಈಗ ಅದು ಬಿದ್ದುಹೋಗಿ ಅಲ್ಲಿ ಬೇರೆ ಮನೆಗಳಾಗಿವೆ. ಈಗ ಚಾವಡಿ ಎಂಬ ಸ್ಥಳ ಯಾವ ಗ್ರಾಮದಲ್ಲೂ ಇಲ್ಲ. ಆದಾಗ್ಯೂ ಈಗ ಈ ಕೋಡಿನಲ್ಲಿ ''ಚಾವಡಿ'' ಎಂಬ ಶಬ್ದವನ್ನೇ ಉಪಯೋಗಿಸಿದಾಗೆ. ಚಾವಡಿಗಳನ್ನೆಲ್ಲ ಮಾರಾಟ ಮಾಡಿ ಮನೆಗಳನ್ನು

(ಶ್ರೀ ಡಿ. ರಾಮೇಗೌಡ)

ಕಟ್ಟಿಕೊಂಡಿದ್ದಾರೆ. ಚಾವಡಿಯನ್ನಾಗಲೀ ಇನ್ನು ಯಾವುದಾದರೂ ಸ್ಥಳವನ್ನಾಗಲೀ ಡೆಪ್ಯುಟಿ ಕಮಿಷನರು ಚಾವಡಿ ಎಂದು ತಿಳಿಸಬಹುದು ಎಂದು definitionsನಲ್ಲಿ ಹೇಳಿದ್ದಾರೆ. ನಾವೇಕೆ 'ಚಾವಡಿ' ಎನ್ನುವ ಹಿಂದಿನ ಪದಕ್ಕೆ ಅಂಟಿಕೊಳ್ಳಬೇಕು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಹಿಂದಿನಿಂದ ಇರತಕ್ಕ ಕಷ್ಟಗಳು ಇನ್ನೂ ಮುಂದುವರಿಯಲಿ ಎಂದು ಇದ್ದರೆ ಈ ರೀತಿ ಮಾಡಬಹುದು. ಮತ್ತು ಬಹಳ ಕಠಿಣ ಪರಿಸ್ಥಿತಿಗೆ ನಮ್ಮ ಜಮೀನ್ದಾರರು ಮತ್ತು ಹಿಡುವಳಿದಾರರು ಈಡಾಗುತ್ತಾರೆನ್ನುವುದು ನಮ್ಮ ಭಾವನೆ.

12-30 P.M.

ತಹಸೀಲ್ದಾರರು, ಅಡಿಷನಲ್ ತಹಸೀಲ್ದಾರರು, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು, ಡೆಪ್ಯುಟಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್, ರೆವೆನ್ಯೂ ಇನ್ಸ್‌ಪೆಕ್ಟರುಗಳು, ಸಾಲದ್ದಕ್ಕೆ ವಿಲೇಜ್ ಅಕೌಂಟ್ಸ್ ಆಫೀಸರ್ ಎಂದು ಬೇರೆ ಅಧಿಕಾರಿಯನ್ನು ಹಾಕಿದ್ದಾರೆ. ಈ ಅಧಿಕಾರಿಗಳು ಜಾಸ್ತಿಯಾದ ಹಾಗೆಲ್ಲ ಅವರಿಗೆ ಕೆಲಸ ಕಡಮೆಯಾಗಿ ಪುರಸೊತ್ತು ದೊರಕುತ್ತಿದೆ. ಆದರೆ ರೈತರಿಗೆ ಏನೇನು ಅನನುಕೂಲಗಳಿವೆ, ಅವರಿಗೆ ಯಾವ ರೀತಿಯಲ್ಲಿ ಅನುಕೂಲ ಮಾಡಬೇಕು ಎನ್ನುವುದರ ಕಡೆಗೆ ಗಮನಕೊಡುತ್ತಿಲ್ಲ. ಯಾವ ತಾಲ್ಲೂಕಿನಲ್ಲಿಯೇ ಆಗಲಿ ಸೇಕಡ ಹತ್ತು ಭಾಗ ಮಾತ್ರ ಒಂದು ವರ್ಷದಲ್ಲಿ ಕಂದಾಯ ಬಾಕಿ ಉಳಿಯುತ್ತದೆ. 90 ಭಾಗ ಎಲ್ಲಿಯೂ ಉಳಿಯುವುದಿಲ್ಲ. ಆದುದರಿಂದ ತಹಸೀಲ್ದಾರರ ಕೆಲಸ ಬಹಳ ಕಡಮೆ ಇದೆ. ಅಧಿಕಾರಿಗಳನ್ನು ಹೆಚ್ಚು ಹೆಚ್ಚು ಮಾಡುವುದು ಸರಿಯಲ್ಲ. ಅದಷ್ಟುಮಟ್ಟಿಗೂ ಈಗ ಯಾವ ಯಾವ ಅಧಿಕಾರಿಗಳಿದ್ದಾರೆಯೋ ಅವರಿಗೇ ಜಾಸ್ತಿ ಜವಾಬ್ದಾರಿಯನ್ನು ವಹಿಸಿ, ಅವರು ತಮ್ಮ ಜವಾಬ್ದಾರಿಯನ್ನು ಮೀರಿ ನಡೆದರೆ, ಅಥವಾ ಯಾವುದಾದರೂ ಕಾರ್ಯವನ್ನು ನಿಷ್ಠೆಯಿಂದ ಮಾಡದೆಹೋದರೆ ಏನು ಕ್ರಮ ಜರುಗಿಸಬೇಕು, ಎನ್ನುವಂಥ ಕ್ಲಾಜನ್ನು ಈ ಕೋಡಿನಲ್ಲಿ ಸೆಲೆಕ್ಟ್ ಕಮಿಟಿಯ ಸದಸ್ಯರು ಪರಿಶೀಲಿಸಿ ಸೇರಿಸಬೇಕು ಎಂದು ನನ್ನ ಅರಿಕೆ.

ಅಡಿಷನಲ್ ಡೆಪ್ಯುಟಿಕಮಿಷನರಿರಬೇಕು ಎಂದು ಹೇಳಿದ್ದಾರೆ. ಇದು ಏಕೆ ಪುನಃ ಬಂತು ಎಂದು ನನಗೆ ಗೊತ್ತಿಲ್ಲ. ಮಾನ್ಯ ರೆವೆನ್ಯೂ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಅಡಿಷನಲ್ ಡೆಪ್ಯುಟಿ ಕಮಿಷನರ ನೇಮಕ ವಿಚಾರವನ್ನು ಸಭೆಯ ಮುಂದೆ ತಂದಾಗ ಮುಂದೆ ರೆವೆನ್ಯೂ ಕೋಡ್ ಬರುತ್ತದೆ, ಆಗ್ಗೆ ಈ ಹುದ್ದೆಗಳ ನೇಮಕವನ್ನು ತೆಗೆದು ಹಾಕುತ್ತಾರೆನ್ನುವ ಭಾವನೆಯಿತ್ತು. ಆದರೆ ಸರ್ಕಾರದವರು ಇದನ್ನು ಖಾಯಂ ಮಾಡಿದ್ದಾರೆ. ನನಗೆ ತಿಳಿದಮಟ್ಟಿಗೆ ಆಡಳಿತದಲ್ಲಿ ನಿಧಾನವಾಗುತ್ತಿರುವುದರಿಂದ ರೈತರಿಗೆ ತೊಂದರೆಯಿದೆಯೇ ವಿನಾ ಕೋಡ್‌ನಲ್ಲಿರುವ ನ್ಯೂನತೆಗಳಿಂದಲ್ಲ. ಯಾವ ಒಬ್ಬ ಅಧಿಕಾರಿಯೇ ಆಗಲಿ, ಯಾವ ಒಬ್ಬ ಸಬಾರ್ಡಿನೇಟ್ ಆಗಲೀ ಇದು ತನ್ನ ಕರ್ತವ್ಯವೆಂದು ತಿಳಿದುಕೊಂಡು ಕೆಲಸಮಾಡುತ್ತಿಲ್ಲ. ರೈತನಾದವನು ಒಂದು ಅರ್ಜಿ ಹಾಕಿದರೆ ಸರಿಯಾದ ಉತ್ತರ ಸಿಕ್ಕುವುದಿಲ್ಲ. ತಿಂಗಳುಗಟ್ಟಲೆಯಾದರೂ ಉತ್ತರ ಬರುವುದಿಲ್ಲ. ಇದರಿಂದಾಗಿ ತಾನು ಸ್ವಂತವಾಗಿ ತಿರುಗಬೇಕು, ಇಲ್ಲವೇ ಒಬ್ಬ ಲಾಯರನ್ನಾದರೂ ಹಿಡಿಯಬೇಕು, ಅಥವಾ ಲಂಚಕೊಟ್ಟು ಕೆಲಸಮಾಡಿಸಿಕೊಳ್ಳಬೇಕು. ಹೀಗಾಗಿ ರೈತನಾದವನು ಲಂಚಕೊಟ್ಟು ಕೆಲಸವನ್ನು ಮಾಡಿಸಿಕೊಳ್ಳತಕ್ಕ ವಿಧಾನವನ್ನು ಹೆಚ್ಚಾಗಿ ರೂಢಿಯಲ್ಲಿಟ್ಟುಕೊಂಡು ಬರುತ್ತಿದ್ದಾನೆ. ಸ್ವಾತಂತ್ರ್ಯ ಬಂದಮೇಲೆ, ನಮ್ಮ ದೇಶದ ಆಡಳಿತ ನಮ್ಮವರ ಕೈಗೆ ಬಂದಮೇಲೆ ಇಂಥದ್ದನ್ನೆಲ್ಲ ಸರಿಪಡಿಸುತ್ತಾರೆಂದು ಇಟ್ಟುಕೊಂಡಿದ್ದ ನಂಬಿಕೆಯನ್ನು ರೈತ ಕಳೆದುಕೊಂಡಿದ್ದಾನೆ. ಆಡಳಿತದಲ್ಲಿ ನಿಧಾನವಾಗುವುದನ್ನೂ ಸರಿಪಡಿಸಲು ಬೇಕಾದ ಕ್ಲಾಜನ್ನು ಇದರಲ್ಲಿ ಸೇರಿಸಬೇಕಾಗಿದೆ.

ಐಟಂ 28ರಲ್ಲಿ superior and inferior holders ಎಂದು ಹೇಳಿದೆ. ಇದೆ ಏಕೆ ಬಂತು ಎನ್ನುವುದು ಅರ್ಥವಾಗುವುದಿಲ್ಲ, ಇದನ್ನು ತೆಗೆಯಬೇಕು. ಜಮೀನು ಇರುವವನು superior holder ಮತ್ತು ಹಿಡುವಳಿ ಮಾಡುವವನು inferior holder ಎಂದು ಹಾಕಿದ್ದಾರೆ. ಇದರಿಂದ ನಮ್ಮ ಸರ್ಕಾರದವರಿಗೆ ರೈತನಮೇಲೆ ಏಷ್ಟು ಅಗಾಧವಾದ ಪ್ರೇಮವಿದೆ ಎನ್ನುವುದು ಅರ್ಥವಾಗುತ್ತದೆ. ಸೆಲೆಕ್ಟ್ ಕಮಿಟಿಯವರು ಈ ಪದಗಳ ಮೇಲೆ ಗಮನವಿಟ್ಟು inferior holder ಎನ್ನುವುದನ್ನು ಮೊದಲು ತೆಗೆಯಬೇಕು ಎಂದು ನನ್ನ ಅರಿಕೆ.

Zone ಪದ್ಧತಿಯನ್ನು ಇದರಲ್ಲಿಟ್ಟಿದ್ದಾರೆ. ಆಯಾ ಭಾಗದಲ್ಲಿ ಮಳೆ ಬೀಳುವುದು; ಭೂಮಿಯು ಫಲವತ್ತಾಗಿರುವುದು, ಏನೇನು ಬೆಳೆ ಬೆಳೆಯುತ್ತಾರೆ, ಎನ್ನುವ ವಿಷಯಗಳನ್ನೆಲ್ಲ ಪರಿಶೀಲನೆಮಾಡಿ Zone ಎಂದು ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ. ನಾನು ರೈತನಾಗಿ ಹೇಳುತ್ತೇನೆ. ಇದನ್ನು ಖಂಡಿತವಾಗಿಯೂ ಮಾಡುವುದಕ್ಕಾಗುವುದಿಲ್ಲ. ಒಂದು ತಾಲ್ಲೂಕಿನಲ್ಲಿ ಐದು ವಿಧವಾದ

ಭೂಮಿಗಳಿರುತ್ತವೆ. ಅದರಲ್ಲಿ ಕೆಲವು ಭಾಗಗಳಿಗೆ ಅನುಕೂಲವಾಗುತ್ತದೆ, ಇನ್ನುಳಿದ ಭಾಗಗಳಿಗೆ ಅನನುಕೂಲವಾಗುತ್ತದೆ. ಜೋನ್‌ಗಳಾಗಿ ವಿಂಗಡಿಸತಕ್ಕ ಪದ್ಧತಿಯನ್ನು ಇದರಿಂದ ತೆಗೆದು ಹಾಕಿ ಯಾವುದಾದರೂ ಒಂದು ಅನುಕೂಲವಾದ ವ್ಯವಸ್ಥೆಯಿಂದ ಜಮೀನನ್ನು ವಿಂಗಡಿಸಬೇಕು. ಜಮೀನುಗಳನ್ನು ಪರೀಕ್ಷೆ ಮಾಡತಕ್ಕ ವಿಧಾನಗಳು ಅನೇಕವಿವೆ. ಅದರಲ್ಲಿ ಭೂಮಿಗಳು ಎಷ್ಟರ ಮಟ್ಟಿಗೆ ಫಲಗಳನ್ನು ಕೊಡುತ್ತವೆ, ಎಷ್ಟರಮಟ್ಟಿಗೆ ರೈತನಿಗೆ ಅದರಿಂದ ಫಲಕಾರಿಯಾಗುತ್ತದೆಂದು ತಿಳಿದುಕೊಂಡು "ಜೋನ್" ವಿಂಗಡಿಸಬೇಕು. ಮಳೆಬೀಳುವುದರ ಮೇಲೆ ಅಥವಾ ಬೇರೆ ಯಾವುದಾದರೂ ಆಧಾರದಮೇಲೆ ವಿಂಗಡನೆ ಮಾಡುವುದು ಸರಿಯಲ್ಲ.

ಮಳೆ ಎಷ್ಟು ಬೀಳುತ್ತದೆಂದು ಗೊತ್ತುಮಾಡುವ ಪದ್ಧತಿ ಬಹಳ ವರ್ಷಗಳಿಂದ ಇದೆ. ಯಾವ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬೇಕಾದರೂ ಮಳೆ ಎಷ್ಟು ಬೀಳುತ್ತದೆ ಎಂದು ಮಂತ್ರಿಗಳೂ ಮತ್ತು ಅಭಿವೃದ್ಧಿ ಸಮಿತಿಯಲ್ಲಿರುವ ಸದಸ್ಯರೂ ಪ್ರಶ್ನೆ ಮಾಡುತ್ತಾರೆ. ಎಲ್ಲೆಲ್ಲಿ ಎಷ್ಟು ಮಳೆ ಬೀಳುತ್ತದೆಂದು ರಿಕಾರ್ಡ್ ಮಾಡುವ ಪದ್ಧತಿ ನೂರಾರು ವರ್ಷಗಳಿಂದ ಬದಲಾಯಿಸಿಲ್ಲ. ಇದನ್ನು ಸರ್ಕಾರ ಸ್ವಲ್ಪ ಗಮನಿಸಬೇಕು. ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಕಡೆ ಈ ಉಪಕರಣಗಳನ್ನು ಇಟ್ಟಿದ್ದಾರೆ. ಇದರಲ್ಲಿ ಎಷ್ಟು ನೀರು ಬಿತ್ತು ಎಂದು ನೋಡಬೇಕು. ಯಾರಾದರೂ ಹುಡುಗರು ಅದರಲ್ಲಿ ನೀರನ್ನು ತೆಗೆದುಕೊಂಡು ಹೋಗಿ ಹಾಕಿದರೆ ಅಥವಾ ಯಾರಾದರೂ ಅದರಿಂದ ನೀರನ್ನು ತೆಗೆದುಕೊಂಡು ಬಂದರೆ ಹೇಗೆ ಎನ್ನುವ ವಿಷಯಗಳೆಂದೂ ತಹಸೀಲ್ದಾರರಿಗೆ ತಿಳಿಯುವುದಿಲ್ಲ. ತಹಸೀಲ್ದಾರರು ಯಾವ ರೀತಿ ಪರಿಶೀಲಿಸಿ ರಿಪೋರ್ಟ್ ಕಳಿಸಿರುತ್ತಾರೆನ್ನುವುದು ತಿಳಿಯುವುದಿಲ್ಲ. ಇದರಿಂದ ನಾನಾ ತರಹ ತೊಂದರೆಗಳಾಗುತ್ತವೆ. ಮೈನರ್ ಇರಿಗೇಷನ್ ಯೋಜನೆಯಲ್ಲಿ 24 ಅಂಗುಲಕ್ಕಿಂತ ಜಾಸ್ತಿ ಮಳೆ ಬೀಳುವ ಕಡೆ ಖರ್ಚು ಮಾಡತಕ್ಕ ಹಣ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಿಂತ ಜಾಸ್ತಿ ಆಗಕೂಡದು ಎನ್ನುವ ಒಂದು ನಿಯಮವನ್ನು ಏನು ಮಾಡಿದ್ದಾರೆ, ಅದರಿಂದ ಬಹಳ ತಾಲ್ಲೂಕ್‌ಗಳಿಗೆ ಅನ್ಯಾಯವಾಗಿದೆ. ಆದ್ದರಿಂದ modern method ಯಾವುದಾದರೂ ಇದ್ದರೆ ಅದನ್ನನುಸರಿಸಿ ಪರೀಕ್ಷೆ ಮಾಡಿ ತೀರ್ಮಾನ ಮಾಡಿದರೆ ಒಳ್ಳೆಯದು. ಹೊಸ ಪದ್ಧತಿಗಳು ಬರುವವರೆಗೂ ಮಳೆ ಬೆಳೆಗಳ ಆಧಾರದಮೇಲೆ ಜೋನ್‌ಗಳನ್ನು ಮಾಡತಕ್ಕ ಪದ್ಧತಿಯನ್ನು ದಯವಿಟ್ಟು ತಪ್ಪಿಸಬೇಕು.

ನಾಲ್ಕನೆಯ ಕ್ಲಾಜಿನಲ್ಲಿ ಜಿಲ್ಲೆಗಳು, ತಾಲ್ಲೂಕುಗಳು, ಸರ್ಕಲ್‌ಗಳು ಹಳ್ಳಿಗಳು ಎಂದು ವಿಭಾಗಮಾಡುವುದಾಗಿ ಹೇಳಿದ್ದಾರೆ. ಸರ್ಕಲ್ ಎಂದು ವಿಂಗಡಿಸುವುದು ಸರಿಯಲ್ಲ. ಈಗಾಗಲೇ ಹೋಬಳಿ ಎಂದು ಇದೆ ; ಗ್ರೂಪ್ ಪಂಚಾಯಿತಿ ಏರಿಯಾ ಎಂದು ಇದೆ. ಈಗಿರುವಂತೆ ಹಳ್ಳಿಗಳು, ಗ್ರೂಪ್ ಪಂಚಾಯಿತಿ, ಹೋಬಳಿ ಎಂದೇ ಮುಂದೆಯೂ ಇರಬೇಕು. ಹಳ್ಳಿಗಳೂ, ಸರ್ಕಲ್‌ಗಳು ಎಂದು ಇದ್ದರೆ ಪಂಚಾಯಿತಿ ರಾಜ್ಯದಲ್ಲಿ ನಡೆಸತಕ್ಕ ಕಾರ್ಯಗಳು ಒಂದರಮೇಲೊಂದು overlap ಆಗಿ ತೊಂದರೆಯಾಗುತ್ತದೆ. ಆದುದರಿಂದ ಸರ್ಕಲ್‌ಗಳು ಬೇಡ, ಗ್ರೂಪ್ ಪಂಚಾಯಿತಿಗಳು ಮತ್ತು ಹಳ್ಳಿಗಳು ಎಂದು ಇದ್ದರೆ ಅನುಕೂಲವಾಗುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಕ್ಲಾಜ್ 14ರಲ್ಲಿ "The Village Accountant may be appointed *Ex officio* Secretary of the Panchayat" ಎಂದು ಹೇಳಿದ್ದಾರೆ. ಇದನ್ನು ನಾನು ಖಂಡಿತ ವಿರೋಧಿಸುತ್ತೇನೆ.........

Mr. SPEAKER.—The Hon. Member may resume afterwards. Now, the work for Monday has to be decided. I am told when the hon. Deputy Speaker was in the Chair, there was a request that we might close on Monday also. Am I correct ?

Sri M. V. KRISHNAPPA.—There was such a request. We have no objection, if the Leader of the Opposition agrees to it.

Mr. SPEAKER.—The Revenue Minister should not place the Leader of the Opposition in an embarrassing situation. I suggest that we may sit on the 27th and the 28th twice in the day, in the morning and in the evening as well so that there may be no time lost. One very good objection raised by the Leader of the Opposition was that time

(MR. SPEAKER)

for discussion of the Governor's Address would be curtailed. He did not like it. If we sit, as I said, twice on two days, the time could be made up so that there is nothing lost by not sitting on the 25th. We will take up Governor's Address when we meet next.

Sri S. SIVAPPA.—I was afraid that by not meeting on the 25th, the discussion on the Governor's Address would be curtailed. The suggestion is that we sit in the morning also for two days. Even then, I do not think that the members who want to participate in the discussion would get opportunities.

Mr. SPEAKER.—We will see as the situation developes.

Sri S. SIVAPPA.—In case we decide to have 25th as a holiday, I request the Hon. Speaker to see that another day is allotted for the discussion of the Address.

Mr. SPEAKER.—I give no such undertaking. I will try, as I have always tried, to accommodate as many members as possible. If the members also co-operate by being brief, it would help matters. I have attempted to see that no member is shut out unless I am compelled to do so by force of circumstances. Therefore, may I take it that the House agrees to have 25th as a holiday ?

Honble MEMBERS.—Yes.

Mr. SPEAKER.—We will meet on the 27th at 8-30 A.M.

ಶ್ರೀ ಜಿ. ರಾಮೇಗೌಡ.—ನಮ್ಮ ರಾಜ್ಯ, ಧರ್ಮ ರಾಜ್ಯವಾಗಬೇಕೆಂದು ಆಸೆ ಇರುವಾಗ ಪಂಚಾಯತಿ ರಾಜ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕಾಗಿತ್ತು. ಪಂಚಾಯತಿಗಳಿಗೆ ವಿಲೇಜು ಅಕೌಂಟೆಂಟರನ್ನು *Ex officio* Secretary ಯಾಗಿ ಕೆಲಸ ಮಾಡಬೇಕೆಂದು ಇದರಲ್ಲಿ ಹೇಳಿದೆ. ಪಾರ್ಟ್‌ಟೈಂ ಆಗಿ ಕೆಲಸ ಮಾಡುವುದರ ಅನುಭವ ನಮಗಿದೆ. ಈ ಪಂಚಾಯತಿಗಳಿಗೆ ಕೆಲಸ ಮಾಡಲು ಪೂರ್ತಿಕಾಲ ಕೆಲಸಮಾಡುವ ಒಬ್ಬ ಅಧಿಕಾರಿಯನ್ನು ನೇಮಿಸಿ ಪಂಚಾಯತಿ ಕೆಲಸಗಳನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನಮಾಡಿ ಅದರ ಆದಾಯವನ್ನು ಹೆಚ್ಚಿಸಬೇಕಾದ ಅವಶ್ಯಕತೆ ಈಗ ಬಂದಿದೆ. "Village Accountant may be appointed as *Ex officio* Secretary" ಎಂದಿರುವುದನ್ನು ಖಂಡಿತ ತೆಗೆಯಬೇಕು. ಈ ರೀತಿ ಪಾರ್ಟ್‌ಟೈಂ ಸೆಕ್ರೆಟೆರಿಯಾಗಿ ಅಪಾಯಿಂಟು ಮಾಡುವುದಕ್ಕೆ ಬದಲು ಈಗಿರುವ ಪಂಚಾಯತಿಗಳ ಸೆಕ್ರೆಟೆರಿಗಳು, ಪೂರ್ತಕಾಲ ಉತ್ತಮವಾಗಿ ಕೆಲಸಮಾಡುವಂತೆಮಾಡಿ ಅಲ್ಲಿನ ಆದಾಯವನ್ನು ಹೆಚ್ಚಿಸುವದಾದರೆ ಅವರ ಸಂಬಳಗಳನ್ನು ಕೊಡಲು ಅನುಕೂಲವಾಗುತ್ತದೆ.

ಇನ್ನು Chapter V ರಲ್ಲಿ Appeals and Revisions ಆದಮೇಲೆ chapter VI ರಲ್ಲಿ 57 ನೇ clause ನಲ್ಲಿ "No Civil Court Shall exercise Jurisdiction as to any such matters" ಎಂದಿದೆ. ರೈತರಿಗೆ ಇಂತಹ ಒಂದು ಪರಿಮಿತಿಯನ್ನುಮಾಡಿ ಫೈನಲ್ ಎನ್ನ ತಕ್ಕದ್ದು ಸರಿಯಲ್ಲ. ಈಗ ಸರಕಾರ ಯಾವ ಸ್ಥಿತಿಯಲ್ಲಿದೆ ಎಂದು ನಮ್ಮ ಅನುಭವದಿಂದ ಹೇಳುವುದಾದರೆ, influence ಮೇಲೆ ಜಾಸ್ತಿ ಕೆಲಸ ನಡೆಯುತ್ತದೆ; ಇಲ್ಲದೆ ಇದ್ದರೆ ಹಣವಿರಬೇಕು. ಹೀಗೆ ಹಣ ಮತ್ತು ಇನ್‌ಪ್ಲುಯೆನ್ಸು ಇವೆರಡೂ ಇಲ್ಲದೇ ಹೋದರೆ, ಸರಕಾರದಲ್ಲಿ ಯಾವ ಕೆಲಸವೂ ನಡೆಯುವಂತಿಲ್ಲ ಎನ್ನುವುದು ಜನತೆಗೆ ಬಹಳ ಚೆನ್ನಾಗಿ ಅರಿವನ್ನುಂಟುಮಾಡಿ ಬಿಟ್ಟಿದೆ. ಯಾವ ಒಂದು ಸರಕಾರಿ ಅಧಿಕಾರಿಯೂ ಮಾಡುವ ಆರ್ಡರಿನ ಮೇರೆ Judicial courts ಗಳಿಗೆ ಅಪೀಲು ಹೋಗಬಹುದು ಎಂದಿದ್ದರೆ ಆಗ ಅಧಿಕಾರಿಗಳು ಭಯದಿಂದ ಕೆಲಸ ಮಾಡುತ್ತಾರೆ, ಇಲ್ಲದೇ ಹೋದರೆ, ನ್ಯಾಯ ಕಡಮೆಯಾಗಿಹೋಗುವಂತಹ ಸನ್ನಿವೇಶಗಳು ಜಾಸ್ತಿಯಾಗುತ್ತವೆ. ಆದಕಾರಣ Judicial courts ಗಳಿಗೆ ಅಪೀಲಿಗೆ ಹೋಗುವುದಕ್ಕೆ ಅವಕಾಶ ಕೊಡಬೇಕು.

ಇನ್ನು Chapter VII ರಲ್ಲಿರುವ clause 86 (1) and (2) ರಲ್ಲಿ Issue of Receipts ಬಗ್ಗೆ ಹೇಳಿದ್ದಾರೆ. ವಿಲೇಜು ಅಕೌಂಟೆಂಟು ರಸೀದಿಗಳನ್ನು ಪಡೆದ ಹಣಕ್ಕೆ ಜಮೀನುದಾರರಿಗೆ ಅಥವಾ ಹಿಡುವಳಿದಾರರಿಗೆ ಕೊಡದಿದ್ದರೆ ಅವನಿಗೆ ಶಿಕ್ಷೆ ವಿಧಿಸಿರುವುದು ಸಾಕಷ್ಟು ಇಲ್ಲ.

ಜಮೀನುದಾರನಿಗಾಗಲೀ, ಹಿಡುವಳಿದಾರನಿಗಾಗಲೀ, ಅವನು ಕೊಡುವ ಒಂದು ಅಥವಾ ಎರಡು ರೂಪಾಯಿಗೆ ರಶೀತಿಗಳನ್ನು ಕೊಡದೆ ದುರುಪಯೋಗ ಪಡಿಸಿಕೊಂಡರೆ ಅಂತಹ ವಿಲೇಜು ಅಕೌಂಟೆಂಟುಗಳಿಗೆ ಶಿಕ್ಷೆ ಎಂದರೆ Dismissal ಮಾತ್ರ. ಇದರಲ್ಲಿ ಈಗ ಜುಲ್ಮಾನೆ ಎಂದು ಮಾತ್ರ ಇದೆ. 87 ರ ಸಬ್‌ಕ್ಲಾಜು (1) ರಲ್ಲಿರುವಂತೆ ರೈತನಿಂದ ಸಂದಾಯವಾಗತಕ್ಕ ಹಣಕ್ಕೆ ವಿಲೇಜು ಅಕೌಂಟೆಂಟಾದವರು ರಶೀತಿ ಕೊಡದೇಹೋದರೆ ಅದಕ್ಕೆ ಜುಲ್ಮಾನೆ ಎಂದಿರುವುದಕ್ಕೆ ಬದಲಾಗಿ Dismissal ಎಂದು ಈ ಕೋಡಿನಲ್ಲಿರುವಂತೆ ಮಾಡಬೇಕು. ಇಂತಹ ಕೋಡಿನಲ್ಲಿ ಇದನ್ನು ಸೇರಿಸಬೇಕು. ಸರ್ವೇಯರುಗಳ ಕೆಲಸವನ್ನು ಚೆಕ್ಕುಮಾಡಲು ಅವರಮೇಲೆ ಸರಿಯಾದ ಅಧಿಕಾರಿಗಳಿರಬೇಕು. ಅದರಲ್ಲೂ ತಾಲ್ಲೂಕು ಮಟ್ಟದಲ್ಲಿ ಈ ಸರ್ವೇಯರುಗಳ ಹಾವಳಿ ಎಷ್ಟುಮಟ್ಟಿಗೆ ಇದೆ ಎಂದು ಹೇಳುವುದಕ್ಕೆ ನಾನು ಬಹಳ ವಿಷಾದಪಡುತ್ತೇನೆ. ತಾಲ್ಲೂಕುಗಳಲ್ಲಿರುವ ಸರ್ವೇಯರುಗಳು ಬಾಂದಿನ ಕಲ್ಲುಗಳನ್ನು ಹಾಕಲು ಬರುವಾಗ ಯಾವ ಜಮೀನಿನವರು ಮಾಮೂಲು ಕೊಡುತ್ತಾರೋ ಅವರ ಕಲ್ಲನ್ನು ಸರಿಪಡಿಸುತ್ತಾರೆ. ಯಾರೂ ಅನುಸರಿಸದೇ ಹೋದರೆ, ಬಾಂದಿನ ಕಲ್ಲನ್ನು ಜರುಗಿಸಿ ಮುಂದೆಹೋಗಿ ಇನ್ನೊಬ್ಬ ಹಿಡುವಳಿದಾರನನ್ನು ಅವರಮೇಲೆ ಕೂರಿಸಿ ಅವರನ್ನು ಎತ್ತಿಕಟ್ಟಿ ಜನಕ್ಕೆ ತೊಂದರೆ ಕೊಡುತ್ತಾರೆ. ಈಚೆಗೆ ಒಂದು ನಿದರ್ಶನವನ್ನು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳನ್ನು ಕರೆದುಕೊಂಡುಹೋಗಿ ತೋರಿಸಿದೆ. ಅದರಲ್ಲಿ ಒಬ್ಬ ಜಮೀನುದಾರರು ರೈತನಿಗೆ ನಾನಾ ವಿಧದಲ್ಲಿ ತೊಂದರೆಗಳನ್ನು ಕೊಟ್ಟರು. ಸರಕಾರದ ಸೆಟಲ್‌ಮೆಂಟು ಆಫೀಸರು ಒಬ್ಬ ರೈತ ಜಮೀನನ್ನು ಸಾಗುವಳಿಮಾಡಿ ಐದುವರ್ಷವಾಗಿದ್ದರೂ ಅದರಿಂದ ಅವನಿಗೆ ಸರಿಯಾದ ಪ್ರತಿಫಲ ದೊರಕಲಿಲ್ಲ. ಸರಕಾರಕ್ಕೆ ಅಪೀಲು ಮಾಡಿದ್ದರೂ, ಈ ಸರ್ವೇಯರು ತಾಲ್ಲೂಕುಗಳಲ್ಲಿ ನಾನಾರೀತಿಯ ತೊಂದರೆಗಳನ್ನು ರೈತನಿಗೆ ಕೊಡುತ್ತಾರೆ. ಎಲ್ಲಿಯಾದರೂ ದರಖಾಸ್ತು ಜಮೀನಿದ್ದರೆ ಅದನ್ನು ಸರಕಾರದಿಂದ ಮಂಜೂರು ಮಾಡಿಸುತ್ತಾರೆ. ಮೊದಲಿನಿಂದಲೂ ಒಬ್ಬ ರೈತ ಜಮೀನನ್ನು ಹಿಡುವಳಿ ಮಾಡುತ್ತಿದ್ದವನನ್ನು ಇನ್ನೊಬ್ಬ ರೈತ ಅದರೊಳಗೆ ½ ಭಾಗ ತನ್ನದು ಹೋಗಿದೆ ಎಂದು ಸರ್ವೆಮಾಡಿಸಿ ಆ ಜಮೀನನ್ನು ಪಡೆಯಬೇಕು ಎಂದು ಪ್ರಯತ್ನ ನಡೆದಿದೆ. ಅಪೀಲು ಹೋದರೂ ಏನೂ ಆಗಲಿಲ್ಲ. ಇಂತಹ ಕಷ್ಟಗಳನ್ನು ಸರಿಮಾಡಲು ಬೇರೆ ಸರಿಯಾದ ಇನ್ಸ್‌ಪೆಕ್ಟರುಗಳಿರಬೇಕು. ರೆವಿನ್ಯೂ ಇನ್ಸ್‌ಪೆಕ್ಟರುಗಳೇನೋ ಈಗ ಮೇಲ್ವಿಚಾರಣೆ ಮಾಡಬಹುದು. ಇದನ್ನೆಲ್ಲ ಮಾನ್ಯ ರೆವಿನ್ಯೂ ಮಂತ್ರಿಗಳು ಸರಿಯಾಗಿ ಪರಿಶೀಲನೆ ಮಾಡುತ್ತಾರೆಂದು ಆಶಿಸುತ್ತೇನೆ. ಇವೆಲ್ಲ ಸಣ್ಣ ವಿಷಯ. ಸರ್ವೇಯರುಗಳು ಮಾಡತಕ್ಕ ತೊಂದರೆ ಹಾಗೂ ರೆವಿನ್ಯೂ ಇನ್ಸ್‌ಪೆಕ್ಟರುಗಳು ಜನಕ್ಕೆ ಎಷ್ಟು ತೊಂದರೆ ಕೊಡುತ್ತಿದ್ದಾರೆನ್ನುವುದನ್ನು ಸ್ಥಳವಲ್ಲಿಯೇ ಗಮನಿಸಿ ನೋಡಿದರೆ ಗೊತ್ತಾಗುತ್ತದೆ. ರೈತನು ಉಳಿಯುವಂತಿಲ್ಲ, ಸಾಧಾರಣವಾದ ಒಬ್ಬ ಅಧಿಕಾರಿ ಕೊಡತಕ್ಕ ತೊಂದರೆಯಿಂದಾಗಿ ರೈತರಿಗೆ ಬಹಳ ಅನನುಕೂಲಗಳಾಗುತ್ತಿವೆ. ಇದನ್ನು ಯಾವ ತಾಲ್ಲೂಕಿನಲ್ಲೇ ಆಗಲಿ ಚೆನ್ನಾಗಿ ಕಾಣಬಹುದು. ಯಾರೋ ಕೆಲವರು ಕೋಳಿಗಳನ್ನು ಸರ್ವೆಯರು ಬಂದಾಗ ಕೊಡಲಿಲ್ಲ ಎಂದು ಅಲ್ಲಿನ ರೈತರಿಗೆ ಸರಿಯಾಗಿ ಬಾಂದಿನ ಕಲ್ಲು ಹಾಕದೆ ತೊಂದರೆಕೊಟ್ಟರು ಎಂದು ಹೇಳಿದರು. ಕೋಳಿಗಳನ್ನು ಬೇಕಾದರೆ ಕೊಡೋಣ, ಅದರಲ್ಲೂ ನಮ್ಮ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಯಾವ ಸರಕಾರಿ ಅಧಿಕಾರಿಯಾಗಲೀ ಊಟವಿಲ್ಲದೆ ಉಪವಾಸ ಹೋಗಿಲ್ಲ. ಅಧಿಕಾರಿಗಳಿಗೇನೂ ಅಷ್ಟು ತೊಂದರೆಯಾಗಿಲ್ಲ. ಸರ್ವೇಯರು ಸರ್ವೇ ಮಾಡಿದ ಮೇಲೆ ಅವರ ಮೇಲೆ ಉಸ್ತುವಾರಿಮಾಡಲು ಸರಿಯಾದ ಅಧಿಕಾರಿಗಳಿರುವಂತೆ ವ್ಯವಸ್ಥೆ ಮಾಡಬೇಕು.

ಇನ್ನು Chapter XI ರಲ್ಲಿ Record of Rights ಗೆ ಸಂಬಂಧಪಟ್ಟಂತೆ, (2) ನೇ ಸಬ್ ಕ್ಲಾಸಿನಲ್ಲಿ ಹೀಗೆ ಹೇಳಿದೆ:

> "When the preparation of the Record of rights referred to in sub-section (1) is completed in respect of any village, the fact of such completion shall be notified in the official gazette and in such manner as may be prescribed"

ನನಗನಿಸುವುದೇನೆಂದರೆ, ಸುಮಾರು ನೂರಕ್ಕೆ ತೊಂಬತ್ತು ಜನ ರೈತರಿಗೆ ಸರಿಯಾಗಿ ಓದುವುದೇ ಗೊತ್ತಿಲ್ಲ. ನೀವು ಬೇಕಾದರೆ ನೋಡಬಹುದು. ತಾಲ್ಲೂಕುಗಳಲ್ಲಿ ಸ್ಥಳದಲ್ಲಿರುವ ಆಫೀಸಿನಲ್ಲಿ ಏನಾದರೂ ಪ್ರಕಟಣೆಗಳನ್ನು ಕನ್ನಡದಲ್ಲಿ ಪಬ್ಲಿಷ್ ಮಾಡಿದರೆ ಅವರ ಗಮನಕ್ಕೆ ಹೋಗುತ್ತದೆ. ಇಲ್ಲದೇ ಹೋದರೆ ಏನೂ ಗೊತ್ತಾಗುವುದಿಲ್ಲ. ಗ್ರಾಮ ಪಂಚಾಯತಿಗಳಲ್ಲಿ ತಿಳಿವಳಿಕೆ ಕೊಡಲು ಇಂತಹ ಪ್ರಕಟಣೆಗಳನ್ನು ಪಬ್ಲಿಷ್ ಮಾಡಿದರೆ ಇನ್ನೂ ಉತ್ತಮವಾಗುತ್ತದೆ. ಗ್ರಾಮ ಒಂದು ಸಣ್ಣರಾಜ್ಯ. ಈ ಗ್ರಾಮ ಪಂಚಾಯತಿಗಳಲ್ಲಿರುವ ಚೇರ್ಮನ್ನರೇ ಒಬ್ಬ ಮುಖ್ಯ ಮಂತ್ರಿ, ಖಾತೆಯವರು ಸಹಾಯಕ ಮಂತ್ರಿಗಳು ಇದ್ದಹಾಗೆ ಎಂದು ಹೇಳಿ ಜನಗಳಿಗೆ ಪ್ರೋತ್ಸಾಹ ಕೊಟ್ಟು ಪಂಚಾಯತಿ ರಾಜ್ಯ

(ಶ್ರೀ ಡಿ. ರಾಮೇಗೌಡ)

ಮಾಡಬೇಕೆಂದಿರುವಾಗ ಗೆಜೆಟ್ಟಿನಲ್ಲಿ ಈ ರೀತಿ ಪಬ್ಲಿಷ್ ಮಾಡುವುದರಿಂದ ಜನಗಳಿಗೆ ಸಹಾಯಮಾಡುವಂತಾಗುವುದಿಲ್ಲ. ಯಾವ ತಿಳಿವಳಿಕೆಯನ್ನಾದರೂ ಜನಕ್ಕೆ ಕೊಡಲು ಗ್ರಾಮ ಪಂಚಾಯತಿ ಆಫೀಸಿನ ಮುಖಾಂತರ ಪಬ್ಲಿಷ್ ಮಾಡಿದರೆ, ರೈತರಿಗೆ ಎಷ್ಟು ಅನುಕೂಲವಾಗುತ್ತದೆ ಎನ್ನುವುದು ಗೊತ್ತಾಗುತ್ತದೆ.

ಸ್ವಾಮಿ, ರಿಕಾರ್ಡ್ಸ್ ಆಫ್ ರೈಟ್ಸ್ ಇದು ಬಹಳ ಮುಖ್ಯವಾದುದು. ಡೆವಲಪ್‌ಮೆಂಟ್ ಇಲಾಖೆಯಲ್ಲಿ ರೈತನಿಗೆ ಏನಾದರೂ ಸವಲತ್ತು ಬೇಕಾದರೆ ಅದಕ್ಕೆ ಮುಖ್ಯ ಆಧಾರ ರಿಕಾರ್ಡ್ ಆಫ್ ರೈಟ್ಸ್. ಆದರೆ ಈಗ ಇಟ್ಟಿರತಕ್ಕ ರಿಕಾರ್ಡ್ಸ್ ಆಫ್ ರೈಟ್ಸ್ ವಿಧಾನ ಸರಿಯಾಗಿಲ್ಲ. ಆದ್ದರಿಂದ ರೈತನಿಗೆ ತೊಂದರೆಯಾಗುತ್ತದೆ. ಪ್ರತಿಯೊಂದು ಗ್ರೂಪ್ ಪಂಚಾಯ್ತಿ ಹಳ್ಳಿಯಲ್ಲಿ ಒಂದು ಪುಸ್ತಕ ಇಟ್ಟು ಅದರಲ್ಲಿ ಸರಿಯಾಗಿ ಎಂಟ್ರಿ ಮಾಡಬೇಕಾದುದು ಅಗತ್ಯ. ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. . ಇಲ್ಲದಿದ್ದರೆ ರೈತನಿಗೆ ಬಹಳ ತೊಂದರೆಯಾಗುತ್ತದೆ. ನಮ್ಮ ಕಂದಾಯ ಮಂತ್ರಿಗಳು ಈ ವಿಚಾರದಲ್ಲಿ ಒತ್ತಾಯ ಮಾಡಿದ್ದಾರೆ. ಆದರೆ ಅದು ಸಾಲದು. ಇನ್ನೂ ಹೆಚ್ಚು ಸಮರ್ಪಕವಾಗಿ ಇರುವಹಾಗೆ ಸರಿಪಡಿಸಬೇಕಾಗಿದೆ. ಮತ್ತು ನ್ಯೂನತೆಗಳನ್ನು ತಪ್ಪಿಸಬೇಕು. 135ನೇ ಕಲಮಿನಲ್ಲಿ ಅಪೀಲು ? ಹೋಗುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ.

Clause 142. Settlement of Boundary dispute by arbitration. ಈ ಸೆಕ್ಷನ್ ಪ್ರಕಾರ ಒಂದು ನಿರ್ಣಯ ಮಾಡಿರುವುದನ್ನು ಡೆಪ್ಯೂಟಿ ಕಮಿಷನರ್ ಅವರು ಕನ್‌ಫರ್ಮ್ ಮಾಡಬೇಕೆಂದಿದೆ. ಅಧಿಕಾರ ವಿಕೇಂದ್ರೀಕರಣ ಮಾಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಆದ್ದರಿಂದ ಆರ್ಬಿಟ್ರೇಷನ್ ಡಿಸಿಜನ್ ಫೈನಲ್ ಆಗಿರಬೇಕು ಎಂಬುದು ನನ್ನ ಅಭಿಪ್ರಾಯ. ಡಿ. ಸಿ. ತೀರ್ಮಾನ ಕೊನೆಯದಾಗಿ ಇರಬೇಕೆಂದು ಹೇಳುವುದು ಖಂಡಿತವಾಗಿ ಸರಿಯಲ್ಲ. ಇನ್ನು ಜಮೀನು ಬಾಬ್ತು ಖಾತೆಗಳು ಬದಲಾವಣೆ ಮಾಡುವುದು ಅಗತ್ಯವಾಗಿದೆ. ಜಮೀನು ಬೆಲೆ ಗೊತ್ತು ಮಾಡುವುದಕ್ಕೆ ಪಂಚಾಯತಿ ಸಲಹೆ ಪಡೆಯಬೇಕು. ಜಮೀನು ಬೆಲೆ ಕಂಡುಹಿಡಿದು ಇದನ್ನು ಗೊತ್ತು ಮಾಡಬೇಕು. ಅದಕ್ಕೊಂದು ಮಿತಿ ಇರಬೇಕು. ಇನ್ನು ಅನ್‌ಆಥರೈಜ್ಡ್ ಹಿಡುವಳಿ ಮಾಡಿದ್ದರೆ 500 ರೂಪಾಯಿ ಜುಲ್ಮಾನೆ ವಿಧಿಸಬೇಕೆಂದು ಇರುವುದು ಖಂಡಿತವಾಗಿಯೂ ಸರಿಯಲ್ಲ. ಆದರೆ 500 ರೂಪಾಯಿಗಳಿಗೆ ಮೀರದಂತೆ ಹಾಕಬೇಕು ಎಂದಿದ್ದರೆ ಸರಿಯಾಗುತ್ತದೆ. ಈ ಜುಲ್ಮಾನೆ ವಿಧಿಸುವ ವಿಚಾರದಲ್ಲಿ ರೈತನಮೇಲೆ ಹೆಚ್ಚು ಪ್ರೀತಿಯಿರಬೇಕು. ಸರಕಾರದಮೇಲೂ ಪ್ರೀತಿ ಇರಬಾರದು ಎಂದು ಹೇಳುವುದು ಸರಿಯಲ್ಲ. ರೈತನ ನಾನಾ ತೊಂದರೆಗಳನ್ನು ಮೊದಲು ಹೋಗಲಾಡಿಸಬೇಕು. ಈ ಕಾನೂನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಅಗತ್ಯ. ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಸಂಪೂರ್ಣವಾಗಿ ವಿಮರ್ಶೆ ಮಾಡಿ, ಪರಿಶೀಲಿಸಿ ಇನ್ನು ಹೆಚ್ಚು ಉತ್ತಮ ಕ್ಲಾಜುಗಳನ್ನು ಸೇರಿಸುತ್ತಾರೆಂದು ನಂಬಿದ್ದೇನೆ. ಅದಷ್ಟು ಮಟ್ಟಿಗೆ ರೈತನು ಪ್ರತಿಯೊಂದಕ್ಕೂ ಕಚೇರಿಗೆ ಹೋಗುವುದು ತಪ್ಪಬೇಕು. ಅವನ ಕಷ್ಟ ಪರಿಹಾರವಾಗಬೇಕು. ಮತ್ತು ದೇಶದಲ್ಲಿ ಹೆಚ್ಚು ಆಹಾರ ಪದಾರ್ಥ ಬೆಳೆಯುವುದಕ್ಕೆ ಅನುಕೂಲವಾಗಬೇಕು. ರೈತನ ಎಲ್ಲ ಕಷ್ಟಗಳನ್ನು ಪರಿಹಾರ ಮಾಡಿ ಅನುಕೂಲತೆ ಕಲ್ಪಿಸಿಕೊಡುವಹಾಗೆ ಮಾಡಬೇಕೆಂದು ಸೆಲೆಕ್ಟ್ ಕಮಿಟಿಯ ಸದಸ್ಯರನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ಲ್ಯಾಂಡ ರೆವೆನ್ಯೂ ಕೋಡನ್ನು ನಾನು ಸ್ವಾಗತಿಸುತ್ತೇನೆ. ಈ ರಾಜ್ಯದಲ್ಲಿ ಬಂದಿರತಕ್ಕಂಥ ಐದು ಪ್ರದೇಶಗಳಲ್ಲಿ ಬೇರೆ ಬೇರೆ ಕಾನೂನುಗಳು ಜಾರಿಯಲ್ಲಿವೆ. ಇಡೀ ರಾಜ್ಯಕ್ಕೆ ಒಂದೇ ರೀತಿಯ ಕಾನೂನು ಅನ್ವಯಿಸುವಹಾಗೆ ಈ ಮಸೂದೆಯನ್ನು ತಂದಿದ್ದಾರೆ. ಆದ್ದರಿಂದ ಇದು ಸ್ವಾಗತಾರ್ಹವಾದುದು. ಈ ಮಸೂದೆಯಲ್ಲಿ ಇನ್ನು ಅಧಿಕವಾಗಿ ಬದಲಾವಣೆ ಮಾಡಬೇಕಾಗಿದೆ. ಅದರ ಬಗ್ಗೆ ವಿವರವಾಗಿ ಈಗ ನಾನು ಹೇಳುವುದಿಲ್ಲ. ಅದನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲಿಸುತ್ತಾರೆ. ನಾನು ಈಗ ಒಂದೆರಡು ವಿಚಾರಗಳನ್ನು ಮಾತ್ರ ಹೇಳಲು ಬಯಸುತ್ತೇನೆ.

ಮುಖ್ಯವಾಗಿ ಬರೀ ಕಂದಾಯ ವಸೂಲ್ಮಾಡುವದಕ್ಕೋಸ್ಕರ ರೆವೆನ್ಯೂ ಡಿಪಾರ್ಟಮೆಂಟು ಇದೆ ಎಂದು ಭಾವನೆ ಮಾಡಿಕೊಳ್ಳಬಾರದು. ಹಿಂದೆ ಆ ರೀತಿ ಇದ್ದಿತು. ಇನ್ನು ಮುಂದೆ ಸ್ಥಳೀಯ ಸಂಸ್ಥೆಗಳು ಕಂದಾಯ ವಸೂಲ್ಮಾಡುವಹಾಗೆ ಇರಬೇಕು. ಪಂಚಾಯಿತಿಗಳು ಸಣ್ಣಪುಟ್ಟ ವ್ಯಾಜ್ಯ ಬಗೆಹರಿಸಬೇಕು. ಅವುಗಳಿಗೆ ಆಡಳಿತ ನಡೆಸುವುದಕ್ಕೆ ಹೆಚ್ಚೆಚ್ಚು ಅಧಿಕಾರ ಕೊಡಬೇಕೆಂಬುದು ಉದ್ದೇಶವಿದೆ. ರೈತನಿಗೆ ಅದಷ್ಟು ಹೆಚ್ಚು ಸೌಕರ್ಯ ಒದಗಿಸಿಕೊಡಬೇಕಾಗಿದೆ. ರೈತನಿಗೆ ಕಿರುಕುಳ ಕೊಡಬಾರದು ಎನ್ನುವ ಉದ್ದೇಶವಿದೆ. ಇದನ್ನು ಅಷ್ಟಾಗಿ ಈ ಮಸೂದೆಯಲ್ಲಿ

ಅಳವಡಿಸಿಲ್ಲ. ಇವತ್ತಿನ ದಿವಸ ಯಾವ ತಾಲ್ಲೂಕ್ ಆಫೀಸಿಗೆ ಹೋದರೂ ರೈತನನ್ನು ಸ್ವಾಗತಿಸಿ, ಅವನ ಕಷ್ಟ ಏನು ಎಂದು ಕೇಳತಕ್ಕಂಥ ಅಧಿಕಾರಿಗಳಿಲ್ಲ. ಶಿಫಾರಸು ಇಲ್ಲದೆ ಕೆಲಸವಾಗುವುದಿಲ್ಲ. ಕೆಲಸವಾಗಬೇಕಾದರೆ ಕಾಗದದ ಬೆನ್ನು ಹತ್ತಿಹೋಗಬೇಕಾಗುತ್ತದೆ. ಈ ಪರಿಸ್ಥಿತಿಯಿರುವುದರ ಬಗ್ಗೆ ಪ್ರತಿಯೊಬ್ಬರಿಗೂ ಮನವರಿಕೆಯಾಗಿದೆ. ಶ್ರೀ ಕಡಿದಾಳ್ ಮಂಜಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ್ಗೆ ಅನೇಕ ಸಲ ನಾನು ಈ ವಿಚಾರವನ್ನು ಅವರಿಗೆ ಹೇಳಿದ್ದೇನೆ.

ಮಂತ್ರಿಗಳಿಗೂ ಕೂಡ ಈಗಾಗಲೇ ಅನೇಕ ಸಾರಿ ಅನುಭವಕ್ಕೆ ಬಂದಿರುತ್ತದೆ. ಯಾರಾದರೂ ಮಂತ್ರಿಗಳ ಮಟ್ಟದಲ್ಲಿ ಬಂದು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳುವ ಸನ್ನಿವೇಶ ಬಹಳ ಇವೆ. ಇದು ತಪ್ಪಬೇಕು. ಸ್ಥಳದಲ್ಲಿರುವ ಅಧಿಕಾರಿಗಳೇ ತಮ್ಮ ಕೆಲಸವನ್ನು ಮಾಡಬೇಕು ; ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮಾಡದೆ ಹೋದರೆ ಅವರಿಗೆ ಬಂದೋಬಸ್ತು ಮಾಡುವ ಅಧಿಕಾರವನ್ನು ಮಂತ್ರಿಗಳು ತಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕು. ಎಲ್ಲವನ್ನೂ ಮಂತ್ರಿಗಳೇ ಮಾಡುವುದಕ್ಕೆ ಆಗುವುದಿಲ್ಲ. ಅಧಿಕಾರಿಗಳಿಗೆ ಅಧಿಕಾರ ಕೊಟ್ಟು ಅವರನ್ನು ವಾಚ್ ಮಾಡುವ ಮನೋಭಾವ ಮಂತ್ರಿಗಳಿಗಿಲ್ಲ. ಆದ್ದರಿಂದ ಈ ಅವಸ್ಥೆಯಾಗಿದೆ. ಅಧಿಕಾರಿಗಳು ಕೆಲಸ ಮಾಡದೆ ಹೋದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂಜರಿಯುತ್ತಿದ್ದಾರೆ.

1-00 P.M.

ಅಧಿಕಾರಿಗಳು ರೆವಿನ್ಯೂ ಇಲಾಖೆಯಲ್ಲಿ ಜಾಸ್ತಿಯಾಗಿದ್ದಾರೆ. ರೆವಿನ್ಯೂ ಇಲಾಖೆಗೆ ಜುಡಿಷಿಯರಿ ತಪ್ಪಿಹೋಗಿದೆ ; ಪೋಲೀಸ್‌ಮೇಲೆ ಹತೋಟಿ ತಪ್ಪಿಹೋಗಿದೆ. ಈಗ ಸರ್ವೆಸೆಟಲ್‌ಮೆಂಟ್ ಕೂಡ ಇವರ ಅಧಿಕಾರದಲ್ಲಿಲ್ಲ. ಅಂತಹದರಲ್ಲಿ ಹೆಚ್ಚು ಹೆಚ್ಚು ಡೆಪ್ಯುಟಿ ಕಮಿಷನರನ್ನು ಮತ್ತು ಅಡಿಷನಲ್ ತಹಸೀಲ್‌ದಾರರನ್ನು ಅಪಾಯಿಂಟ್ ಮಾಡುವುದರಲ್ಲಿ ಅರ್ಥವಿಲ್ಲ. ಅಲ್ಲದೆ ಅಸಿಸ್ಟೆಂಟ್ ಕಮಿಷನರನ್ನು ಪೋಸ್ಟ್‌ಆಫೀಸ್ ಕೆಲಸ ಮಾಡುತ್ತಾರೆ. ಅವರಿಗೆ ಯಾವ ಜವಾಬ್ದಾರಿಯೂ ಇಲ್ಲ. ಅವರುಗಳನ್ನು ತೆಗೆಯಬೇಕೆಂದು ಅನೇಕ ಬಾರಿ ಈ ಸಭೆಯಲ್ಲಿ ಒತ್ತಾಯ ಬಂದಿದೆ. ಅಂತಹುದರಲ್ಲಿ ಇನ್ನೂ ಅಡಿಷನಲ್ ಆಫೀಸರ್‌ಗಳನ್ನು ಹಾಕಬೇಕೆನ್ನುವುದರಲ್ಲಿ ಅರ್ಥವೇನು ? Additional Deputy Commissioner ಮೊದಲನೇ ಡೆಪ್ಯುಟಿ ಕಮಿಷನರ ಕೈಕೆಳಗೆ ಇಲ್ಲ ಡೂಪ್ಲಿಕೇಟ್ ಕೆಲಸವಾಗುತ್ತಿದೆ. ಇನ್ನು ಕೆಲಸದಲ್ಲಿ ಸಾಮರಸ್ಯ ಹೇಗೆ ಬರುತ್ತದೆ ?

ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ಸರ್ವೇಯರನ್ನು ತಾಲ್ಲೂಕುಗಳಿಗೆ ಕೊಟ್ಟರೂ ಕೂಡ, ಅವರು District Survey Officer ಕೈಕೆಳಗೆ ಇರುತ್ತಾರೆ. ತಹಸೀಲ್‌ದಾರರು ಬಂದು ಹೇಳಿದರೆ ಸರ್ವೇಯರು ಬಂದು ಹೇಳುತ್ತಾರೆ. ಏಕೆಂದರೆ ಸಂಬಳ ಕೊಡುವವರು District Survey Officer. ಅದೂ ಅಲ್ಲದೆ District Survey Officer, ಡೆಪ್ಯುಟಿ ಕಮಿಷನರ ಕೈಕೆಳಗೆ ಇಲ್ಲ. ಆದ್ದರಿಂದ ಸರ್ವೇಯರು ತಹಸೀಲ್‌ದಾರ್ ಕೆಳಗೆ ಇಲ್ಲ.

ಕೆಲಸ ಹೆಚ್ಚುಹೆಚ್ಚಾದಾಗ ಹೆಚ್ಚಿಗೆ ಆಫೀಸರುಗಳನ್ನೇನೋ ಇಡಬೇಕು. ಆದರೆ ಕೆಲಸ ಕಡಮೆ ಯಾಗಿದ್ದರೂ ಆಫೀಸರುಗಳು ಹೆಚ್ಚಾಗುತ್ತಾ ಇದ್ದಾರೆ. ಡೆಪ್ಯುಟಿ ಕಮಿಷನರುಗಳ ಡೈರಿ ತೆಗೆದು ಕೊಂಡು ಅವರ ಕೆಲಸ ನೋಡಿ. ತಿಂಗಳಿಗೆ 20 ದಿವಸ ಪ್ರವಾಸ ಬರುವ ಮಿನಿಸ್ಟರುಗಳನ್ನು ಅಟೆಂಡ್ ಮಾಡುವುದಕ್ಕೆ ವಿನಿಯೋಗವಾಗುತ್ತದೆ. ಈ ಒಂದು ಕೆಲಸದಲ್ಲಿ ಅವರ ಬಾಕಿ ಕೆಲಸ ಹಿಂದಕ್ಕೆ ಹೋಗುತ್ತಾ ಇದೆ. ಮೊದಲು ಅಸಿಸ್ಟೆಂಟ್ ಕಮಿಷನರುಗಳು ಒಬ್ಬರಿದ್ದರೆ ಈಗ 4 ಜನ ಇರುತ್ತಾರೆ. 172 ತಾಲ್ಲೂಕುಗಳಿಗೆ ಈಗ ಸುಮಾರು 200 ಜನ ಅಸಿಸ್ಟೆಂಟ್ ಕಮಿಷನರುಗಳಿದ್ದಾರೆ. ಒಂದೊಂದು ಡಿಸ್ಟ್ರಿಕ್ಟಿನಲ್ಲಿಯೂ ಹೆಚ್ಚಿಗೆ ಅಸಿಸ್ಟೆಂಟ್ ಕಮಿಷನರುಗಳು ಇದ್ದಾರೆ ; ಈ ರೀತಿ ಅಧಿಕಾರಿಗಳ ಸಂಖ್ಯೆ ಬೆಳೆಯುತ್ತಾ ಹೋದರೆ ಇದಕ್ಕೆ ಎಲ್ಲಿದೆ ಪರ್ಯವಸಾನ ? ಡಿವಿಜನಲ್ ಕಮಿಷನರ ಆಫೀಸುಗಳನ್ನು ತೆಗೆಯಬೇಕೆಂದು ಹೇಳುತ್ತಲೇ ಇದ್ದೇವೆ ; ಅದು ಸರ್ಕಾರದ ಆಲೋಚನೆಯಲ್ಲಿದೆ ಯೆಂದು ಈ ಸಭೆಯಲ್ಲಿ ಹೇಳುತ್ತಲೇ ಇದ್ದಾರೆ. ಸರ್ವೆ ಸೆಟಲ್‌ಮೆಂಟ್, ಲ್ಯಾಂಡ್ ರಿಕಾರ್ಡ್ಸ್‌ಗೆ ಬೇರೆ ಡೆಪ್ಯುಟಿ ಕಮಿಷನರಿದ್ದಾರೆ ; ಸೆಟಲ್‌ಮೆಂಟ್ ಕಮಿಷನರ್ ಬೇರೆ ಇದ್ದಾರೆ ; ಈ ರೀತಿ ಮಾಡು ವುದರಲ್ಲಿ ಅರ್ಥವಿಲ್ಲ. ಇದನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ಪರಿಶೀಲನೆ ಮಾಡ ಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಕಂದಾಯದ ವಸೂಲಿಯನ್ನು ಸ್ಥಳೀಯ ಸಂಸ್ಥೆಗೆ ವಹಿಸಬೇಕಾದ ಆವಶ್ಯಕತೆ ಇದೆ. ಜನಗಳು ಒತ್ತಾಯದಮೇಲೆ ಕಂದಾಯವನ್ನು ಕೊಡಬಾರದು ; ತಾವೇತಾವಾಗಿ ತಮ್ಮ ಕಂದಾಯವನ್ನು ಒತ್ತಾಯವಿಲ್ಲದೆ ಕೊಡುವ ಮನೋಭಾವ ಬರಬೇಕು. ಈಗಿನ ಕಾಲಕ್ಕೆ ಆ ಮನೋಭಾವ ಅಗತ್ಯ.

ಈಗ ಈ Village Accountantಗಳದು ಒಂದು ಸಮಸ್ಯೆಯಾಗಿದೆ. ಅವರು ಪಂಚಾಯಿತಿಯ ex-officio Secretary ಅಂದರೆ ಅರ್ಥವಿಲ್ಲ. ಅವರನ್ನು ಒಂದು ಪಂಚಾಯಿತಿಗೆ ನೇರವಾಗಿ ಜವಾಬ್ದಾರರನ್ನಾಗಿ ಮಾಡಬೇಕು. 3-4 ಪಂಚಾಯಿತಿಗಳಿಗೆ ಒಬ್ಬ ಸೆಕ್ರೆಟರಿ ಇರಬೇಕೆಂದು

(ಶ್ರೀ ಬಿ. ಹುಚ್ಚೇಗೌಡ)

ಹೇಳಿದ್ದಾರೆ ; ಅದು ನಡೆಯುತಕ್ಕ ಕೆಲಸವಲ್ಲ. ಅವರು ಯಾವ ಒಂದು ಪಂಚಾಯಿತಿಗೂ ಜವಾಬ್ದಾರರಾಗಿರುವುದಿಲ್ಲ. ಅವರು ಒಂದು ಕಡೆ Whole-time ಕೆಲಸ ಮಾಡುವ ಹಾಗೆ ಮಾಡಬೇಕು.

ಈ Land Revenue year July to June ಎಂದು ಮಾಡಿದ್ದಾರೆ. ಬಾಕಿ ಎಲ್ಲಾ ಇಯರ್‌ಗಳೂ April to March ಇರುವಾಗ ಅದನ್ನು ಏಕೆ ಬದಲಾವಣೆ ಮಾಡಿಲ್ಲ ? ರೆವಿನ್ಯೂ ವರ್ಷವನ್ನು ಬದಲಾಯಿಸಿದರೆ ಕಂದಾಯದ ವಸೂಲಿ ಒಂದು ವರ್ಷ ಬದಲಾವಣೆಯಾಗುತ್ತದೆ ; ಅದರಿಂದ ಏನೂ ಕಷ್ಟವಾಗುವುದಿಲ್ಲ ; ಒಂದು ಸಾರಿ ಹಿಂದಕ್ಕೆ ಮುಂದಕ್ಕೆ ಹೋಗಿ, ಪರಿವರ್ತನೆ ಹೊಂದುತ್ತದೆ. Revenue yearನ್ನು ನಮ್ಮ official year ಗೆ ಸರಿಮಾಡಬೇಕು.

ರೂಲ್ಸ್ ಮಾಡುವುದಕ್ಕೆ ಮಸೂದೆಯಲ್ಲಿ ಸರ್ಕಾರದವರು ವಿಶೇಷ ಅವಕಾಶ ಮಾಡಿಕೊಂಡಿದ್ದಾರೆ. ಅವುಗಳನ್ನು ಆಕ್ಟಿನಲ್ಲಿಯೇ ಅಡಕ ಮಾಡಬೇಕು. ಸೆಕ್ಷನ್ 199ರ ಪ್ರಕಾರ ಒಂದನ್ನು ಮಾತ್ರ ಸಭೆಯ ಮುಂದಿಟ್ಟು ಅಪ್ರೂವಲ್ ತೆಗೆದುಕೊಳ್ಳಬೇಕೆಂದಿದೆ. ಒಂದು ಉದಾಹರಣೆ ಹೇಳಬೇಕಾದರೆ ಸರ್ವೆ ಮಾಡಬೇಕಾದರೆ minimum extent ಇಷ್ಟಿರಬೇಕೆಂದು ಸರ್ಕಾರದವರು ನಿಗದಿ ಮಾಡಬಹುದು. ಅದೆಷ್ಟೆಂಬುದನ್ನು ಇದರಲ್ಲಿಯೇ ಏಕೆ ನಿಗದಿ ಮಾಡಬಾರದು ? ಆಕ್ಟಿನಲ್ಲಿಯೇ ಅದಷ್ಟನ್ನು ನಮೂದಿಸುವುದು ಅವಶ್ಯಕ. ರೂಲ್ ಮಾಡುವ ಅಧಿಕಾರವನ್ನು ಸ್ವೇರಿಂಗಾಗಿ ಉಪಯೋಗಿಸಬೇಕು.

ಲ್ಯಾಂಡ್ ರೆವಿನ್ಯೂ ಫಿಕ್ಸ್ ಮಾಡಬೇಕಾದರೆ ಬೆಳೆ ನೋಡಿಕೊಂಡು ಮಾಡಬೇಕೆಂದಿದೆ. ಈ ರೀತಿ ಮಾಡಿದರೆ ಅನೇಕ ಅನ್ಯಾಯಗಳು ಆಗುತ್ತವೆ. ಮೊನ್ನೆ ರಿಸರ್ವೆ ಮಾಡುವಾಗ, ಕೆಲವರು ಖುಷ್ಕಿಯನ್ನು ಬಾಗಾಯಿತು ಮಾಡಿದ್ದಾರೆಂದು ಬರೆದರು ; ಒಂದು ಎಕರೆಯೊಳಗೆ 3-4 ತೆಂಗಿನಮರಗಳಿದ್ದರೆ, 4 ಗುಂಟೆ ಎಂದು ಬರೆದುಬಿಟ್ಟರು. ಅದರಲ್ಲಿ 20 ಕಾಯಿ ಬಿಡುವ ಮರಗಳೂ ಇರುತ್ತವೆ, 200 ಕಾಯಿ ಬಿಡುವ ಮರಗಳೂ ಇರುತ್ತವೆ. ಈ ರೀತಿ ಲೆಕ್ಕ ಹಾಕಿದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. "Provided, if deemed necessary, other factors may be taken into Consideration ಎಂದಿದೆ." "If deemed necessary" ಅನ್ನುವುದು ಏತಕ್ಕೆ ? Marketing facilities. Communication, Standard Rate, ಮುಂತಾದವನ್ನೆಲ್ಲಾ ತೆಗೆದುಕೊಳ್ಳಬೇಕಾದ್ದು ನ್ಯಾಯವೇ. "If deemed necessary" ಎನ್ನುವುದನ್ನು ನಿರ್ಧಾರ ಮಾಡುವವರು ಯಾರು ? ಹಿಂದೆ ಇದು ಎಲ್ಲಾ ಇರಲಿಲ್ಲ. ಲ್ಯಾಂಡ್ ರೆವಿನ್ಯೂ ಫಿಕ್ಸ್ ಮಾಡಬೇಕಾಗಿದ್ದರೆ ಇದನ್ನೆಲ್ಲ ಕನ್‌ಸಿಡರ್ ಮಾಡಬೇಕು. ಮಾರ್ಕೆಟಿಂಗ್ ಫೆಸಿಲಿಟಿ ಇಲ್ಲದೆಹೋದರೆ ತರಕಾರಿ ಕೊಳೆತುಹೋಗುತ್ತದೆ. Communication facilities ಅವಶ್ಯಕ. ರೇಟ್ ಫಿಕ್ಸ್ ಮಾಡುವಾಗ ಎಲ್ಲಾ ಫೆಸಿಲಿಟಿಗಳೂ ರೈತನಿಗೆ ಇವೆಯೇ ಎನ್ನುವುದನ್ನು ನೋಡುವ ಅವಶ್ಯಕತೆ ಇದ್ದೇಇದೆ. ಮೊನ್ನೆ ಯು.ಎನ್.ಏ. ಟೀಮಿನವರು ಒಬ್ಬ ರೈತನನ್ನು ಕಲ್ಕತ್ತದಲ್ಲಿ ಪರೀಕ್ಷೆ ಮಾಡಿದಾಗ ಜಪಾನ್ ಮಾದರಿ ಪದ್ಧತಿಯಿಂದ ಬೆಳೆ ಜಾಸ್ತಿ ಬೆಳೆಯುವುದಕ್ಕೆ ಉಪಕಾರವಾಯಿತು. ಅದರಿಂದ ಒಂದಕ್ಕೆ 1¼ರಷ್ಟು ಬೆಳೆ ಬಂದಿತು ಎಂದು ಒಪ್ಪಿಕೊಂಡ. ಆದರೆ ಅದನ್ನು ಏತಕ್ಕೆ ಕೈಬಿಟ್ಟೆ ಎಂದು ಕೇಳಿದ್ದಕ್ಕೆ, ಹೆಚ್ಚಿಗೆ ಗೊಬ್ಬರ ಹಾಕಿದರೆ ಅದಕ್ಕೆ ತಗುಲುವ ಹೆಚ್ಚು ಖರ್ಚು ಹುಟ್ಟುವುದಿಲ್ಲವೆಂದ, ಏಕೆಂದರೆ ಮಳೆಗಾಲದಲ್ಲಿ ಪೈರನ್ನು ಹೊರಗಡೆ ತೆಗೆದುಕೊಂಡು ಹೋಗುವುದಕ್ಕೆ Communication facility ಇರಲಿಲ್ಲ. Communication ಇಲ್ಲದಿದ್ದರೆ ರೈತರಿಗೆ ಉಪಯೋಗವಾಗುವುದಿಲ್ಲ ; ಅವರು ಮಾಮೂಲಿನಂತೆ ಬೆಳೆದು ಬಂದಷ್ಟನ್ನೇ ತೆಗೆದುಕೊಳ್ಳುತ್ತಾರೆ. ಕಮ್ಯೂನಿಕೇಷನ್ಸ್ ರೈತನಿಗೆ ಬಹಳ ಮುಖ್ಯವಾದುದು. ಲೇಬರರ್ಸ್ ವಿಚಾರಕೂಡ ಹಾಗೆ ಇದೆ. ಆದುದರಿಂದ ಇದನ್ನೆಲ್ಲ ಕನ್‌ಸಿಡರ್ ಮಾಡದೆ ಏಕಾ ಏಕಿ ಹೀಗೆ ಅಸೆಸ್ ಮಾಡುವುದು ಸರಿಯಲ್ಲ. ಆದುದರಿಂದ ಈಗ ಈ ಮಸೂದೆಯಲ್ಲಿ "if deemed necessary" ಎಂದು ಬರೆದಿರುವ ಶಬ್ದಗಳನ್ನು ತೆಗೆದುಹಾಕಬೇಕು.

ಇನ್ನು ಈ ಸೆಟಲ್‌ಮೆಂಟ್ ಆಫೀಸರ ಪ್ರೊಸೀಡಿಂಗ್ಸ್ ವಿಚಾರದಲ್ಲಿ ನೋಟಿಫಿಕೇಷನ್ ಹೊರಡಿಸುವ ವಿಚಾರ ಹೇಳಿದ್ದಾರೆ. ಆದರೆ ಹೀಗೆ ಕೇವಲ ಒಂದು ನೋಟೀಸ್ ಹೊರಡಿಸಿದರೆ ಸಾಲದು. ಈ ನೋಟೀಸು ವಿಚಾರವನ್ನು ಅಸಂಬಂಧಪಟ್ಟ ಹಳ್ಳಿಯಲ್ಲಿ ಟಾಂ ಟಾಂ ಮೂಲಕ ಜನರಿಗೆಲ್ಲ ತಿಳಿಸಬೇಕೆಂದು ಹೇಳುತ್ತೇನೆ. ಆ ನೋಟೀಸನ್ನು ಪಾರ್ಟಿಗೆ ಸರ್ವ್‌ಮಾಡಬೇಕು. ಈ ಬದಲಾವಣೆಗಳನ್ನು ಇಲ್ಲಿ ಮಾಡತಕ್ಕದ್ದು ಅವಶ್ಯಕ. ಇಷ್ಟುಹೇಳಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದಿಟ್ಟಿರತಕ್ಕ ಈ ಲ್ಯಾಂಡ್ ರೆವಿನ್ಯೂ ಕೋಡನ್ನು ನಾನು ಸ್ವಾಗತಮಾಡುತ್ತೇನೆ. ಆದರೆ ಈ ನನ್ನ ಸ್ವಾಗತ ಪೂರ್ಣವಾದುದಲ್ಲ. ಏಕೆಂದರೆ ಈ ದಿವಸ ನಮ್ಮ ರಾಜ್ಯದಲ್ಲಿ ಸೇರಿರತಕ್ಕ ಐದು ಬೇರೆ ಬೇರೆ ಭಾಗಗಳಿಗೆ ಒಂದು ಸಮಗ್ರ ಶಾಸನವನ್ನು ಮಾಡುತ್ತೇವೆಂದು ಹೇಳಿರುವುದರಿಂದ ನಾನಿದನ್ನು ಸ್ವಾಗತ ಮಾಡುತ್ತ ಕೆಲವು ಅಂಶಗಳನ್ನು ಸರ್ಕಾರದವರ ಮುಂದೆ ಇಡಬಯಸುತ್ತೇನೆ.

ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ಲ್ಯಾಂಡ್ ರೆವಿನ್ಯೂ ಕಾನೂನು ಸಾಮಾನ್ಯವಾಗಿ ಆ ಬೊಂಬಾಯಿ ರಾಜ್ಯದ ಲ್ಯಾಂಡ್ ರೆವಿನ್ಯೂ ಕೋಡನ್ನು ಅನುಕರಣೆ ಮಾಡಿದ್ದಾಗಿದೆ. ಈ ಹಿಂದೆ ಇಲಾಖೆಯೆಲ್ಲ ರಾಜ್ಯಕ್ಕೆ ಒಬ್ಬ ರೆವಿನ್ಯೂ ಕಮೀಷನರೂ ಅನಂತರ ಅವರ ಕೆಳಗೆ ಡೆಪ್ಯುಟಿ ಕಮೀಷನರೂ ಮತ್ತೆ ಅವರಕೆಳಗೆ ಒಂದೊಂದು ಜಿಲ್ಲೆಯನ್ನು ಸಬ್‌ಡಿವಿಜರ್‌ಗಳನ್ನಾಗಿ ಮಾಡಿ ಒಂದೊಂದು ಸಬ್ ಡಿವಿಜನ್ನಿಗೊಬ್ಬ ಅಸಿಸ್ಟೆಂಟ್ ಕಮೀಷನರನ್ನೂ ಅವರ ಕೈಕೆಳಗೆ ತಾಲ್ಲೂಕಿಗೊಬ್ಬ ಅಮಲ್ದಾರರೂ ಇರುತ್ತಿದ್ದರು. ಈ ಹಿಂದೆ ರಾಜ್ಯವನ್ನು ಜಿಲ್ಲೆಗಳಾಗಿವಿಂಗಡಿಸಿ, ಆ ಜಿಲ್ಲೆಗಳನ್ನು ಸಬ್‌ಡಿವಿಜರ್‌ಗಳನ್ನಾಗಿ ಭಾಗಮಾಡಿದ್ದರು. ಅಂದರೆ ಈಗಿನ ವ್ಯವಸ್ಥೆಯಲ್ಲಿ ಜಿಲ್ಲೆಗಳೂ ಮತ್ತು ತಾಲ್ಲೂಕುಗಳೂ ಇಷ್ಟೇ ಇರುತ್ತವೆ. ಸಬ್‌ಡಿವಿಜರ್ ವರ್ಗೀಕರಣವನ್ನು ತೆಗೆದುಹಾಕಿದಂತಾಗಿದೆ. ಇದು ಸರಿಯಾಗಿಲ್ಲ. ಹಿಂದೆ ಇದ್ದ ವ್ಯವಸ್ಥೆಯೇ ಚೆನ್ನಾಗಿತ್ತು.

ಕ್ಲಾಜ್ 4ರಲ್ಲಿ ಹೀಗೆ ಹೇಳಲಾಗಿದೆ.

"State to be divided in to Divisions Division into Districts and Districts to consist of Taluks Comprising circles and villages."

ಇದರಲ್ಲಿ ಕೇವಲ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳು ಎಂದು ಇಷ್ಟನ್ನೇಹೇಳಿದೆ. ಇಲ್ಲಿ ಸಬ್‌ಡಿವಿಜರ್‌ಗಳ ಮಾತೇಇಲ್ಲ. ಅಂದರೆ ಇನ್ನು ಮೇಲೆ ಡೆಪ್ಯುಟಿ ಕಮೀಷನರ್ ಅವರ ಕೈ ಕೆಳಗೆ ನೇರವಾಗಿ ಅಮಲ್ದಾರರು ಮಾತ್ರ ಇರುತ್ತಾರೆಂದು ಹೇಳಿದ ಹಾಗಾಯಿತು. ಇನ್ನು ಮೇಲೆ ಈ ಅಮಲ್ದಾರರುಗಳು ಮಾಡಿದ್ದೇ ಕಾನೂನು ಆಡಿದ್ದೇ ಆಟ ಆಗುತ್ತದೆ. ಈ ವಿಚಾರಗಳನ್ನು ನಾವು ನಿತ್ಯವೂ ನೋಡುತ್ತಿದ್ದೇವೆ. ಹಿಂದಿನ ಕಾಲದಲ್ಲಾದರೂ ಇವರಿಗೆ ಕಾನೂನಿನ ಭಯವಿತ್ತು. ಭಯ ಭೀತಿಗಳಿಂದ ಕೆಲಸಮಾಡುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಹಾಗಿಲ್ಲ. ಈ ದಿವಸ ಲಂಚತೆಗೆದುಕೊಳ್ಳದೆ ಸಾಮಾನ್ಯವಾಗಿ ಯಾರೂ ಕೆಲಸ ಮಾಡುವುದಿಲ್ಲ. ಆದರೆ ಲಂಚವಿಲ್ಲದೆ ಕೆಲಸಮಾಡತಕ್ಕವರೂ ಕೆಲವರಿರಬಹುದು. ಹಿಂದಿನ ಕಾಲದಲ್ಲಿ ನಾನು ಹುಡುಗನಾಗಿದ್ದಾಗ ಆ ಶಿರಸ್ತೆದಾರರೇನಾದರೂ ಲಂಚತೆಗೆದುಕೊಂಡರೆ ಜನರು ಆಸುದ್ದಿಯನ್ನು ಪಿಸುಮಾತಿನಲ್ಲಿ ಹೇಳುತ್ತಿದ್ದರು. ಆದರೆ ಈಹೊತ್ತು ಈ ಲಂಚದವಿಚಾರ ಎಲ್ಲೆಲ್ಲೂ ಸಾಮಾನ್ಯವಾಗಿಬಿಟ್ಟಿದೆ. ಅಮಲ್ದಾರರೂ, ಅಸಿಸ್ಟೆಂಟ್ ಕಮೀಷನರೂ ಕೆಲವು ಡೆಪ್ಯುಟಿಕಮೀಷನರೂ ಕೂಡ ನಾನಾ ರೀತಿಯ ಇನ್‌ಫ್ಲುಯೆನ್ಸ್‌ಗಳಿಗೊಳಗಾಗುತ್ತಿದ್ದಾರೇ ಲಂಚತೆಗೆದುಕೊಳ್ಳುತ್ತಿದ್ದಾರೆ. ಆದರೆ ನಮ್ಮಲ್ಲಿ ಅಂಟಿಕರಪ್‌ಷನ್ ಎಂಬ ಒಂದು ಇಲಾಖೆಯೇನೊ, ಇದೆ. ಆದರೆ ಲಂಚಕೊಟ್ಟವನು ಮೊದಲು ಅವರಿಗೆ ತಿಳಿಸಿದರೆ ಆಗ ಅವರು ಬರುತ್ತಾರೆ, ಇಲ್ಲದಿದ್ದರಿಲ್ಲ. ಹೀಗೆ ಇಷ್ಟು ನಿರ್ಭೀತಿಯಿಂದ ಅಧಿಕಾರಿಗಳ ಲಂಚ ರುಷವತ್ತುಗಳನ್ನು ತೆಗೆದುಕೊಳ್ಳುತ್ತಿರುವಾಗ ರಾಜ್ಯದಲ್ಲಿ ರೈತನಿಗೆ ಎಂಥ ರಕ್ಷಣೆಇರಬಹುದು ! ನಾವು ಪ್ರತಿದಿನವೂ ಈ ಡಿ. ಸಿ. ಕೋರ್ಟು, ಸಬ್ ಡಿವಿಜನ್ ಕಮೀಷನರ್ ಆಫೀಸುಗಳಲ್ಲಿ ನೋಡುತ್ತಿದ್ದೇವೆ. ಈ ಕೋರ್ಟುಗಳಲ್ಲಿ ಪೆಂಡಿಂಗ್ ಬಿದ್ದಿರುವ ರೈತನಕೇಸುಗಳು 1-2 ವರ್ಷಗಳಾದರೂ ತೀರ್ಮಾನವಾಗುವಂತಿಲ್ಲ. ಅವುಗಳಿಗೆ ಕಾಲಸಿಗದಿಯೇ ಇಲ್ಲ. ಮನಸ್ಸು ಬಂದರೆ ಕೇಸುಗಳನ್ನು ಕೂಗಿಸುತ್ತಾರೆ, ಇಲ್ಲದಿದ್ದರೆ ಅಡ್‌ಜರ್ನ್ ಮಾಡಿಬಿಡುತ್ತಾರೆ. ಹೀಗಾಗಿ ರೈತನ ಬಗ್ಗೆಯಾವುದೊಂದೂ ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಆಡಳಿತ ಅಷ್ಟು ಹದಗೆಟ್ಟಿದೆ. ರೈತನಿಗೂ ಸರ್ಕಾರಕ್ಕೂ ಒಂದು ನೇರವಾದ ಸಂಪರ್ಕವನ್ನು ಕಲ್ಪಿಸಿಕೊಡತಕ್ಕ ಇಲಾಖೆ ಎಂದರೆ ಅದು ಈ ರೆವಿನ್ಯೂ ಇಲಾಖೆಯೇ. ಆದರೆ ಈ ಇಲಾಖೆಯ ಸ್ವರೂಪಹೀಗಿದೆ ! ನಮ್ಮ R R ದಾಖಲೆಗಳು ಒಂದೂ ಅಪ್-ಟು-ಡೇಟಾಗಿಲ್ಲ. ಕೆಲವು ಸ್ವತ್ತುಗಳು ಮಾರಾಟವಾಗಿ 10–15 ವರ್ಷಗಳಾಗಿದ್ದರೂ ಅವುಗಳ ಖಾತೆ ಬದಲಾವಣೆ ಇನ್ನೂ ಆಗಿರುವುದಿಲ್ಲ. ಕ್ರಯ ರಿಜಿಷ್ಟ್ರು ಆಗತಕ್ಕ ಕಾಲದಲ್ಲಿ ಸಬ್‌ರಿಜಿಸ್ಟರ್ ಆಫೀಸಿನಲ್ಲೇ ಆ ಮ್ಯುಟೇಷನ್ ಫೀ ಇತ್ಯಾದಿ ಕಲೆಕ್ಟ್ ಮಾಡಿಕೊಳ್ಳುತ್ತಾರೆ. ಯಾವುದಾದರೊಂದು ಜಮೀನು ಕ್ರಯರಿಜಿಷ್ಟರ್ ಆದರೆ ಆ ಕೂಡಲೇ ಆ ಸಬ್‌ರಿಜಿಷ್ಟರ್ ಆಫೀಸಿನಿಂದ ದಾಖಲೆಯನ್ನು ರೆವಿನ್ಯೂ ಇಲಾಖೆಗೆ ರವಾನೆಮಾಡಬೇಕು. ಆ ಕೂಡಲೇ ಆ ಸ್ವತ್ತಿನ ಖಾತೆ ಬದಲಾವಣೆಯಾಗಬೇಕೆಂಬುದಾಗಿ ಕಾನೂನಿನಲ್ಲೇನೋ ಇದೆ. ಆದರೆ ಕೃತಿಯಲ್ಲಿ ಕಾಣುತ್ತಿಲ್ಲ. ಸರ್ಕಾರದವರ ಈ ಒಂದು ತಾತ್ಸಾರ ಭಾವನೆಯಿಂದ ಅನೇಕ ಸಂದರ್ಭಗಳಲ್ಲಿ ರೈತನಿಗೆ ಕೋರ್ಟಿನಲ್ಲಿ ಆತನ ಹಕ್ಕಿಗೆ ಧಕ್ಕೆಯುಂಟಾಗಿ ಅನೇಕ ತೊಂದರೆಗಳಾಗಿವೆ. ಮೇಲಾಗಿ ದೇಶದಲ್ಲಿರತಕ್ಕ ಜನರಲ್ಲಿ ಅವಿದ್ಯಾವಂತರೇಜಾಸ್ತಿ. ಹಳ್ಳಿಯ ಜನರು ಒಂದು ಕಾಗದ ಪತ್ರವನ್ನು ಬರವಣಿಗೆಗಾಗಿ ಬೇರೆಯವರನ್ನು ಆಶ್ರಯಿಸಬೇಕಾಗಿದೆ. ರೈತನಿಗೆ ಸರ್ಕಾರದಲ್ಲಿ ಆಗಬೇಕಾದ ಪ್ರತಿಯೊಂದು ವ್ಯವಹಾರಕ್ಕೂ ಆತ ಅನ್ಯರನ್ನು ಅವಲಂಬಿಸಬೇಕಾಗಿದೆ. ರೈತನ ಹಿತರಕ್ಷಣೆಮಾಡತಕ್ಕಂಥ ಶ್ರದ್ಧೆಯುಳ್ಳ ಸರ್ಕಾರ ಈದಿವಸ ಇದೆಯೇ ಎಂದು ನಾನು ಪ್ರಶ್ನಿಸಬೇಕಾಗಿದೆ ? ರೈತನು ಸರ್ಕಾರದಲ್ಲಿ ಬಗೆಹರಿಸಿಕೊಳ್ಳಬಹುದಾದಂಥ ಕೇವಲ ಕೆಲವು ಸಣ್ಣಪುಟ್ಟ ವಿಚಾರಗಳಿಗೂ ಈ ಹೊತ್ತು ಅವನು ಕೋರ್ಟಿನ ಬಾಗಿಲಿಗೆ ಬರಬೇಕಾಗಿದೆ. ಆದರೆ ಇಂಥ ಅನ್ಯಾಯವಾದ ಮಾರ್ಗ

(ಶ್ರೀ ಕೆ. ಎಚ್. ರಂಗನಾಥ್)

ಗಳಲ್ಲಿ ಅನಾವಶ್ಯಕವಾಗಿ ಹಣವನ್ನು ಖರ್ಚುಮಾಡಲು ರೈತನಿಗೆ ಶಕ್ತಿ ಇಲ್ಲ. ಇಂಥ ಅಲ್ಪಸ್ವಲ್ಪ ವಿಷಯಗಳಿಗೆ ಸಂಬಂಧಪಟ್ಟ ಸಾವಿರಾರು ಕೇಸುಗಳು ವರ್ಷಗಟ್ಟಲೆ ಕೋರ್ಟಿನಲ್ಲಿ ಪೆಂಡಿಂಗ್ ಬಿದ್ದಿವೆ. ಆದರೆ ಇಂಥ ಸಣ್ಣಪುಟ್ಟ ವಿಚಾರಗಳಿಗೆಲ್ಲಾ ಸರ್ಕಾರ ರೈತನನ್ನು ಕೋರ್ಟಿಗೆ ಹೋಗುವಂತೆ ಮಾಡಬಾರದು. ಇಂಥಾ ಲೋಪದೋಷಗಳಿಗೆ ಸರ್ಕಾರ ಈ ರೆವಿನ್ಯೂ ಅಧಿಕಾರಿಗಳಮೇಲೆ ಸ್ವಲ್ಪ ಹೆಚ್ಚಿನ ಮುತವರ್ಜಿ ಇಡಬೇಕು. ಅವರಿಗೆ ಆಗಾಗ್ಗೆ ಇಂಥಾ ಅಕ್ರಮ ನಡವಳಿಕೆ, ಅಶ್ರದ್ಧೆಗಳಿಗೆ ಸೂಕ್ತ ಕ್ರಮ ಕೈಗೊಂಡು ಶಿಕ್ಷೆಮಾಡದಿದ್ದರೆ ಅವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆಮಾಡುವುದಿಲ್ಲ.

ತಾಲ್ಲೂಕಿನಲ್ಲಿರುವ ತಹಶೀಲ್ದಾರರು ತಾಲ್ಲೂಕಿನ ಧಣಿಗಳು ಎನ್ನುತ್ತಾರೆ. ಇಂಥವರು ಕಾನೂನನ್ನು ಉಲ್ಲಂಘನೆ ಮಾಡುವುದು ಬಹಳ ಜಾಸ್ತಿಯಾಗಿದೆ. ಇದನ್ನು ಸರ್ಕಾರ ವಿಚಾರ ಮಾಡಬೇಕು.

ಜನತೆಯ ಸಹಕಾರಬೇಕು ಎಂದು ಸರ್ಕಾರ ಹೇಳುತ್ತದೆ. ಜನತೆಯ ಸಹಕಾರವೇನೋ ಇದೆ. ಆದರೆ ಸರ್ಕಾರದ ಸಹಕಾರವೇ ಕಡಮೆಯಾಗಿದೆ. ಮಾಡತಕ್ಕ ತಪ್ಪಿಗೆ ನೇರವಾಗಿ ಯಾರು ಜವಾಬ್ದಾರರೋ ಅವರನ್ನು ಶಿಕ್ಷೆಗೆ ಗುರಿಮಾಡದೆ ಹೋದರೆ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ವರ್ತಿಸುವುದಕ್ಕೆ ಅವಕಾಶಮಾಡಿಕೊಟ್ಟ ಹಾಗಾಗುತ್ತದೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. 1952-53ರಲ್ಲಿ ಮದ್ದೂರು ತಾಲ್ಲೂಕು ನಿಡಘಟ್ಟ ಗ್ರಾಮದ 25 ಹರಿಜನರಿಗೆ ತಲಾ ಎರಡೆರಡು ಎಕರೆಯಂತೆ ಐವತ್ತು ಎಕರೆಗಳ ಪ್ಲಾಟ್ ಒಂದು ಮಂಜೂರಾಗಿದೆ. ಆ ಜಮೀನನ್ನು ಪೋಡ್‌ಮಾಡಿ, ಪ್ರತ್ಯೇಕ ಬ್ಲಾಕ್‌ಗಳಾಗಿ ವಿಂಗಡಿಸಿಕೊಟ್ಟಿಲ್ಲ. 25 ಜನರಿಗೆ ಐವತ್ತು ಎಕರೆ ಎಂದು ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ. ಪಕ್ಕದ ಜಮೀನಿನವರು ಇದರಲ್ಲಿ ಒತ್ತುವರಿ ಮಾಡಿದರು. ಈ ರೀತಿ ಒತ್ತುವರಿ ಮಾಡಿಕೊಂಡಮೇಲೆ ಅದನ್ನು 1958ರಲ್ಲಿ confirm ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಒಂದು ಅಪೀಲ್ ಪಿಟಿಷನ್ ಹಾಕಿದರೆ 1958ನೆಯ ಇಸವಿಯಲ್ಲೇ confirm ಆಗಿರುವುದರಿಂದ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಭೂಮಿಯನ್ನು ಮಂಜೂರು ಮಾಡುವಾಗ ಏನು ಕಾನೂನು ಇದೆಯೋ ಅದರಂತೆ ಅಧಿಕಾರಿಗಳು ಮಂಜೂರು ಮಾಡದೆ ಹೋದರೆ, ಅಂಥ ವಿಚಾರ ಸರ್ಕಾರದ ಗಮನಕ್ಕೆ ಬಂದಾಗ ಅವರಿಗೆ ಶಿಕ್ಷೆ ಮಾಡದೆ ಹೋದರೆ ಎಂಥ ಅವ್ಯವಸ್ಥೆಯಾಗುತ್ತದೆಂಬುದನ್ನು ಯೋಚಿಸಬೇಕು. ಇಂಥದನ್ನು ಸರ್ಕಾರ ವಿಚಾರಮಾಡಬೇಕು. ಇದಲ್ಲದೆ Land grant ಬಹಳ ತಡವಾಗುತ್ತಿದೆ. ಕೆಲವರಿಗೆ ಮಾತ್ರ ಬೇಗ ಮಂಜೂರಾಗುತ್ತದೆ. ಯಾರಿಗೋ ಒಬ್ಬರಿಗೆ ಎರಡೇ ದಿವಸಗಳಲ್ಲಿ ಜಮೀನು ಮಂಜೂರಾಯಿತು ಎಂದು ಶ್ರೀಮಾನ್ ರಾಮೇಗೌಡರು ಹೇಳಿದರು. ಇಂಥ ಸಣ್ಣ ಸಣ್ಣ ಕುಂದುಕೊರತೆಗಳಿವೆ. ರೈತರ ಬಗ್ಗೆ ವಿಶ್ವಾಸ, ನಂಬಿಕೆ ಮತ್ತು ಆಸಕ್ತಿ ಇರುವ ಮಂತ್ರಿಗಳು ಈ ಬಗ್ಗೆ ವಿಚಾರ ಮಾಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

Record of Rights ವಿಷಯ. ಇದು ಬೊಂಬಾಯಿ ಭಾಗದಲ್ಲಿ ಬಹಳ up-to-date ಆಗಿದೆ. ಭೂಮಾಲೀಕನ ದಾಖಲೇ ಬರುತ್ತದೆ. ಅದನ್ನು ಗುತ್ತಿಗೆಗೆ ಪಡೆದಿರುವ ರೈತನ ದಾಖಲೇ ಬರುತ್ತದೆ, ಏನು ಫಸಲು ಹಾಕಿದ್ದಾನೆ ಎನ್ನುವುದೂ ಬರುತ್ತದೆ. ಆದರೆ ನಮ್ಮಲ್ಲಿ Record of Rightsನಲ್ಲಿ ಯಾವ ದಾಖಲೆಯೂ ಸಿಕ್ಕುವುದಿಲ್ಲ. ಪಹಣಿಯನ್ನು ಕೂಡ ಮನೆಯಲ್ಲಿಯೇ ಕುಳಿತುಕೊಂಡು ಬರೆಯುತಕ್ಕ ವ್ಯವಸ್ಥೆ ಇದೆ. ಹಿಂದೆ ಜಮಾಬಂದಿ ಕಾಲದಲ್ಲಿ ರೈತರನ್ನು ತಾಲ್ಲೂಕಾಫೀಸಿಗೆ ಕರೆಸಿ ಪಹಣಿ ಬರೆಯುತಕ್ಕ ವ್ಯವಸ್ಥೆ ಇತ್ತು. ದಿನೇ ದಿನೇ ಅದು ಕಡಿಮೆಯಾಗಿ ಬಹಳ ಅವ್ಯವಸ್ಥೆಗೆ ಕಾರಣವಾಗುತ್ತಿದೆ. ಆದುದರಿಂದ ಸರ್ಕಾರದವರು R. R. ದಾಖಲೆಗಳ ಬಗ್ಗೆ ಮತ್ತು ಪಹಣಿ ದಾಖಲೆಗಳ ಬಗ್ಗೆ ಸ್ವಲ್ಪ ನಿಗಾವಹಿಸತಕ್ಕದ್ದು ಅವಶ್ಯಕವಾಗಿದೆ.

ಜಮೀನು ಮಂಜೂರಾದಮೇಲೆ ಅಪೀಲು ಡಿವಿಜನಲ್ ಕಮಿಷನರಿಗೆ ಹೋಗಬೇಕು. ಅದರ ಆರ್ಡರಿನಮೇಲೆ ಅಪೆಲೆಟ್ ಅಧಿಕಾರವನ್ನು ಸರ್ಕಾರವೇ ಇಟ್ಟುಕೊಂಡಿದೆ. ಎಲ್ಲ ಅಪೀಲು ಅಧಿಕಾರವನ್ನು, ರೆವೆನ್ಯೂ ಅಪಲೆಟ್ ಟ್ರಿಬ್ಯುನಲ್‌ಗೆ ಕೊಟ್ಟಿರುವಾಗ ಇದನ್ನು ಮಾತ್ರ ಸರ್ಕಾರ ಏಕೆ ಇಟ್ಟುಕೊಳ್ಳಬೇಕೆನ್ನುವುದು ಅರ್ಥವಾಗದು. ಇದನ್ನು ಸಹ ಟ್ರಿಬ್ಯುನಲ್‌ಗೇ ಕೊಡುವುದು ಸಾಧುವಾದದ್ದು. ಈಗ ಇದರಲ್ಲಿರುವಂತೆಯೇ ಇದ್ದರೆ ಅದರಿಂದ ಸರ್ಕಾರಕ್ಕೂ ತೊಂದರೆ, ರೈತರಿಗೂ ತೊಂದರೆ ಮತ್ತು ಮಂತ್ರಿಗಳಿಗೆ ಕೆಟ್ಟ ಹೆಸರೂ ಬರುತ್ತದೆ. ಹೇಗೂ ರೆವೆನ್ಯೂ ಅಪಲೆಟ್ ಟ್ರಿಬ್ಯುನಲ್ ಇದೆ. ಆದುದರಿಂದ ಈ ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳುವುದರ ಬದಲು ಟ್ರಿಬ್ಯುನಲ್‌ಗೇ ಕೊಡಬೇಕೆಂದು ಹೇಳುತ್ತೇನೆ.

ವಿಲೇಜ್ ಅಕೌಂಟೆಂಟ್ ಆಗಿ ಕೆಲಸ ಮಾಡುವವರು ಕಂದಾಯವನ್ನು ವಸೂಲ್ಮಾಡಬೇಕು, ಪಹಣಿ ಬರೆಯಬೇಕು, Record of Rights ದಾಖಲೆಯನ್ನಿಡಬೇಕು, ಮತ್ತು ಇದರ ಜೊತೆಗೆ

ಸೆಕ್ರೆಟರಿಯ ಕೆಲಸವನ್ನು ನೋಡಿಕೊಳ್ಳಬೇಕು ಎಂದು ತಿಳಿಸಿದೆ. ಇಷ್ಟೆಲ್ಲ ಕೆಲಸ ಬಹಳ ಜಾಸ್ತಿಯಾಗುತ್ತದೆ. ನಮಗೆ ಬೇಕಾಗುವ ದಾಖಲೆಗಳನ್ನು ಕರಾರುವಾಕ್ಕಾಗಿ ಇಡಲಿಕ್ಕೆ ಈತನಿಗೆ ಸಾಧ್ಯವಾಗುತ್ತದೆಯೇ, ಅದಕ್ಕೆ ಬೇಕಾದ ಕಾಲಾವಕಾಶವಿರುತ್ತದೆಯೇ ಎನ್ನುವುದನ್ನು ವಿಚಾರ ಮಾಡಬೇಕಾದ ಪರಿಸ್ಥಿತಿ ಇದೆ. ಈ ವಿಚಾರವನ್ನು ಸರ್ಕಾರದವರು ಮತ್ತು ಸೆಲೆಕ್ಟ್ ಕಮಿಟಿಯವರು ಪರಿಶೀಲಿಸಬೇಕು ಎಂದು ನಾನು ಮನವಿಮಾಡಿಕೊಳ್ಳುತ್ತೇನೆ.

ಕ್ಲಾಜ್ 15, ಸಬ್ ಕ್ಲಾಜ್ ಎರಡರ ಪ್ರಕಾರ ವಿಲೇಜ್ ಅಕೌಂಟೆಂಟ್ ಆದವನಿಗೆ ನೋಟೀಸ್ ಕೊಡತಕ್ಕದ್ದು, ಮಹಜರ್ ಬರೆಯುವುದು, ಡಿಪೊಸಿಷನ್ ತೆಗೆದುಕೊಳ್ಳುವುದು ಇಂಥ ಮುಖ್ಯವಾದ ಅಧಿಕಾರವಿದೆ. ಇದು ಸಾಧುವಾದುದಲ್ಲವೆಂಬುದು ನನ್ನ ಅಭಿಪ್ರಾಯ. ಇದರ ಬಗ್ಗೆ ಸಹ ಸರ್ಕಾರದವರು ಮತ್ತು ಸೆಲೆಕ್ಟ್ ಕಮಿಟಿಯವರು ವಿಚಾರ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ತಹಸೀಲ್ದಾರರು ಮತ್ತು ಅಡಿಷನಲ್ ತಹಸೀಲ್ದಾರರ ವಿಚಾರವಾಗಿ ಈಗ ನನ್ನ ಮಾನ್ಯ ಮಿತ್ರರುಗಳೆಲ್ಲರೂ ಹೇಳಿದ್ದಾರೆ. ತಹಸೀಲ್ದಾರರಿಗೆ ನೇರವಾಗಿ ರೆವೆನ್ಯೂ ಅಧಿಕಾರ ಇರಬೇಕು ಎಂದು ಇದೆ. ಅಭಿವೃದ್ಧಿಕಾರ್ಯಗಳಿಗೋಸ್ಕರ ತಾಲ್ಲೂಕು ಅಭಿವೃದ್ಧಿ ಮಂಡಲಿ ಇದೆ ; ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಇರುತ್ತಾರೆ, ಡೆಪ್ಯುಟಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಇರುತ್ತಾರೆ. ಇಂಥ ಪರಿಸ್ಥಿತಿ ಇರುವಾಗ ಅಡಿಷನಲ್ ತಹಸೀಲ್ದಾರರನ್ನು ನೇಮಕ ಮಾಡತಕ್ಕ ವ್ಯವಸ್ಥೆ ಸರಿಯಲ್ಲ. ಇವರ ನೇಮಕದ ವಿಚಾರವನ್ನು ಬಿಟ್ಟುಬಿಡಬೇಕು. ಒಂದು ತಾಲ್ಲೂಕಿಗೆ ಒಬ್ಬ ತಹಸೀಲ್ದಾರ್ ಸಾಕು ಎಂದು ನನ್ನ ಭಾವನೆ.

ನಮ್ಮಲ್ಲಿ ಹೋಬಳಿ ಎಂದು ಕರೆಯುತ್ತೇವೆ. ಬೊಂಬಾಯಿ ಕರ್ಣಾಟಕದಲ್ಲಿ ಸರ್ಕಲ್ ಎಂದು ಇದೆ. ಇದು ಬರೀ ಪದಗಳ ಭೇದಗಳು. ಹೆಸರು ಏನಿದ್ದರೂ ಅರ್ಥವೆಲ್ಲ ಒಂದೇ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ಈಗ ಸಬ್ ಡಿವಿಜನ್ ಎಂದು ಏನಿದೆ ಅದು ಇರಬೇಕೆಂದು ನಾನು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಸಬ್ ಡಿವಿಜನ್ ಅಧಿಕಾರಿಗಳಿಲ್ಲದೆ ಹೋದರೆ ತಹಸೀಲ್ದಾರರು ಮಾಡಿದ್ದನ್ನು ಡೆಪ್ಯುಟಿ ಕಮಿಷನರೇ ನೋಡಿಕೊಳ್ಳಲು ಸಾಧ್ಯವಿಲ್ಲ. ಅವರ ಬಹು ಭಾಗದ ಕಾಲ ಮಂತ್ರಿಗಳ ಪ್ರವಾಸದಲ್ಲಿಯೇ ಕಳೆದು ಹೋಗುತ್ತದೆ.

ಡಿವಿಜನಲ್ ಕಮಿಷನರಿಗೆ ಕೆಲಸವಿಲ್ಲ. ಆ ಹುದ್ದೆಗಳನ್ನು ತೆಗೆದುಹಾಕಬೇಕೆನ್ನುವ ಮಾತನ್ನು ಹೇಳುತ್ತಿದ್ದಾರೆ. ಅವರಿಗೆ ಒಂದು ಸ್ಥಾನಮಾನವನ್ನು ಕೊಟ್ಟಿದ್ದಾರೆ. ಈಗ ಅದನ್ನು ಖಾಯಂ ಮಾಡುವುದಕ್ಕೆ ಈ ಮಸೂದೆಯಲ್ಲಿ ಆ ಹುದ್ದೆಗಳನ್ನು ಸೇರಿಸಿದ್ದಾರೆಂದು ನನ್ನ ಭಾವನೆ. ನಾಲ್ಕು ಜನ ಡಿವಿಷನಲ್ ಕಮಿಷನರ್‌ಗಳು revenue head ಆಗಿರತಕ್ಕದ್ದು ಅನಾವಶ್ಯಕ. ಈ ಸ್ಥಾನಗಳು ಇರುವುದು ಸಾಧುವಲ್ಲ. ಈ ಅಧಿಕಾರವರ್ಗಕ್ಕೆ ಮತ್ತು ಅವರಿಗೆ ಬೇಕಾದ ಆಫೀಸ್ ಮತ್ತು ಸಿಬ್ಬಂದಿ ಇವಕ್ಕೆ ಬಹಳ ಖರ್ಚಾಗುತ್ತದೆಯೇ ವಿನಾ ಅದರಿಂದ ಜನಸಾಮಾನ್ಯರಿಗೆ ಏನೇನೂ ಉಪಯೋಗವಾಗುತ್ತಿಲ್ಲ. ಈ ಹುದ್ದೆಗಳನ್ನು ತೆಗೆಯತಕ್ಕದ್ದು ಅವಶ್ಯಕವೆಂದು ನನ್ನ ಭಾವನೆ ಇದನ್ನು ಸರ್ಕಾರ ಮತ್ತು ಸೆಲೆಕ್ಟ್ ಕಮಿಟಿಯವರು ವಿಚಾರ ಮಾಡಬೇಕು.

Land grant ಮಾಡತಕ್ಕದ್ದನ್ನು ರೂಲ್ಸ್‌ನಲ್ಲಿ ಸೇರಿಸುವುದರ ಬದಲು ಆಕ್ಟಿನಲ್ಲಿಯೇ ಸೇರಿಸತಕ್ಕದ್ದು ಉತ್ತಮ. ಎಲ್ಲವನ್ನೂ ರೂಲ್ಸ್‌ನಲ್ಲಿ ಮಾಡುತ್ತೇವೆಂದರೆ ಆಕ್ಟಿಗಿಂತ ರೂಲ್ಸ್ ಜಾಸ್ತಿಯಾಗತಕ್ಕ ಪರಿಸ್ಥಿತಿ ಇದೆ. ಕಾನೂನಿನಲ್ಲಿ 200 ಕ್ಲಾಜ್‌ಗಳಿವೆ. ರೂಲ್ಸ್‌ನಲ್ಲಿ ಅದಕ್ಕಿಂತ ಜಾಸ್ತಿ ಕ್ಲಾಜುಗಳಾಗಬಹುದು. ಆದುದರಿಂದ ರೂಲ್ಸ್‌ನಲ್ಲಿ ಸೇರಿಸಬೇಕೆಂದಿರುವುದನ್ನು ಸಾಧ್ಯವಾದಷ್ಟು ಆಕ್ಟಿನಲ್ಲಿಯೇ ಸೇರಿಸುವುದು ಸೂಕ್ತವೆಂದು ನಾನು ಹೇಳುತ್ತೇನೆ.

ರೆವೆನ್ಯೂ ಇಲಾಖೆಯಲ್ಲಿ ನಡೆಯುವ ಅಶ್ರದ್ಧೆಯೂ ಅನೀತಿಯೂ ಬಹಳ. ಅದಕ್ಕೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adjourn and meet at 8-30 A.M. on the 27th.

The House adjourned at Thirty Minutes past One of the Clock to meet again at Thirty Minutes past Eight of the Clock on Wednesday, the 27th February 1963.

WD 23—GPB—900—26-7-1963